

# ಶ್ರೀ ಕ್ಷೇತ್ರ ಪರಿಚಯ

**22 ಡಿಸೆಂಬರ್ 2010**



# ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಕ್ಷೇತ್ರ, ಎಡೆಯೂರು,
# ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ

ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿ ಇಲಾಖೆಗೆ ಸೇರಿದ ಧಾರ್ಮಿಕ ಸಂಸ್ಥೆಗಳ ಸಾಫ್ಟ್‌ವೇರ್ ಕನ್ನಡ ಭಾಷೆಯಲ್ಲಿ ಅಳವಡಿಸುವ ಬಗ್ಗೆ

# ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರ, ಯಡಿಯೂರು

ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ

**ಸ್ಥಳ ಪರಿಚಯ :**

## ಎಡೆಯೂರು ಶ್ರೀ ಸಿದ್ದಲಿಂಗೇಶ್ವರರ ಐತಿಹ್ಯ

ಶ್ರೀ ಮತ್ಸಕಲಭುವನಾಧೀಶ್ವರ ಶ್ರೀ ಭೂಕೈಲಾಸವಾಸ ಸಕಲ ದೇವತಾರಾಧನೀಯ ಭಕ್ತ ಜನ ಮಂದಾರ ಕಾಮಿತವರ ಪ್ರಧಾನ ಶರಣಾಗತ ಪರಿಪಾಲನಾ ಬಿರಿದಾಂಕಿತ ಭವರೋಗ ವೈದ್ಯ ಕರ್ಮಾರಣ್ಯ ದಹನದವಾನಲ ಆಜ್ಞಾನತಿಮಿರ ಮುನಿ ಪ್ರತಿವ್ರತಾಭೋದನಾಯ ಮಿಹಜನಾಗ್ರಣ್ಯ ಪದವಿನ್ಯಾಸ ಪಾವನೀಕೃತ ನಿಖಿಲ ಭುವನಕುಲ ಸುಲಲಿತಾಮಲ ತೋಂಟದ ಶ್ರೀ ಸಿದ್ದಲಿಂಗೇಶ್ವರಾಂಕಿತ: ಅಪರಿಚ್ಛಿನ್ನ ಅಪಿಲೋಕಾನುಗ್ರಹಾರ್ಥಮಂಗೀಕೃತ ಪರಿಚ್ಛನ್ನತಾಕಾವಯಂ ಶ್ರೀ ಕದಂಬ ನದೀ ತೀರೇ ಮಹಾ ಕ್ಷೇತ್ರ ಶಿವಯೋಗಾನಂದ ವೈಭವೈರ್ವಸಾಮಃ

15 ನೇ ಶತಮಾನದಲ್ಲಿ ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿ ಗೋಸಲ ಪೀಠದ ಚನ್ನಬಸವೇಶ್ವರ ಸ್ವಾಮಿಗಳವರ ಶಿಷ್ಯರಾಗಿ ಗುರುವಿನ ಅಣತಿಯಂತೆ ಲೋಕ ಸಂಚಾರ ಹೊರಟ ಸಿದ್ದಲಿಂಗ ಶಿವಯೋಗಿಗಳು ಪವಾಡಗಳನ್ನೆಲ್ಲ ನಡೆಸುತ್ತಾ ಹಿಮಾಚಲದಿಂದ ಕನ್ಯಾಕುಮಾರಿಯವರೆಗೆ ಶಿವ ಧರ್ಮವನ್ನು ಪ್ರಚಾರ ಮಾಡುತ್ತಾ ಭಕ್ತರ ಅಭೀಷ್ಟದಂತೆ ಕಗ್ಗೆರೆಗೆ ದಯಾಮಾಡಿಸಿದರು. ಕಗ್ಗೆರೆಯ ಭಕ್ತ ನಂಬಣ್ಣನ ಅಭಿಷ್ಟದಂತೆ ಶಿಷ್ಯನ ಮನೆಗೆ ಶಿವಪೂಜೆ ನಿಮಿತ್ತ ಒಪ್ಪಿದ ಕಾಲಕ್ಕೆ ಅಂದಿನ ಕಾಲದ ದರೋಡೆಕೊರರ ಗುಂಪು ಪುರಕ್ಕೆ ನುಗ್ಗಲು ಕಗ್ಗೆರೆ ಪುರ ನಿವಾಸಿಗಳು ಗುಳೇ ಹೊರಟರು. ವೀರಶೈವ ಧರ್ಮದಂತೆ ಬಿನ್ನಹ ಪೂರೈಸದೇ ಹೋಗಬಾರದೆಂಬ ವಿರಕ್ತ ಧರ್ಮಕ್ಕೆ ಅನುಸಾರ ಭಕ್ತನನ್ನು ಕಾಯುತ್ತ ಕುಳಿತು ಶಿವಯೋಗಮಗ್ನರಾದರು. ಹೀಗಿರುವ ಕಾಲಕ್ಕೆ 12 ವರ್ಷದಲ್ಲಿ ಗುರುವಿನ ಮೇಲೆ ಹುತ್ತ ಬೆಳೆದು, ಭಕ್ತ ನಂಬಣ್ಣನ ಹಸುವು ತನಗೆ ತಾನೆ ಹೋಗಿ ಆ ಹುತ್ತದ ಮೇಲೆ ನಿಂತು ಹಾಲು ಕರೆಯುವ ದೃಶ್ಯ ಕಂಡು ದಿಗ್ಮೂಡನಾದ ನಂಬಣ್ಣ ಪುರ ಜನರನ್ನು ಕರೆದುಕೊಂಡು ಹೋಗಿ ಕ್ಷೀರಭೀಷೇಕ, ಜಲಾಭಿಷೇಕಗಳಿಂದ ಹುತ್ತವನ್ನು ಕರಗಿಸಲು ಶಿವಯೋಗಿಗಳನ್ನು ಕಂಡು ಭಯ ಬೀತನಾಗಿ ತಪ್ಪನ್ನು ಮನ್ನಿಸುವಂತೆ ಶಿರಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸಿ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿದನು.ಈ ಸಮಯದಲ್ಲಿ ಎಡೆಯೂರಿನ ಪುರವಾಸಿಗಳು ಪ್ರಾರ್ಥಿಸಿ ಎಡೆಯೂರಿಗೆ ದಯಮಾಡಿಸಬೇಕೆಂದು ಕೋರಿದರು. ಇಲ್ಲಿನ ಗವಿಮಠ, ಚಿತ್ರಮಠದಲ್ಲಿ ಶಿಷ್ಯರಿಗೆ ಷಟಸ್ಥಲಜ್ಞಾನಸಾರಾಮೃತ ಸಾರವನ್ನು ಬರೆದು ಬೋದಿಸಿ ತಮ್ಮ 82 ನೇ ವರ್ಷದಲ್ಲಿ ಕೊಡಗಿಹಳ್ಳಿಯಾರ್ಯ ತಾವು ಪಡೆದ ಮಠದ ಭೂಮಿಯಲ್ಲಿ ಕಟ್ಟಿಸಿಕೊಟ್ಟ ಮಠದಲ್ಲಿ ನಿರ್ವಿಕಲ್ಪ (ಜೀವಂತ) ಶಿವಯೋಗ ಸಮಾಧಿ ಹೊಂದಿದರು. ಅಂದಿನಿಂದ ಇಂದಿನವರೆಗೆ ಸಿದ್ದಲಿಂಗ ಶಿವಯೋಗಿಗಳು ಶಿವಪೂಜಾ ನಿಷ್ಠರಾಗಿ ಅನುಷ್ಠಾನರೂಡರಾಗಿ ಅನೇಕ ಸಿದ್ದಪುರುಷರಿಗೆ ದರ್ಶನವನ್ನು ನೀಡುತ್ತಾ ಬರುತ್ತಿರುವ ದೃಷ್ಠಾಂತಗಳನ್ನು ಸಿದ್ದಿ ಪುರುಷರು, ತಪಸ್ವಿಗಳು ಭಕ್ತರಿಗೆ ಪ್ರಚಾರ ಪಡಿಸುತ್ತಿದ್ದು ಅನೇಕ ಭಕ್ತರು ತಮ್ಮ ಸುಬೀಷ್ಟಗಳನ್ನು ಗುರುವಿನಡಿಯಲ್ಲಿ ಪ್ರಾರ್ಥಿಸುತ್ತಾ ಸುಫಲಗಳನ್ನು ಪಡೆಯುತ್ತಿದ್ದು ಲಕ್ಷೋಪಲಕ್ಷದಲ್ಲಿ ದೇವಾಲಯಕ್ಕೆ ಅಗಮಿಸುತ್ತಿದ್ದಾರೆ. ಇಂದಿಗೆ 539 ವರ್ಷಗಳಿಂದ ಅನುಷ್ಠಾನ ಮಾಡುತ್ತಿರುವ ಗುರುವಿನ ದರ್ಶನವೇ ಸೌಭಾಗ್ಯವಾಗಿ ಭಕ್ತರಿಗೆ ಸುಭೀಷ್ಠಗಳನ್ನು ಕೊಡುತ್ತಿರುವ ಕಾಮಧೇನು ರೂಪವಾಗಿದ್ದಾರೆ.

## ವಿಶೇಷ ಉತ್ಸವಗಳು ಹಾಗೂ ಪೂಜಾ ವಿವರ

1) ಚೈತ್ರ ಶುದ್ದ ಚಂದ್ರಮಾನ ಯುಗಾದಿಯಿಂದ 7ನೇ ದಿನದಂದು ರಥೋತ್ಸವ, ಚೈತ್ರ ಶುದ್ದ ಪಾಡ್ಯದಿಂದ ಪೂರ್ಣಿಮೆಯವರೆಗೆ ವರ್ಷಾವದಿ ರಥೋತ್ಸವ, ಬಾರಿ ದನಗಳ ಜಾತ್ರೆಯು ವೈವಿದ್ಯಮಯವಾಗಿ ಜರುಗಲಿವೆ.



### ಶ್ರೀ ಸಿದ್ದಲಿಂಗೇಶ್ವರರ ಮಹಾ ರಥೋತ್ಸವ

ಯುಗಾಧಿಯ ದಿವಸದಂದು ಮಹಾರಥಕ್ಕೆ ಕಳಸಾರೋಹಣ ನಡೆಯಲಿದ್ದು, ಅಂದಿನಿಂದಲೇ ಪ್ರತಿ ದಿವಸವು ಸಂಜೆ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯವರ ಉತ್ಸವಗಳು ಪ್ರಾರಂಭವಾಗುತ್ತವೆ. ಯುಗಾದಿಯಿಂದ ಚೈತ್ರ ಶುದ್ದ ಸಪ್ತಮಿಯ ದಿವಸ ಅಭಿಜನ್ ಮಹೂರ್ತದಲಿ **ಮಹಾ ರಥೋತ್ಸವ** ಜರುಗಲಿದೆ. ಈ ಮಹಾ ರಥೋತ್ಸವದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸುತ್ತಾರೆ. ಮಹಾ ರಥೋತ್ಸವದ ದಿನ ರಾತ್ರಿ **ಮುತ್ತಿನ ಪಲ್ಲಕ್ಕಿ** ಉತ್ಸವ, ರಥೋತ್ಸವದ 2 ನೇ ದಿನ **ಬಿಲ್ವವೃಕ್ಷ ವಾಹನೋತ್ಸವ** ಹಾಗೂ 3 ದಿನ **ಬೆಳ್ಳಿ ಪಲ್ಲಕ್ಕಿ** ಉತ್ಸವ ಜರುಗುತ್ತಲಿದ್ದು, ಈ 3 ಪ್ರಮುಖ ಉತ್ಸವಗಳು ರಾತ್ರಿಯಿಡಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರುಗುತ್ತಲಿದ್ದು, ಸದರಿ ಉತ್ಸವಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಾತ್ರಿಯಿಡಿ ಭಾಗವಹಿಸುತ್ತಾರೆ.





ಬೆಳ್ಳಿ ಪಲ್ಲಕ್ಕಿ ಉತ್ಸವ

ಮುತ್ತಿನ ಪಲ್ಲಕ್ಕಿ ಉತ್ಸವ

2) ಶ್ರಾವಣ ಮಾಸದ ಕಡೇ ಭಾನುವಾರ ಲಕ್ಷಬಿಲ್ವಾರ್ಚನೆ, ಸಹಸ್ರಕಮಲ ಪೂಜೆ, ಬೆಳ್ಳಿಪಲ್ಲಕ್ಕಿ ಉತ್ಸವ ಜರುಗಲಿದ್ದು, ಈ ವಿಶೇಷ ಸೇವೆಯಲ್ಲಿ ಅತಿ ಹೆಚ್ಚು ಭಕ್ತರು ಪಾಲ್ಗೊಳ್ಳುತ್ತಾರೆ.

3) ಆಶ್ವೀಜ ಶುದ್ದ ಪಾಡ್ಯದಿಂದ ದಶಮಿಯವರೆಗೆ ದಸರಾ ಮಹೋತ್ಸವ ಪ್ರಯುಕ್ತ 9 ದಿವಸಗಳು ಶ್ರೀ ಸಿದ್ದಲಿಂಗೇಶ್ವರರಿಗೆ ರಾಜೋಪಚಾರ, ಮಹಾಮಂಗಳಾರತಿ ವಿಶೇಷವಾಗಿ ಜರುತ್ತದೆ.

4) ಕಾರ್ತೀಕ ಅಮಾವಾಸ್ಯ-ಲಕ್ಷದೀಪೋತ್ಸವ ಮತ್ತು ಬೆಳ್ಳಿಪಲ್ಲಕ್ಕಿ ಉತ್ಸವ , ಕಾರ್ತೀಕ ಮಾಸದಲ್ಲಿ ಶ್ರೀ ಕ್ಷೇತ್ರಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಸ್ವಾಮಿಯವರಿಗೆ ಎಕಾದಶ ರುದ್ರಾಷೇಕ, ರುದ್ರಾಭಿಷೇಕ, ರಾಜೋಪಚಾರ, ಪ್ರಕಾರ ರಥೋತ್ಸವ, ಬೆಳ್ಳಿರಥ ಇನ್ನು ಹಲವಾರು ವಿಶೇಷ ಸೇವೆಗಳನ್ನು ಮಾಡಿಸುತ್ತಲಿದ್ದು, ಕಾರ್ತಿಕ ಮಾಸದ ಭಾನುವಾರ, ಸೋಮವಾರ ದಿವಸಗಳಲ್ಲಿ ಅತಿ ಹೆಚ್ಚು ಜನ ಸಂದಣಿ ಇರುತ್ತದೆ.





ಲಕ್ಷದೀಪೋತ್ಸವ ವಿದ್ಯುತ್ ಅಲಂಕಾರ


ಲಕ್ಷದೀಪೋತ್ಸವ

5) ಧರ್ನುಮಾಸ-ಉಷ:ಕಾಲ ಪೂಜೆ. : ಧರ್ನುಮಾಸದಲ್ಲಿ ಶ್ರೀ ಸಿದ್ದಲಿಂಗೇಶ್ವರರಿಗೆ ಪ್ರಾತ:ಕಾಲ 4 ಗಂಟೆಗೆ ಅಭಿಷೇಕಗಳು ಪ್ರಾರಂಭವಾಗಿ ಸೂರ್ಯೋದಯದ ಒಳಾಗಾಗಿ ಮಹಾ ಮಂಗಳಾರತಿ ಜರುಗುತ್ತದೆ.

6) ಮಹಾ ಶಿವರಾತ್ರಿ–ಜಾಗರಣೆ ಪ್ರಯುಕ್ತ ಶ್ರೀ ಸ್ವಾಮಿಯವರಿಗೆ ರಾತ್ರಿಯಿಡಿ ಸಹಸ್ರ ರುದ್ರಾಭಿಷೇಕ ಜರುಗಲಿದ್ದು, ಸದರಿ ವಿಶೇಷ ಸೇವೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸೇವಾ ಕೈಂಕರ್ಯದಲ್ಲಿ ಭಾಗವಹಿಸುತ್ತಾರೆ.

7) ರಥಸಪ್ತಮಿ–ಬೆಳ್ಳಿ ಉತ್ಸವಮೂರ್ತಿಯ ವಾರ್ಷಿಕೋತ್ಸವವು ಭಕ್ತಾಧಿಗಳು ದೇಣಿಗೆಯಾಗಿ ಬೆಳ್ಳಿ ಉತ್ಸವ ಮೂರ್ತಿಯನ್ನು ಮಾಡಿಸಿ ಸಲ್ಲಿಸಿದ್ದು, ಉತ್ಸವ ಮೂರ್ತಿಯ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಸೇವೆಗಳು ಜರುಗಲಿದ್ದು, ರಾತ್ರಿಯಿಡಿ ಬೆಳ್ಳಿ ಪಲ್ಲಕ್ಕಿ ಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ.

# ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರ, ಎಡೆಯೂರು




**12 ವರ್ಷ ತಪಸ್ಸಿನ ಫೋಟೋ**



**ನಿರ್ವಿಕಲ್ಪ ಶಿವಯೋಗ ಸಮಾಧಿ**

ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರ, ಎಡೆಯೂರು

**ಕ್ಷೇತ್ರದ ಅಂಚೆ ವಿಳಾಸ** : ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರ,
ಎಡೆಯೂರು
ಕುಣಿಗಲ್ ತಾಲ್ಲೂಕು,
ತುಮಕೂರು ಜಿಲ್ಲೆ,
ಪಿನ್ : 572 142

**ಸಂಪರ್ಕಿಸುವ ಅಧಿಕಾರಿ & ವಿಳಾಸ** ಕಾರ್ಯದರ್ಶಿಗಳು,
ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರ,
ಎಡೆಯೂರು,
ಕುಣಿಗಲ್ ತಾಲ್ಲೂಕು,
ತುಮಕೂರು ಜಿಲ್ಲೆ
ಪಿನ್ : 572 142.

**ದೂರವಾಣಿ ಸಂಖ್ಯೆ** 08132– 228223,

**ಫ್ಯಾಕ್ಸ್ ಸಂಖ್ಯೆ:** 08132– 228225

ಇ–ಮೇಲ್ ವಿಳಾಸ – –



–

ನಿರ್ವಿಕಲ್ಪ ಶಿವಯೋಗ ಸಮಾಧಿ



**ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರದಲ್ಲಿರುವ ಮಹಾ ಗೋಪು**



**ಎಡೆಯೂರು ಕ್ಷೇತ್ರದಲ್ಲಿರುವ ಆನೆ**

# ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರ, ಎಡೆಯೂರು.

## ಕ್ಷೇತ್ರದ ಮಾಹಿತಿ

ದೇವಸ್ಥಾನ ತೆರೆಯುವ : ಬೆಳಗ್ಗಿನ ಜಾವ 4–30

ಮುಚ್ಚುವ ಸಮಯ : ರಾತ್ರಿ 9–00 ಗಂಟೆಗೆ

ದೇವಾಲಯವು ಬೆಳಗ್ಗೆ 4–30 ಕ್ಕೆ ತೆರದಲ್ಲಿ ರಾತ್ರಿ 9–00 ಗಂಟೆಯವರೆಗೆ ನಿರಂತರವಾಗಿ ತೆಗೆದಿರುತ್ತದೆ.

## ನಗರ ಪ್ರದೇಶದಿಂದ ಇರುವ ದೂರ

ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರವು ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಯಡಿಯೂರು ಗ್ರಾಮದಲ್ಲಿ ಇರುತ್ತದೆ. ಇದು ಬೆಂಗಳೂರು–ಹಾಸನ–ಮಂಗಳೂರು ರಾಷ್ಟ್ರೀಯ ಹೆದ್ದಾರಿ 48 ರ ಪಕ್ಕದಲ್ಲಿದ್ದು, ಬೆಂಗಳೂರಿನಿಂದ 90 ಕಿ.ಮಿ. ದೂರದಲ್ಲಿ ಹಾಗೂ ಜಿಲ್ಲಾ ಕೇಂದ್ರವಾದ ತುಮಕೂರಿನಿಂದ 60 ಕಿ.ಮಿ. ದೂರದಲ್ಲಿ ಮೈಸೂರಿನಿಂದ ಸುಮಾರು 120 ಕಿ.ಮಿ. ಹಾಸನದಿಂದ ಸುಮಾರು 100 ಕಿ.ಮಿ. ದೂರದಲ್ಲಿದೆ. ಹಾಗೂ ತಾಲ್ಲೂಕು ಕೇಂದ್ರ ಕುಣಿಗಲ್‌ನಿಂದ 18 ಕಿ.ಮಿ. ದೂರದಲ್ಲಿರುತ್ತದೆ. ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರವು ರಾಷ್ಟ್ರೀಯ ಹೆದ್ದಾರಿ 48 ರಿಂದ 2 ಪರ್ಲಾಂಗ್ ದೂರದಲ್ಲಿದೆ.

## ಹತ್ತಿರದ ಬಸ್ ನಿಲ್ದಾಣ

ಎಡೆಯೂರು ಬಸ್ ನಿಲ್ದಾಣವು ರಾಷ್ಟ್ರೀಯ ಹೆದ್ದಾರಿ 48 ರಲ್ಲಿದ್ದು, ದೇವಾಲಯಕ್ಕೆ ತುಂಬಾ ಹತ್ತಿರದಲ್ಲಿದೆ. ಬೆಂಗಳೂರು–ಹಾಸನ–ಮಂಗಳೂರು ಮಾರ್ಗದಲ್ಲಿ (ಎನ್.ಹೆಚ್. 48) ದಿನದ 24 ಗಂಟೆಗಳು ಬಸ್ ಸಂಚಾರವಿರುತ್ತದೆ. ಎಡೆಯೂರಿಗೆ ಕ್ಷೇತ್ರಕ್ಕೆ ಬರುವ ಬಸ್‌ಗಳು, ಕಾರ್, ಇತರೆ ವಾಹನಗಳು ದೇವಾಲಯದ ಮುಂಭಾಗಕ್ಕೆ ಬರಬಹುದು. ವಾಹನಗಳ ನಿಲುಗಡೆ ವ್ಯವಸ್ಥೆ ಇರುತ್ತದೆ. ಹಾಗೂ ಕೆಲವು ಕೆ.ಎಸ್.ಅರ್.ಟಿ.ಸಿ. ಬಸ್‌ಗಳು ಹಾಗೂ ಖಾಸಗಿ ವಾಹನಗಳು ಪ್ರತಿ ದಿವಸ ದೇವಾಲಯದ ಹತ್ತಿರಕ್ಕೆ ಬಂದು ಹೋಗುತ್ತವೆ.

## ಹತ್ತಿರದ ರೈಲು ನಿಲ್ದಾಣ

ತುಮಕೂರು ರೈಲು ನಿಲ್ದಾಣವು ಎಡೆಯೂರು ಕ್ಷೇತ್ರಕ್ಕೆ ಸುಮಾರು 60 ಕಿ.ಮಿ. ದೂರದಲ್ಲಿದ್ದು, ಹತ್ತಿರದ ನಿಲ್ದಾಣವಾಗಿದೆ. ತಿಪಟೂರು ರೈಲು ನಿಲ್ದಾಣ ಸುಮಾರು 60 ಕಿ.ಮಿ. ದೂರದಲ್ಲಿದೆ. ನಂತರ ಬೆಂಗಳೂರು ರೈಲು ನಿಲ್ದಾಣ 90 ಕಿ.ಮಿ. ದೂರದಲ್ಲಿದೆ. ಹಾಸನ ರೈಲು ನಿಲ್ದಾಣ ಸುಮಾರು 100 ಕಿ.ಮಿ. ಮೈಸೂರು ರೈಲು ನಿಲ್ದಾಣ ಸುಮಾರು 120 ಕಿ.ಮಿ. ದೂರದಲ್ಲಿದೆ.

## ಹತ್ತಿರದ ವಿಮಾನ ನಿಲ್ದಾಣ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಎಡೆಯೂರು ಕ್ಷೇತ್ರಕ್ಕೆ ಹತ್ತಿರದ ವಿಮಾನ ನಿಲ್ದಾಣವಾಗಿರುತ್ತದೆ.

| ವಿಮಾನ ನಿಲ್ದಾಣದ ಹೆಸರು | ದೇವಸ್ಥಾನದಿಂದ ಇರುವ ದೂರ |
|---|---|
| ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಸುಮಾರು 125 ಕಿ.ಮಿ. |
| ಮಂಗಳೂರು ವಿಮಾನ ನಿಲ್ದಾಣ | ಸುಮಾರು 250 ಕಿ.ಮಿ. |

**ವಸತಿ ಗೃಹಗಳ ವ್ಯವಸ್ಥೆ**



**ಯಾತ್ರಿ ನಿವಾಸ ಕಟ್ಟಡ**

1) ಎ. ಮಾದರಿ ವಸತಿ ಗೃಹಗಳು 10
2) ಬಿ. ಮಾದರಿ ವಸತಿ ಗೃಹಗಳು 16
3) ಸಿ. ಮಾದರಿ ವಸತಿ ಗೃಹಗಳು 12
4) ಡಿ. ಮಾದರಿ ವಸತಿ ಗೃಹಗಳು 54
5) ಯಾತ್ರಿ ನಿವಾಸದ ಕೊಠಡಿಗಳು 36
6) ಸಭಾ ಭವನ 1
7) ಶ್ರೀ ಶಾಮನೂರು ಅತಿಥಿ ಗೃಹ (1)
8) ಶ್ರೀ ಶಾಮನೂರು ಅತಿಥಿ ಗೃಹ (2)

## ಹತ್ತಿರದ ನದಿ ಕೆರೆ ಹಾಗೂ ಡ್ಯಾಂ

1) ಎಡೆಯೂರು ಗ್ರಾಮದ ಹಿಂಬಾದಲ್ಲಿ ಮಾರ್ಕೋನಹಳ್ಳಿ ಡ್ಯಾಂನ ಬ್ಯಾಕ್ ವಾಟರ್ ಇರುತ್ತದೆ.
2) ಸುಮಾರು 6 ಕಿ.ಮಿ. ದೂರದಲ್ಲಿ ಮಾರ್ಕೋನಹಳ್ಳಿ ಡ್ಯಾಂ ಇರುತ್ತದೆ
3) 4 ಕಿ.ಮಿ. ದೂರದಲ್ಲಿ ಮಂಗಳಾ ಜಲಾಶಯ ಹಾಗೂ ಡ್ಯಾಂ ಇರುತ್ತದೆ.

## ಹತ್ತಿರದ ವಾಣಿಜ್ಯ ಬ್ಯಾಂಕ್‌ಗಳು

ಎಡೆಯೂರು ಕ್ಷೇತ್ರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆ ಇರುತ್ತದೆ, ಹಾಗೂ ಎ.ಟಿ.ಎಂ. ಸೌಲಭ್ಯ ಇರುತ್ತದೆ. ಎಡೆಯೂರು ಕ್ಷೇತ್ರವು ಈ ಬ್ಯಾಂಕಿನಲ್ಲೆ ವ್ಯವಹಾರ ನಡೆಸುತ್ತಿದೆ.

## ಸಾಂಸ್ಕೃತಿಕ ಚಟುವಟಿಗಳು

ಶ್ರೀ ಕ್ಷೇತ್ರದ ವತಿಯಿಂದ ಏರ್ಪಡಿಸಲಾಗುತ್ತಿದೆ. ಜಾತ್ರೆ ಹಾಗೂ ಲಕ್ಷದೀಪೋತ್ಸವ ಕಾರ್ಯಕ್ರಮಗಳಲ್ಲಿ ವಚನ, ನೃತ್ಯ, ಸಂಗೀತ, ಭಜನೆ, ನಾಟಕಗಳು ಇತ್ಯಾಧಿಗಳನ್ನು ಏರ್ಪಡಿಸಲಾಗುತ್ತಿದೆ.

## ವಿವಿಧ ಕಾಲ / ದಿನಗಳಲ್ಲಿ ಭೇಟಿ ನೀಡುವ ಭಕ್ತಾದಿಗಳ ಅಂದಾಜು ಸಂಖ್ಯೆ

ಎಡೆಯೂರು ಶ್ರೀ ಸಿದ್ದಲಿಂಗೇಶ್ವರರು ಸೋಮವಾರದ ದೇವರಾದ್ದರಿಂದ ಆ ದಿನ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ವಿವಿಧ ಸಂದರ್ಭದಲ್ಲಿ ಬರುವ ಭಕ್ತಾಧಿಗಳ ಸಂಖ್ಯೆ ಕೆಳಕಂಡಂತೆ ಇರುತ್ತದೆ.

| | |
|---|---|
| ಪ್ರತಿ ದಿನ | ಸುಮಾರು 500 ರಿಂದ 1000 |
| ಶನಿವಾರ, ಭಾನುವಾರ | ಸುಮಾರು 1000 ರಿಂದ 2000 |
| ಸರ್ಕಾರಿ ರಜಾ ದಿನಗಳಲ್ಲಿ | ಸುಮಾರು 5000 ರಿಂದ 10,000 |
| ಕಾರ್ತಿಕ ಮಾಸದಲ್ಲಿ | ಸುಮಾರು 5000 ರಿಂದ 10,000 |
| ಶ್ರಾವಣ ಮಾಸ | ಸುಮಾರು 5000 ರಿಂದ 10,000 |
| ಲಕ್ಷದೀಪೋತ್ಸವದ ದಿವಸ ಸುಮಾರು | ಸುಮಾರು 25,000 |
| ಮಹಾ ರಥೋತ್ಸವದ ದಿವಸ | ಸುಮಾರು 40,000 |

## ದೇವಾಲಯಕ್ಕೆ ದೇಣಿಗೆ

ದೇಣಿಗೆ ಕೊಡುವವರು ಹಣದ ರೂಪದಲ್ಲಿ ಮಾನಿಯಾರ್ಡರ್, ಚೆಕ್, ಡಿ.ಡಿ. ಚಿನ್ನ, ಬೆಳ್ಳಿಯನ್ನು ದೇಣಿಗೆಯನ್ನಾಗಿ ಕೊಡಬಹುದು.

## ವೈದ್ಯಕೀಯ ಸೌಲಭ್ಯಗಳು

ಎಡೆಯೂರು ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಸುಮಾರು 1 ಕಿ.ಮಿ. ಇರುತ್ತದೆ. ಹಾಗೂ ಖಾಸಗಿ 2 ಕ್ಲೀನಿಕ್‌ಗಳು ಇರುತ್ತವೆ. ಅದಲ್ಲದೆ ಸುಮಾರು 18 ಕಿ.ಮಿ. ದೂರದ ಕುಣಿಗಲ್‌ನಲ್ಲಿ ಸಮುದಾಯ ಆರೋಗ್ಯ ಕೇಂದ್ರ, ಖಾಸಗಿ ನರ್ಸಿಂಗ್ ಹೋಂಗಳು ಹಲವಾರು ಇರುತ್ತವೆ. ಮತ್ತು ಅದು ಚುಂಚನಗಿರಿ ಸಂಸ್ಥಾನ ಮಠಕ್ಕೆ ಸೇರಿದ ಆದಿ ಚುಂಚನಗಿರಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರ ಸುಮಾರು 20 ಕಿ.ಮಿ. ದೂರದಲ್ಲಿ ಇರುತ್ತದೆ.

## ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರದಲ್ಲಿರುವ ವಿದ್ಯಾ ಸಂಸ್ಥೆಗಳು

1) ಶ್ರೀ ಸಿದ್ದಲಿಂಗೇಶ್ವರ ಸಂಸ್ಕೃತ ವೇದ, ಜ್ಯೋತಿಷ್ಯ ವೀರಶೈವಾಗಮ ಪಾಠಶಾಲೆಯು ಕ್ಷೇತ್ರದ ಆಡಳಿತಕ್ಕೊಳಪಟ್ಟಿರುತ್ತದೆ. ಸದದರಿ ಪಾಠಶಾಲೆಯು ಅನುಧಾನಕ್ಕೊಳಪಟ್ಟಿದ್ದು, ಸಂಸ್ಕೃತ ವೇದ, ಜ್ಯೋತಿಷ್ಯ ವೀರಶೈವಾಗಮ ಕಲಿಯುವ ಮಕ್ಕಳಿಗೆ ಅನೂಕಲ ಕಲ್ಪಿಸಲಾಗಿದೆ.

2) ಶ್ರೀ ಸಿದ್ದಲಿಂಗೇಶ್ವರ ಸಂಯುಕ್ತ ಪದವಿ ಪೂರ್ವ ವಿದ್ಯಾಲಯ ಇದು ಕ್ಷೇತ್ರದ ಆಡಳಿತಕ್ಕೊಳಪಟ್ಟಿದ್ದು, ಪ್ರೌಡಶಾಲೆ ಹಾಗೂ ವಾಣಿಜ್ಯ ಮತ್ತು ಕಲಾ ವಿಭಾಗಗಳಿರುತ್ತವೆ.

## ಎಡೆಯೂರು ಸಿದ್ದಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿರುವ ಶಿಲಾ ಶಾಸನ ಕಲ್ಲು & ಲೇಖನ



1. ಕೊಡಗಿಹಲಿಯ ದೇವರುತಾ ಉಪಡದಮಠದಭೂಮಿಯಲಿತೋಂಟದಸ್ವಾಮಿ
2. ಗೆತಮಭಕ್ತಿಯಿಂದಾಕಟ್ಟಿಸಿಕೊಟ್ಟಮಠುಒಮಹಶಿದ್ದೇಶ್ವರನತಸಯವೆಂತೆಂದ
3. ಡೆಶ್ರೀಮತುಸಚಿದಾನಂದನಿತ್ಯಪರಿಪೂರ್ನವನುಳ್ಳನಾದಿಭಕ್ತ ಆಭಕ್ತ ನಹ್ರುದೆಯಲ್ಲಿಜಂ
4. ಗಮಜಂಗಮದಮಕುಟದಲ್ಲಿಶುನ್ಯಲಿಂಗಾಲಿಂಗದಲ್ಲಿಚಿದಂಬರಶಿವಭಕ್ತಿಪಂಚ
5. ಶಕ್ತಿ ಪಂಚನಾದಪಂಚಬೃಂಹಯಿಶ್ವರಾಷ್ಟಕಮಹೇಶ್ವರಪಂಚವಿಂಸತಿರುದ್ರರೇಕಾ
6. ದಶತ್ರಯವಯಹಿರಂಣ್ಯಗರ್ಭವಿರಾಟಮೂರ್ತಿಯಿಂತೀಯೆಂಭತೊಂದುಮೂರ್ತ್ತಿ
7. ಯೆಅಂಗವಾಗಿರ್ಪಾತನೇಅನಾದಿಭಕ್ತನುಆಭಕ್ತನುಪ್ರಾಣಕಳಾಚೈತಂನ್ಯಸ್ವ
8. ರೂಪೇತೋಂಟದಸಿದ್ದಲಿಂಗೇಶ್ವರನುಆಸಿದ್ದಲಿಂಗೇಶ್ವರನಮೂರ್ತಿಕ್ರಮವೆಂತೆಂದ
9. ಡೆಪ್ರಣಮವೆಶಿರಸುನಮಸಾರಾವೇಭುಜಶಿಕಾರವೇದೇಹವಯುಷ್ಕಾರವೆಪಾದನಂ
10. ತಕೋಟಿಬ್ರಂಹ್ಮಾಂಡಗಳೇಮಕುಟಸಮಸ್ತಲೋಕಾದಿಲೋಕಂಗಳೇದೇಹದಜಳವ
11. ಳೆಯಾಕಾಶವೇಮೂಕದಕಶದಿಕ್ಕುಗಳೇತೋಳುಚಂದ್ರಸೂರ್ಯ್ಯಾದಿಗಳೇನಯನಪಾತಾಳ
12. ವೇಹೆದವೇಘಂಗಳೇಜಟಾಬಂಧಾಜಟಾಬಂಧದಲ್ಲಿಸೂನ್ಯಲಿಂಗವೇದಪುರಾಣಂಗಳೇಕ್ರೀನಾ
13. ಕ್ಷತ್ರಂಗಳೇಪುಷ್ಪಚಂದ್ರಪ್ರಕಾಸವೇವಿಭೂತಿಅಷ್ಟಕುಲಪರ್ವತಂಗಳೇರುದ್ರಾಕ್ಷಸಪ್ತ ಸಮುದ್ರಂಗ
14. ಳೇಕಮಂಡಲಭುವನಶ್ರುಷ್ಟಿಎಕಂತೆದಿವರಾತ್ರೆಗಳೇಮಠಷಡುರುತಗಳೆಷಡುಸ್ಥಲಮಹಾಸೇ

15. ಷನೇಕಟಿಸೂತ್ರಪರಿಪೂರ್ನ್ನಗ್ನಾನವೇಪಂಚಮುದ್ರೆತ್ರಿಕಾಲಜ್ಞಾನವೇಮಹದೈಶ್ವರ್ಯಮಹಾ

16. ಮೇರುವೆದಂಡಸದ್ಗುಣವೇಕರ್ಪರಕುಲವೆಶಿವಕುಲಯಿಂತಪ್ಪನಾದಿಜಂಗಮವೆ

17. ಜಗಹಿತಾರ್ಥ್ಥವಾಗಿಚರಿಸಿದಕ್ರಮವೆಂತೆಂದರೆಗ್ನಾನಕ್ರಿಯಾಸ್ವಪರೂಪನುಸರ್ವಾಂಗಲಿಂ

18. ಗಿಷ್ಟಟ್ಸ್ಥಲಗ್ನಾನಿಸರ್ವಾಚಾರಸಂಪಂನ್ನಪಾದೋದಕಪ್ರಸಾಧಪ್ರತಿಷ್ಟಾಚಾರ್ಯ್ಯರು

19. ಅಷ್ಟಾವರಣಾಲಂಕರಣದ್ವೈತತಿಮಿರಮಾರ್ತಾಂಡನು ಯಿಂತಪ್ಪದಿವ್ಯಶಿವಯೋಗಿಸಿದಲಿ

20. ಂಗೇಶ್ವರಂಗೆಸುಮ್ಯಗ್ನಾನೋದಯುವಾಗಿಸಂಸಾರಹೇಹಮಂಮಾಡಿಶರಣುಹೊಕ್ಕಸಿಷ್ಯಜನಂ

21. ಗಳನಾಮಪರಿಕ್ರಮಂಗಳಂತೆಂದಡೆಸಪ್ಪೆದೇವರುಉಪ್ಪಿನಹಳ್ಳಿಯಸಾವಿ ಸಿದ್ದೆದೇವರುನಂಜೇ

22. ದೇವರುಬೋಳಬಸರಾಜದೇವರುಗುಂಮಳಪುರದಸಿದ್ದಲಿಂಗದೇವರುಪಟಣದೇವರು

23. ರೇವಣಸಿದ್ದೇದೇವರುಸೀಲವಂತದೇವರುಚಿಟ್ಟಿಗದೇವರುಯಿಂತಿವರುಮುಕ್ಯವಾದಭಕ್ತಮಾ

24. ಹೇಸ್ವರಗ್ಗ್ರೆಷಡುಸ್ಥಲಗ್ನಾನಲಿಂಗಾಂಗಸಂನಂಧಸಮರಸೇಕಾರ್ತ್ತಮಂಭೋಧಿಸಿಮುಕ್ತರಂ

25. ಮಾಡಿಷಡುಸ್ತಲಯೇಕಾರ್ತವಾಗಿಮಾಡುವತ್ರಿಗಳೆಲ್ಲಾನಿಷ್ಪತಿಯಾಗಿಯೆಡೆಯೂರಲ್ಲಿತಮಗೆ

26. ಕಟ್ಟಿಸಿದಮಟದಲ್ಲಿಸಿವಯೋಗಸಮಾಧಿಸಂನರ್ದ್ಧರಾದರುತೋಂಟದಸ್ವಾಮಿಯಪಾದಪದ್ಮರಾ

27. ದಕಕರಾದಾದಾ ನಿವಾಸನಿವಾಸಿಗಳಾದ ಚೆಂನರಾಯುವಡೆಯರುಚೆಂನಾರಾಯುವಡೆಯರ

28. ಮಕ್ಕಳುಲಿಂಗಪ್ಪವಡೆಯರಮಕ್ಕಳುಪಾದೋದಕಪ್ರಸಾದಸಂಪನ್ನರಾದಚೆನ್ನವೀರಪ್ಪವಡೆಯ

29. ರುಚೆಂನವೀರಪ್ಪವಡೆಯರಸತಿಪರ್ವತಂಮದಂಪತಿಗಳುತಂಮಭಕ್ತಿಯಿಂದತೋಂಟದಶ್ವಾಮಿ

30. ಗೆಕಲ್ಲಮಟವಕಟ್ಟಬೇಕೆಂದುಚಟ್ಟಿಗದೇವರಿಗೆಪದಾರ್ತಮಂನಮಸ್ಕಾರಮಂಮಾಡಲಾಗಿಭಕ್ತಿ

31. ದಾರ್ತಮಂಕ್ಯೆಕೊಂಡಿಯೆಡೆಯೂರಿಗೆಬಿಜಯಂಗೆಯಿದಂತೋಂಟದಶ್ಯಾಮಿಗೆಕಲ್ಲಮಟವನು

32. ಯೆಂಟುಜಡೆಯುಬಗೆಯುಹಿರಿಯರುಚಿಟ್ಟಿಗದೇವರುಕಟ್ಟಿಸಿದರುಯೆಡೆಯೂರುಸ್ತಲದಲಿಆದಕೊ

33. ಡಗಿಮಾನ್ಯನಿತ್ಯಾಬಂದಕಾಣಿಕೆಸೀಮೇಮೇಲೆತಂದನಂದದೀಪದಕಾಣಿಕೆಯಿಷ್ಟುಯಿಮಟದಹಿ

34. ರೀರುಪಚೆಕಂತೆಯುಚೆನಮಲ್ಲಿಕಾರ್ಜುನದೇವರದುಯೆಂಟುಜಡೆಯುಬಗೆಯುಹಿರೀರುಚಿಟ್ಟಿಗದೇವ

35. ರುಪಡದಪುರವರ್ಗವುಸಹಮುಕದಲ್ಲಿಬಂದಕಾಣಿಕೆತೋಂಟದಶ್ವಾಮಿಯುದಾಸೋಹದದ್ರವ್ಯ

36. ಯಿಮಟದಲ್ಲಿತೋಂಟದಶ್ವಾಮಿಯುದಾಸೋಹವನುಚಿಟ್ಟಿಗದೇವರುಯಿಡ್ಸಿದಆ ದದಲಿವಡೆಯ

37. ರುಭಕ್ತರುವಪ್ಪದಸತ್ಪೂರಸರುಯಿದಾಸೋಹವನುಮಾಡುವರುಯಿದ್ರವ್ಯತೋಂಟದಶ್ವಾಮಿಯು

38. ದಾಸೋಹಕ್ಕೆ ಸಲುವದುಅರಿಗುವರ್ಗಪಾರಂಪರಿಗೆಸಲ್ಲದುಸಜ್ಜನಸತ್ಪರುಸರಯಿಮಟದಲಿಯಿ

39. ಪದಾರ್ತವನುಭವಿಸುವರುಯಿಮಠದಲ್ಲಿಕಟ್ಟಿಸಿದಅಡಿಗೆಮನೆಉಗ್ರಾಣದಮನೆಯೂಈತೊಟದ

40. ಸ್ವಾಮಿಯದಾಸೋಹಕ್ಕೆಸಲುವದು.

ಶ್ರೀ ಸಿದ್ದೇಶ್ವರ.

# ಶ್ರೀ ಸಿದ್ದಲಿಂಗೇಶ್ವರ ಮಹಾತ್ಮೆ

**ನಿರಂಜನ ಗಣೇಶ್ವರರೇ ಸಿದ್ದಲಿಂಗೇಶ್ವರರಾಗಿ**

## 1. ಅವತರಿಸುವಿಕೆ

ಸಮಸ್ತ ಲೋಕಾಧಿಕೋಕಂಲಿಲ್ಲದಂದು, ಅನಾದಿ ಪರಶಿವ ನೀನೊಬ್ಬನೆ ಇದ್ದಯಯ್ಯಾ ಆ ನಿರಾಕಾರ ಪರವಸ್ತುವಿನಿಂದ ನಾನು ಉದಯವಾಗಿ ಮಾಯಾರಂಜನೆ ಹುಟ್ಟ ಮುನ್ನನಿರಂಜ ನನೆಂಬ ಗಣೇಶ್ವರನಾಗಿರ್ದೆನು. ಜ್ಞಾನಂ ಜ್ಞಾನಂಗಲಿಲ್ಲದಂದು ಜ್ಞಾನಾನಂದನೆಂಬ ಗಣೇಶ್ವರ ನಾಗಿರ್ದೆನಂದೀ ಶರೀರವಿಲ್ಲದಂದು ನಿರ್ಮಲನೆಂಬ ಗಣೇಶ್ವರನಾಗಿರ್ದೆನು. ಬಸವ ಮೊದಲಾದ ಪ್ರಮಥರೆಲ್ಲರ ಪ್ರಸಾದವನು ಎನ್ನಲ್ಲಿ ಸಂಬಂಧಿಸಿ ನಿನ್ನ ಕೃಪಾ ಪ್ರಸಾದವೆನೆನ್ನಲ್ಲಿ ಮೂರ್ತಿ ಗೊಳಿಸಿ ಇನ್ನಾವುದಕ್ಕೂ ಅಂಜಬೇಡವೆಂದು ನೀನು ನಿನ್ನ ಪ್ರಮಥರು ಎನ್ನ ಆಜ್ಞಾಪಿಸಿ ಮರ್ತ್ಯಕ್ಕೆ ಕಳುಹಿದಿರಿಯಾಗಿ ಕಳುಹಿಸಿದ ಭೇದವ ಶಿವಜ್ಞಾನೋದಯದಿಂದ ಅರಿದು ಸಿದ್ದಲಿಂಗನೆಂಬ ನಾಮವೆನಗೆ ನಿನ್ನಿಂದ ಬಂದಿತ್ತೆಂಬುದನರಿದೆನು ಕಾಣಾ ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ.

**(ಸಿದ್ದೇಶ್ವರ ವಚನ)**

ಲೋಕೋಪಕಾರಕ್ಕೋಸ್ಕರ ನಿರಂಜನ ಗಣೇಶ್ವರನು ಭೂ ಲೋಕದಲ್ಲಿ ಅವತರಿಸಿ, ಭೂಲೋಕದಲ್ಲಿ ಖಿಲವಾಗುತ್ತಿದ್ದ ವೀರಶೈವ ಧರ್ಮೋಧ್ದಾರ ಮಾಡಿ ಭಕ್ತರನ್ನು ಸಲಹಿದ ಬೆ ಹೇಗೆಂದರೆ ಕೈಲಾಸ ಸಮೇತನಾಗಿ ಆನಂದಮಯನಾಗಿದ್ದಾಗ ನಾರದ ಮಹಾಮುನಿಯು ಅಲ್ಲಿಗೆ ಬಂದು ಈಶ್ವರನಿಗೆ ನಮಸ್ಕರಿಸಿ ಕಳುವಳಂ ಪಡುತ್ತ ನಿಂತಿದ್ದನು. ಆಗ ಪಾರ್ವತಿಯು ನಾರದನನ್ನು ನೋಡಿ ಆ ಕಳವಳಕ್ಕೆ ಕಾರಣವೇನೆಂದು ಶಂಕರನ್ನು ಕೇಳಿದಳು. ಈಶ್ವರನು ಕರುಮದಿಂದ ಮಂದಹಾಸವನ್ನು ಬೀರುತ್ತಾ ನಾರದನ್ನು ಕುರಿತು "ಮುನಿವರನೇ ! ನೀನಿ ಎಲ್ಲಿಂದ ಬಂದೆ ? ಬಂದ ಕಾರ್ಯವೇನು ?" ಎಂದು ಏನೂ ತಿಳಿಯದವನಂತೆ ಪ್ರಶ್ನೆ ಮಾಡಿದನು. ನಾರದ ಮಹರ್ಷಿಯು ಸಾಷ್ಟಾಂಗ ನಮಸ್ಕಾರ ಮಾಡಿ "ಮಹಾದೇವನೇ" ಲೋಕರಕ್ಷಕನೇ ! ನಾನು ಸಕಲ ಲೋಕಗಳನ್ನು ಸಂಚರಿಸುತ್ತಾ ಭೂಲೋಕಕ್ಕೆ ಹೋಗಿ ಅಲ್ಲಿನ ಜನರನ್ನು ನೋಡಿ ಬೇಸರಪಟ್ಟು ನಿನ್ನಲ್ಲಿಗೆ ಬಂದಿರುವೆನು. ನೀನು ಕರುಣದಿಂದ ಅಲ್ಲಿಗೆ ಹೋಗಿ ಎಲ್ಲರನ್ನೂ ಕಾಪಾಡಬೇಕೆಂದು ಪ್ರಾರ್ಥಿಸಿಕೊಳ್ಳುವೆನು. ಏಕೆಂದರೆ ಭೂಲೋಕದಲ್ಲಿ ಶಿವ ಭಕ್ತಿಯು ಖಿಲವಾಗುತ್ತಿದೆ. ಪವಿತ್ರವಾದ ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತ ಸತ್ಯ ಧರ್ಮ ನ್ಯಾಯ ಇವುಗಳನ್ನು ಪ್ರೀತಿಸುವ ಶಿವಭಕ್ತರು ಅತಿ ವಿರಳ. ಆದುದರಿಂದ ನೀನಿ ಕೃಪೆ ಮಾಡಿ ಅಲ್ಲಿಗೆ ಹೋಗಿ ವೀರಶೈವ ಧರ್ಮವನ್ನೂ, ಶಿವಭಕ್ತರನ್ನೂ ಉದ್ದರಿಸಬೇಕು" ಎಂದು ಪ್ರಾರ್ಥಿಸಿಕೊಂಡನು.

ನಾರದಮುನಿಯ ಮಾತನ್ನು ಕೇಳಿ ಪರಮೇಶ್ವರನು ಕ್ಷಣಕಾಲ ಯೋಚಿಸಿದವನಂತೆ ನಟಿಸಿದನು. ಅನಾದಿ ಜಂಗಮಮೂರ್ತಿಯಾದ, ಸದಾ ತನ್ನ ಹೃದಯದಲ್ಲಿಯೇ ವಾಸಿಸುತ್ತಿರುವ ಬಸವೇಶ್ವರನು ನಾನು ಹೋಗಿ ಬರುವೆನೆಂದು ಗಂಭೀರಧ್ವನಿಯಿಂದ ಹೇಳಿದನು. ಆಗ ಸಾಕ್ಷತ್ ಪರಶಿವನ ಅವತಾರಿಯಾದರು. ನಿರಂಜನ ಜಂಗಮ ಸ್ವರೂಪನಾದ ಬಸವೇಶ್ವರರು ತೋಜೋ ಮಯ ರೂಪಿನಿಂದ ಸಿದ್ದಲಿಂಗೇಶ್ವರನೆಂಬ ಅಭಿಧಾನದಿಂದ ಭೂಲೋಕವನ್ನು ಕಾಪಾಡಲು ಅಲ್ಲಿಂದ ಹೊರಟನು. ಆಗ ದೇವತೆಗಳೆಲ್ಲರೂ ಜಯಘೋಷವನ್ನು ಮಾಡಿ ಕೊಂಡಾಡಿದರು.

## 2. ಬಾಲ್ಯ–ಗುರು ಸಮರ್ಪಣೆ

ಮಹಾಮಹಿಮನಾದ ನಿರಂಜನ ಗಣೇಶ್ವರನು ಈಶ್ವರನ ಅಪ್ಪಣೆಯನ್ನು ಶಿಸಾವಹಿಸಿ ತನ್ನ ಅವತಾರಕ್ಕೆ ತಕ್ಕ ಉತ್ಕೃಷ್ಟವಾದ ಸ್ಥಳವನ್ನು ನೋಡುತ್ತಾ ಈ ಭಾರತ ದೇಶದ ದಕ್ಷಿಣ ಭಾಗದಲ್ಲಿ ಐಶ್ವರ್ಯದಿಂದ ತುಂಬಿ ತುಳುಕಾಡುತ್ತಿದ್ದ ಕರ್ನಾಟಕ ದೇಶವನ್ನು ಕಂಡು, ಅಲ್ಲಿ ಶೋಭಿಸುತ್ತಿದ್ದ ಪುಣ್ಯ ಕ್ಷೇತ್ರವಾದ ವಾಣಿಜ್ಯಪುರಿ (ಹರದನಹಳ್ಳಿ) ಎಂಬ ಪಟ್ಟಣಕ್ಕೆ ಬಂದರು.

ಆ ವಾಣಿಜ್ಯಪುರಿಯ ಮಧ್ಯದಲ್ಲಿ ಚಿನ್ನದ ಕಲಶಗಳಿಂದ ಪ್ರಕಾಶಿಸುವ ಸೌಧಗಳ ನಡುವೆ ದಿವ್ಯಲಿಂಗೇಶ್ವರ ದೇವಾಲಯ ಶೋಭಿಸುತ್ತಿತ್ತು.

ಆ ದಿವ್ಯಲಿಂಗೇಶ್ವರ ಮಹಿಮೆಯೇನೆಂದರೆ–ಒಂದಾನೊಂದು ಸಲ ಕೆಲವರು ವರ್ತಕರು ವ್ಯಾಪರಕ್ಕೋಸ್ಕರ ಆಡಕೆ ಹೇರುಗಳನ್ನು ಎತ್ತುಗಳ ಮೇಲೆ ಹೇರಿಕೊಂಡು, ಮಧುರೆಗೆ ಹೋಗುತ್ತಿರುವಾಗ ಕಾಡಿನಲ್ಲಿ ಬೀಡುಬಿಟ್ಟರು. ಆಗ ಅವರೆಲ್ಲರೂ ಸೇರಿ ಅಡಿಗೆ ಮಾಡಿಕೊಳ್ಳುವುದಕ್ಕೋಸ್ಕರ ಒಲೆಗಾಗಿ ಎರಡು ಕಲ್ಲುಗಳನ್ನು ತಂದು, ಅಲ್ಲಿಯೇ ಇದ್ದ ಒಂದು ಕಲ್ಲನ್ನು ಹುಟ್ಟುಗಲ್ಲೆಂದು ತಿಳಿಯದಿದ್ದ ಅದರೊಡನೆ ನೆಟ್ಟು, ಒಲೆ ಹತ್ತಿಸಿ ಅಡಿಗೆಗೆ ಇಡಲು ಹುಟ್ಟಗಲ್ಲೆಂದು ತಿಳಿದಿದ್ದದು ಆ ಲಿಂಗದಿಂದ ಅಮೃತವು ಸುರಿದು ಒಲೆಯ ಬೆಂಕಿಯೆಲ್ಲವೂ ಆರಿಹೋಯಿತು. ಆ ವರ್ತಕರು ಅದಕ್ಕೆ ಕಾರಣವೇನೆಂದು ನೋಡಲಾಗಿ. ಶಿವಲಿಂಗದಿಂದ ಅಮೃತವು ಸುರಿಯುತ್ತಿದ್ದುದನ್ನು ಕಂಡು ಶಿವನಿಗೆ ಆನೇಕ ವಿಧವಾಗಿ ಪ್ರಾರ್ಥನೆಯನ್ನು ಸಲ್ಲಿಸಿ, ಬೇರೆಕಡೆಯಲ್ಲಿ ತಮ್ಮ ಅಡಿಗೆಯನ್ನು ಮಾಡಿಕೊಂಡು ಶಿವನಿಗರ್ಪಿಸಿ, ತಾವು ಊಟ ಮಾಡಿ ತಾಂಬೂಲವನ್ನು ಹಾಕಿಕೊಳ್ಳಲು ತಮ್ಮ ಹೇರುಗಳಲ್ಲಿ ಅಡಿಕೆಯನ್ನು ತೆಗೆದುಕೊಳ್ಳಲು ನೋಡಿದಾಗ, ಅಡಿಕೆಯೆಲ್ಲವೂ ಅಳಲೆಕಾಯಿಯಾಗಿದ್ದುದನ್ನು ಕಂಡು ಪರಶಿವನಿಗೆ ಹರಕೆಯನ್ನು ಹೊತ್ತು ತಮ್ಮ ಅಡಕೆ ಹೇರುಗಳೆಲ್ಲವೂ ಮೊದಲಿನಂತೆ ಆದರೆ ಅದರಿಂದ ಬಂದ ಹಣದಿಂದ ತಾವು ಅಲ್ಲಿ ದೇವಾಲಯವನ್ನು ಕಟ್ಟಿಸಿ ಶಿವನಿಗೆ ನಿತ್ಯವೂ ಪೂಜೆ ಮೊದಲಾದವು ನಡೆಯುವಂತೆ ಮಾಡುತ್ತೇವೆಂದು ಪ್ರಾರ್ಥಿಸಿಕೊಂಡರು. ಮೇಲಿನಂತೆ ಅವರ ಹೇರುಗಳೆಲ್ಲವೂ ಅಡಕೆಯಾಗಲು, ವರ್ತಕರು ಅವುಗಳನ್ನು ಮಧುರೆಗೆ ತೆಗೆದುಕೊಂಡು ಹೋಗಿ ಮಾರಲು ಅವರಿಗೆ ಅಧಿಕವಾಗಿ ಲಾಭ ಬಂದಿತು. ಆ ಹಣದಿಂದ ಅರಣ್ಯದಲ್ಲಿದ್ದ ದಿವ್ಯಲಿಂಗೇಶ್ವರನಿಗೆ ದೇವಾಲಯುವನ್ನು ಕಟ್ಟಿಸಿ, ಅಲ್ಲಿಯೇ ತಾವು ವಾಸಮಾಡಿಕೊಂಡು ಆ ಪಟ್ಟಣಕ್ಕೆ "ವಾಣಿಜ್ಯಪುರಿ"ಯೆಂಬ ಹೆಸರನ್ನಿಟ್ಟು ಸುಖವಾಗಿದ್ದರು. ಈಶ್ವರನ ಪೂಜೆ ಮೊದಲಾದವುಗಳಿಗೆ ಒಂದು ಮಠವನ್ನು ಕಟ್ಟಿಸಿ ಅಲ್ಲಿ ಅನಾದಿ ಗಣೇಶ್ವರನೆಂಬ ಜಂಗಮಮೂರ್ತಿಯನ್ನು ನಿಲ್ಲಿಸಿ ದಿವ್ಯಲಿಂಗಕ್ಕೆ ಪಾದೋದಕ ಪ್ರಸಾದಗಳು ನಡೆಯುವಂತೆ ಮಾಡಿದರು. ಆ ಅನಾದಿಗಣೇಶ್ವರನ ಪರಂಪರೆಯಿಂದ ಬಂದು ಆ ಮಠದಲ್ಲಿ ಶ್ರೀ ಚನ್ನಬಸವೇಶ್ವರನು ಗುರುಪೀಠವನ್ನೇರಿದನು.

ನಿರಂಜನ ಗಣೇಶ್ವರನು ಹರದನಹಳ್ಳಿಯ ಉಪವನದಲ್ಲಿ ಪರಮೇಶ್ವರನನ್ನು ಧ್ಯಾನ ಮಾಡುತ್ತಾ ತನ್ನ ಕರ್ತವ್ಯವು ನೆರವೇರುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಿದ್ದನು. ಇತ್ತ ಆ ಪಟ್ಟಣದಲ್ಲಿ ಪರಮಭಕ್ತನಾದ ಮಲ್ಲಿಕಾರ್ಜುನನೆಂಬ ಶಿವಶರಣನು ಜ್ಞಾನಾಂಗನೆಯೆಂಬ ತನ್ನ ಹೆಂಡತಿಯೊಡನೆ ಅನ್ಯೋನ್ಯ ಪ್ರೀತಿಯಿಂದಿದ್ದನು. ಸದಾ ಶಿವಭಕ್ತಿ ಪರಾಯಾಣರಾದ ಆ ದಂಪತಿಗಳಿಗೆ ಎಲ್ಲಾ ವಿಧವಾದ ಸೌಖ್ಯಗಳಿದ್ದರೂ ಸಂತಾನವಿಲ್ಲದಿದ್ದುದೊಂದು ಕೊರತೆ ಬಹಳವಾಗಿದ್ದಿತು. ಬಾಲಲೀಲೆಗಳನ್ನು ನೋಡಿ ಬಾಲಕನ ಮುದ್ದಾದ

ಅಂಗವನ್ನು ಅಲಂಗಿಸಿಕೊಂಡು ಅವನ ತೊದಲು ನುಡಿಯನ್ನು ಕೇಳಿ ಆನಂದಿಸುವವರೇ ಧನ್ಯರೆಂದು ಪುತ್ರನನ್ನು ಪಡೆದುಕೊಳ್ಳಲು ಆ ಊರಿನ ಗುರು ಶ್ರೀ ಗೋಸಲ ಚನ್ನಬಸವೇಶ ದೇವರಿಗೆ ತಮ್ಮ ಇಷ್ಟಾರ್ಥವು ನೆರವೇರಿದರೆ ಆ ಪುತ್ರನನ್ನು ಗುರುಸನ್ನಿದಿಗೆ ಒಪ್ಪಿಸುತ್ತೇವೆಂದು ಹರಕೆಯನ್ನು ಮಾಡಿಕೊಂಡರು. ಅದೇ ಪ್ರಕಾರ ಗುರುವಿಗೆ ನಮಸ್ಕರಿಸಿ ತಪಸ್ಸಿಗಾಗಿ ಒಂದು ಉಪವನಕ್ಕೆ ಪ್ರವೇಶಿಸಿದರು ಅಲ್ಲಿ ದಂಪತಿಗಳಿಬ್ಬರೂ ಪಂಚೇಂದ್ರಿಯಗಳನ್ನು ನಿಗ್ರಹಿಸಿ ಅಂತರ್ಮುಖರಾಗಿ ಏಕನಿಷ್ಠೆಯಿಂದ ಈಶ್ವರನನ್ನು ಧ್ಯಾನ ಮಾಡುತ್ತಾ ಇದ್ದರು. ಇವರ ತಪೋಜ್ವಾಲೆಯು ಬ್ರಹ್ಮಾಂಡಲ್ಲೆಲ್ಲಾ ವ್ಯಾಪಿಸಲು ಶಿವನು ಮೆಚ್ಚಿ ನಂದಿವಾಹನನಾಗಿ ಬಂದು ಅವರಿಗೆ ಪ್ರತ್ಯಕ್ಷನಾಗಿ ಏನು ಬೇಕೆಂದು ಕೇಳಲು ದಂಪತಿಗಳು ಪುತ್ರನನ್ನು ಕೊಡು ಎಂದು ಕೇಳಿದರು. ಈಶ್ವರನು "ಹಾಗೆಯೇ ಆಗಲಿ, ಕೊಟ್ಟೆನು" ಎಂದು ಹೇಳಿದನು. ಆಗ ಸತಿಪತಿಗಳು ಕಣ್ಣುಬಿಟ್ಟು ನೋಡಿದಾಗ ಆನಂದ ಮೂರ್ತಿಯಾಗಿದ್ದ ಬಾಲಕನ ರೂಪು ಕಾಣಿಸಿತು. ಹಣೆಯಲ್ಲಿ ಭಸ್ಮವನ್ನೂ ಕತ್ತಿನಲ್ಲಿ ರುದ್ರಾಕ್ಷಿಮಾಲೆಯನ್ನು ಹಸ್ತಗಳಲ್ಲಿ ತ್ರಿಶೂಲ ಡಮರಗಗಳನ್ನೂ ಧರಿಸಿದ ಆ ಬಾಲಕನನ್ನು ನೋಡಿ ಸಿದ್ದಲಿಂಗೇಶನೇ ಹೀಗೆ ಮಗುವಾಗಿ ದಯಮಾಡಿದ್ದಾನೆಂದು ಅರಿತು ಪರಶಿವನನ್ನು ವಿಧವಿಧವಾಗಿ ಸ್ತೋತ್ರ ಮಾಡಿದರು. ಆಗ ಆ ಬಾಲಕನು ಗಂಭಿರವಾದ ಮಾತಿನಿಂದ ಶರಣದಂಪತಿಗಳನ್ನು ಕರಿತು "ನೀವು ನನ್ನನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗಿ; ನಾನು ಬಾಲಕನಾಗಿ ನಿಮ್ಮ ಕೋರಿಕೆಯನ್ನು ನೆರವೇರಿಸಿ ಕೊಡುತ್ತೇನೆ" ಎಂದು ಹೇಳಲು ಜ್ಞಾನಾಂಗನೆಯು ಬೇಗನೆ ಮಗುವನ್ನು ಎತ್ತಿಕೊಂಡು ತನ್ನ ಪತಿಯೊಡನನೆ ಮನೆಗೆ ಹೊರಟಳು.

ಆ ಶರಣದಂಪತಿಗಳು ಶಿವಯೋಗಿ ಶಿಶುವನ್ನು ಮನೆಗೆ ಕರೆದುಕೊಂಡು ಬಂದು ಚಿನ್ನದ ತೊಟ್ಟಿಲಿನಲ್ಲಿಟ್ಟು ಪಾಡಿ ತೂಗಿದರು. ಆ ಬಾಲಕನಿಗೆ ಕಾಲ ಕಾಲಕ್ಕೆ ಪದ್ದತಿಯ ಪ್ರಕಾರ ಮಾಡಬೇಕಾದ ಕರ್ಮಗಳನ್ನು ನೆರವೇರಿಸುತ್ತಾ ಮಗುವಿನ ಬಾಲಲೀಲೆಗಳನ್ನು ನೋಡಿ ನೋಡಿ ಹಿಗ್ಗುತ್ತಿದ್ದರು. ಕೆಲವು ವೇಳೆ ಬಾಲಕನು ರಚ್ಚೆಯನ್ನು ಮಾಡಿದರೆ ದಂಪತಿಗಳು ಹೆದರಿಕೆಯಿಂದ ನಡುಗುತ್ತಾ ಅದರ ಪರಿಹಾರಕ್ಕಾಗಿ ಬಹಳ ಪ್ರಯತ್ನಗಳನ್ನು ಮಾಡುತ್ತಿದ್ದರು. ಹರಕೆಗಳನ್ನು ಕಟ್ಟಿಡುತ್ತಿದ್ದರು. ಒಂದಾನೊಂದು ದಿನ ಜ್ಞಾನಾಂಗನೆಯ ಮಗುವನ್ನು ತೂಗುತ್ತಿದ್ದಾಗ ಹಾಗೆಯೇ ನಿದ್ದೆ ಬರಲು ಕನಸಿನಲ್ಲಿ ಶಿವನು ಒಂದು ರತ್ನಾಭರಣವನ್ನು ಕಳಿಸಲು ಅದನ್ನು ಬಾಲಕನಿಗೆ ತೊಡಿಸಿದಂತೆ ಕಂಡಿತು. ಕೂಡಲೇ ಎಚ್ಚೆತ್ತು ನೋಡಿದಾಗ ಏಳಿ ಹೆಡೆಯ ಸರ್ಪವೊಂದು ತನ್ನ ಬಾಲವನ್ನು ಸಿಂಬಿಯಾಗಿ ಸುತ್ತಿ ಮಗುವಿಗೆ ಹಾಸಿ ತಾನು ಮೇಲ್ಗಡೆ ಹೆಡೆಯನ್ನು ಬಿಚ್ಚಿ ತಲೆಯ ಮೇಲಾಡಿಸುತ್ತಿದ್ದದನ್ನು ಕಂಡಳು. ಜ್ಞಾನಾಂಗನೆಯು ಹೆದರಿಕೆಯಿಂದ ಕಣ್ಣು ಮುಚ್ಚಿಕೊಂಡು ಮಗುವಿಗೆ ವಿಧವಿಧವಾದ ಗಂಡಾಂತರಗಳು ಬರುತ್ತಿವೆಯೆಂದು ಬಹಳ ವ್ಯಸನಪಟ್ಟಳು. ಕೆಲವರು ಈ ಆದ್ಭುತವನ್ನು ಕಂಡು ಬಾಲಕನು ಸಾಮಾನ್ಯನಲ್ಲವೆಂದೂ, ಆ ಸರ್ಪವು ಸಾಧಾರಣವಾದ ಹಾವಲ್ಲವೆಂದೂ, ತಮ್ಮ ತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಿರಲು, ಆ ಸರ್ಪವು ಬಾಲಕನು ಶಿವನೆಂದು ಎಲ್ಲರಿಗೂ ತಿಳಿಸಲು ಬಂದಂತೆ ಈಶ್ವರನ ಅಪ್ಪಣೆಯಾದಂತೆ ತಕ್ಷಣವೇ ಮಾಯವಾಯಿತು. ನೋಡುವವರು ಕಣ್ಣಿನ ಮಂಜು ಹರಿದಂತೆ ಆ ಶಿಶುವು ಮೊದಲಿಗಿಂತಲೂ ಹೆಚ್ಚು ತೇಜಸ್ಸಿನಿಂದ ಪ್ರಕಾಶಿಸಿತು.

ಬಾಲಕನಿಗೆ ಐದು ವರ್ಷಗಳಾದವು. ಆಗ ತಂದೆ ತಾಯಿಗಳು ಬಾಲಕನನ್ನು ವಿದ್ಯಾಭ್ಯಾಸಕ್ಕೋಸ್ಕರ ಉಪಾಧ್ಯಾಯರ ಬಳಿಗೆ ಕರೆದುಕೊಂಡು ಹೋಗಿ ಬಿಟ್ಟುಬಂದರು. ಓಂಕಾರವನ್ನು ಉಪಾಧ್ಯಾಯರು ಬರೆದು ತೋರಿಸಿದಾಗ ಅದರ ಅರ್ಥವೇನೆಂದು ಕೇಳಿದನು. ಆಗ ಉಪಾಧ್ಯಾರು ಏನು ತೋಚದವರಾಗಿದ್ದು ಸ್ವಲ್ಪ ಹೊತ್ತಾದ ಮೇಲೆ ಭೋಜನಕ್ಕೆಂದು ಮನೆಗೆ ಹೋದರು. ಆ ವೇಳೆಯಲ್ಲಿ ಬಾಲಕನಾದ ಸಿದ್ದಲಿಂಗೇಶನು ಅಲ್ಲಿದ್ದ ಬಾಲಕರಿಗೆಲ್ಲ ಜನನ ಮರಣದ ಕಷ್ಟವನ್ನು ಹೋಗಲಾಡಿಸುವಂಥ ಶ್ರೇಷ್ಟವಾದ ಆತ್ಮ ವಿದ್ಯೆಯನ್ನು ಬೋಧಿಸಲು ಪ್ರಾರಂಭಿಸಿದರು, ಜನನ ಮರಣದ ಸ್ವರೂಪವನ್ನು ಪಾಪ–ಪುಣ್ಯಗಳ ಸ್ವರೂಪವನ್ನೂ ಭೋಧಿಸಿ,

ಪುಣ್ಯವಂತರಾದ ಶಿವಭಕ್ತರಿಗೆ ದೊರಕುವ ಪುಣ್ಯಫಲಗಳನ್ನೂ ಸಾಯುಜ್ಯ ಪದವಿಯನ್ನು ತಿಳಿಸಿದನು. ಅವನ ಭೋಧನೆಯನ್ನು ಕೇಳಿ ಆ ಪಾಠಶಾಲೆಯ ಬಾಲಕರೆಲ್ಲರೂ ಒಳ್ಳೆಯ ಜ್ಞಾನವನ್ನು ಪಡೆದು ಈಶ್ವರನ ಧ್ಯಾನದಲ್ಲಿ ನಿರತರಾದರು. ಆ ಸಮಯಕ್ಕೆ ಉಪಾಧ್ಯಾಯರ ಪಾಠದಲ್ಲಿ ಇಷ್ಟವಿಲ್ಲದೆ ಮನಸ್ಸಿನಲ್ಲಿ ಶಿವನನ್ನೇ ಧ್ಯಾನಿಸುತ್ತಿದ್ದರು. ಉಪಾಧ್ಯಾಯರು ಇದಕ್ಕೆಲ್ಲಾ ಸಿದ್ದಲಿಂಗನೇ ಕಾರಣನೆಂದು ಅರಿತು ಅವನನ್ನು ಅವನ ತಂದೆತಾಯಿಗಳ ವಶಕ್ಕೆ ಒಪ್ಪಿಸಿಬಿಟ್ಟರು.

ಹೀಗಿರಲು ಒಂದು ದಿನ ಅವನ ತಂದೆ ತಾಯಿಗಳು ಮನೆಯೊಳಗೆ ಶಿವನನ್ನು ಪೂಜಿಸುತ್ತಿದ್ದಾಗ, ಬಾಲಕನು ಅಂಗಳದಲ್ಲಿ ಆಟವಾಡುತ್ತಿದ್ದನು. ಆ ವೇಳೆಗೆ ಯಾವನೋ ಒಬ್ಬನು ಬಾಗಿಲಿಗೆ ಬಂದು ಬಾಲಕನ್ನು "ಯಜಮಾನರು ಎಲ್ಲಿ ?" ಎಂದು ಕೇಳಲು, ಬಾಲಕನು "ಅವರು ಈ ಊರಿನ ಕೊನೆಯ ಕೇರಿಗೆ ಹೋಗಿದ್ದಾರೆಂದು" ಹೇಳಿದರು. ಈ ಮಾತನ್ನು ಕೇಳಿದ ತಂದೆ ತಾಯಿಗಳು ಒಳಗಿನಿಂದ ಬಂದು ಮಗನ್ನು ನಾವೆಲ್ಲಿಗೆ ಹೋಗಿದ್ದೇವೆಂದು ಕೇಳಲು, ಸಿದ್ದ ಬಾಲಕನು ನಿಮ್ಮ ದೇಹವು ಮಾತ್ರ ಇಲ್ಲಿದ್ದಿತು. ನಿಮ್ಮ ಮನಸ್ಸೆಲ್ಲವು ಬೇರೆ ಕಡೆಗೆ ಹೋಗಿತ್ತೆಂದು ಹೇಳಲು ಆಶ್ಚರ್ಯಪಟ್ಟು ಮಗನನ್ನು ಸಾಮಾನ್ಯ ಬಾಲಕನಲ್ಲವೆಂದೂ ಸಾಕ್ಷಾತ್ಪರ ಶಿವನೇ ಎಂದು ತಿಳಿದು ಅನೇಕ ವಿಧವಾಗಿ ಸ್ತೋತ್ರಮಾಡಿದರು. ಹಾಗೆ ಸ್ತೋತ್ರ ಮಾಡುತ್ತಿದ್ದ ತಾಯಿ ತಂದೆಗಳನ್ನು ಕುರಿತು ನಾನು ನಿಮ್ಮ ಮಗನಾಗಿ ಇದುವರೆಗೆ ನಿಮ್ಮ ಇಚ್ಛೆಯನ್ನು ನೇರವೇರಿಸಿದೆನು. ಇನ್ನು ನನ್ನನ್ನು ನಿಮ್ಮ ಮಠದ ಗುರು ಶ್ರೀ ಚನ್ನಬಸವೇಶ್ವರನ ಸನ್ನಿದಿಗೆ ಕಳುಹಿಸಿಕೊಡಿರೆಂದು ಕೇಳಿದನು. ಮೊದಲೇ ತಾವು ಹರಕೆ ಹೊತ್ತಿದ್ದಂತೆ ಬಾಲಕನು ಕೇಳಿದುದಕ್ಕಾಗಿ ಅವರು ಬಹಳ ಸಂತೋಷಪಟ್ಟು ಭಸಿತ ರುದ್ರಾಕ್ಷಿಗಳಿಂದ ಅಲಂಕರಿಸಿ ಶಿವರೂಪನಾದ ಆ ಬಾಲಕನ್ನು ಸದ್ಗುರುವಿನ ಬಳಿಗೆ ಕರೆದುಕೊಂಡು ಹೋಗಿ ಗುರುವಿಗೆ ನಮಸ್ಕಾರ ಮಾಡಿಸಿ "ತಮ್ಮ ಅನುಗ್ರಹದಿಂದ ನಮ್ಮ ಕೋರಿಕೆಯು ನೆರವೇರಿತು. ನಮ್ಮ ಹರಕೆಯಂತೆ ಬಾಲಕನ್ನು ನಿಮ್ಮ ಪಾದಗಳಿಗೆ ಒಪ್ಪಿಸಿರುವೆವು" ಎಂದು ಹೇಳಿ ಹೊರಟು ಹೋದರು.

## 3. ಗುರು ಸೇವೆ – ಚರವೃತ್ತಿ ಪ್ರಧಾನ

ಗುರುಸೇವೆಯನ್ನು ಸಲ್ಲಿಸುವುದಕ್ಕಾಗಿ ಸಿದ್ದಲಿಂಗೇಶನು ಬಂದ ಕೂಡಲೇ ಗುರು ಚನ್ನಬಸವೇಶನು ಶೈವಾಗಮ ರೀತಿಯಿಂದ ಅವನಿಗೆ ದೀಕ್ಷೆಯನ್ನು ಕೊಟ್ಟು, ಪಂಚಾಕ್ಷರೀ ಮಹಾಮಂತ್ರವನ್ನು ಉಪದೇಶಿಸಿ, ಶರಣರಿಗೆ ತಕ್ಕ ವಿಭೂತಿ ರುದ್ರಾಕ್ಷಿಮಾಲೆಗಳನ್ನು ತೊಡಿಸಿ ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದರು ಸಿದ್ದಲಿಂಗೇಶನು ಕಾವಿಯ ವಸ್ತ್ರವನ್ನು ಧರಿಸಿ ವಿಭೂತಿ ರುದ್ರಾಕ್ಷಿಗಳಿಂಗ ಬಾಲ ಜಂಗಮನಾಗಿ ಪ್ರಕಾಶಿಸಿದರು.

ಪ್ರತಿ ದಿನವೂ ಎಲ್ಲಾ ಶಿಷ್ಯರುಗಳೊಡನೆ ಹೂವು ಪತ್ರೆಗಳನ್ನು ತರುತ್ತಲೂ ಶಿದ್ಧೋದಕವನ್ನು ತರುತ್ತಲೂ ಗುರುಸೇವೆ ಮಾಡಿಕೊಂಡಿದ್ದರು. ಆಗ ಇತರ ಶಿಷ್ಯರಂತೆ ಪತ್ರೆ ಪುಷ್ಪಗಳನ್ನೂ ಆಭಿಷೇಕಜಲವನ್ನು ಬೇಗ ತರೆ ಹೂವಿನ ಬುಟ್ಟಿಯನ್ನೂ ಬಿಂದಿಗೆಯನ್ನೂ ನೀರಿನಲ್ಲಿ ತೇಲಿಬಿಡುತ್ತಾ ಆಟವಾಡುತ್ತಿದ್ದರು. ಇವರು ಹಿಂದುಳಿದುದನ್ನು ಕಂಡು ಶಿಷ್ಯರು ಕೂಗಲು ಆಗ ಅವುಗಳನ್ನು "ಬಾ" ಎಂದು ಕರೆಯುತ್ತಿದ್ದರು. ಕೂಡಲೇ ಅವು ಪತ್ರೆ, ಪುಷ್ಪಗಳು ಹೂವುಗಳಿಂದಲೂ ನೀರಿನಿಂದಲೂ ತುಂಬಿ ತಾವಾಗಿಯೇ ಬಂದು ಇವರ ಕೈ ಸೇರುತ್ತಿದ್ದವು.

ಹೀಗಿರುತ್ತಿರುವಾಗ ಶಿಷ್ಯರು ಇವರ ಮೇಲೆ ಗುರುವಿನ ಬಳೀ ದೂರು ಹೇಳಲು ಗುರುವು ಸಿದ್ದಲಿಂಗೇಶರನ್ನು ಕುರಿತು ಅಯ್ಯಾ ಸಿದ್ದಲಿಂಗ ! ಇವರೆಲ್ಲರೂ ನಿನ್ನನ್ನು ದೂರುತ್ತಾರೆ. ನಿನಗೆ ಇವರ ಜೊತೆ ಬೇಡ. ನೀನು ಸುಮ್ಮನೆ ಮಠದಲ್ಲಿಯೇ ಇದ್ದುಕೊಂಡು ಬಸವೇಶ್ವರರನ್ನು ಪೂಜೆ ಮಾಡಿಕೊಂಡಿರು. ಎಂದು ಹೇಳಿದರು. ಒಂದು ದಿನ ಬಸವೇಶ್ವರರ ಪೂಜೆಗೆ ದೀಪಕ್ಕೆ ಎಣ್ಣೆ ಇಲ್ಲದಿರಲು ನೀರಿನಿಂದಲೇ ದೀಪವನ್ನುರಿಸಿ ಪೂಜೆಯನ್ನು ಸಲ್ಲಿಸಿದರು. ಈ ಸಂಗತಿಯನ್ನು ಗುರುವು ಕೇಳಿ ಇವರು ಸಾಮಾನ್ಯನಲ್ಲ, ತಂದೆತಾಯಿಗಳ ಮನೆಯಲ್ಲಿದ್ದುಕೊಂಡು ಶರಣರಿಗೆಲ್ಲ ತನ್ನ ಮಹಿಮೆಯನ್ನು ತೋರಿಸಿ ಪ್ರೀತಿಯಿಂದ ಇಲ್ಲಿಗೆ ಬಂದು, ಇಲ್ಲಿಯೂ ತನ್ನ ಮಹಿಮೆಯನ್ನು ತೋರಿಸಲು ಬಂದಿರುವ ಬಾಲಜಂಗಮನೆಂದು ತಿಳಿದು ಅವರನ್ನು ಇನ್ನಷ್ಟು ಪ್ರೀತಿಯಿಂದ ಕಾಣಲಾರಂಭಿಸಿದರು.

ಅಲ್ಲದೆ ಇತರ ಶಿಷ್ಯರು ಬಸವೇಶ್ವರರಿಗೆ ಮಾಡಿದ ನೈವೇದ್ಯವನ್ನು ಹಿಂದಕ್ಕೆ ತರುವುದು ಮತ್ತು ಎಲ್ಲರೂ ಹಂಚಿಕೊಂಡು ಸೇವಿಸುವುದು ಪದ್ಧತಿಯಾಗಿತ್ತು. ಆದರೆ ಈ ಬಾಲ ಜಂಗಮರು ಅದನ್ನು ಹಿಂದಕ್ಕೆ ತರುತ್ತಿರಲಿಲ್ಲ ಅದಕ್ಕೆ ಕಾರಣವೇನೆಂದು ಗುರುವು ಕೇಳಲು ತಾನು ಮಾಡುತ್ತಿದ್ದ ರೀತಿಯನ್ನು ತೋರಿಸುವುದಕ್ಕೋಸ್ಕರ ಮತ್ತೆ ಎಡೆಯನ್ನು ಸಿದ್ದಪಡಿಸಿದನು.

ಸಿದ್ದಲಿಂಗೇಶ್ವರರ ಮಾತಿನಂತೆ ಕಲ್ಲಿನ ಬಸವೇಶ್ವರ ವಿಗ್ರಹವು ನಿಜರೂಪದಿಂದ ಬಂದು ನೈವೇದ್ಯವನ್ನು ಸ್ವೀಕರಿಸಿತು. ಇದನ್ನೆಲ್ಲಾ ನೋಡಿ ಗುರುವು ಈ ಬಾಲ ಜಂಗಮರು ಸಾಕ್ಷತ್ ಕೈಲಾಸಧಿಪತಿಯೇ ಸರಿಯೆಂದು ಅವರನ್ನು ಅನೇಕ ವಿಧವಾಗಿ ಸ್ತೋತ್ರಮಾಡಿ ನೀನೇ ನನ್ನ ಸದ್ಗುರುವೆಂದು ನಮಸ್ಕರಿಸಿದರು. ಸಿದ್ದಲಿಂಗರು ಅದನ್ನು ತಡೆದು "ಸದ್ಗುರುವೇ, ನೀವು ನನಗೆ ಈ ವಿಧವಾಗಿ ಮಾರ್ಯಾದೆ ಮಾಡುವುದು ನ್ಯಾಯವೇ ? ಗುರು ಶಿಷ್ಯ ನ್ಯಾಯವನ್ನು ಮೀರಿದಂತಾಗುವುದಿಲ್ಲವೇ ? ಲೋಕದಲ್ಲಿ ಗುರುವೇ ದೊಡ್ಡವರು, ಗುರುವಾಕ್ಯವನ್ನು ಮೀರಿದರೆ ಕಲ್ಪಾಂತದವರೆಗೂ ನರಕ ತಪ್ಪುವುದಿಲ್ಲ. ಗುರುವಿಗೆ ವಿಧೇಯನಾಗಿರುವವನಿಗೆ ಸಾಯುಜ್ಯ ಪದವಿಯು ಸಿಕ್ಕುವುದು" ಎಂದು ಹೇಳಿ ಗುರುವಿನ ಅಪ್ಪಣೆ ಪಡೆದು ಜಂಗಮರುಗಳೊಡನೆ ದೇಶ ಸಂಚಾರಕ್ಕೆ ಹೊರಟರು.

## 4. ದೇಶ ಸಂಚಾರ–ಅರುಣಾಚಲೇಶ್ವರ ಕೃತ ಸನ್ಮಾನ

ಹೀಗೆ ಹೊರಟ ಪಾವನಚರಿತ್ರರಾದ ಸಿದ್ದಲಿಂಗೇಶ್ವರರನ್ನು ಬಿಟ್ಟಿರಲಾರದೆ, ಗೋಸಲಗುರು ಚನ್ನಬಸವೇಶ್ವರರೂ ಕೂಡ ಅನೇಕ ಶಿಷ್ಯರೊಡನೆ ಅವರನ್ನು ಹಿಂಬಾಲಿಸಿದರು. ಈಶ್ವರನ ಅಜ್ಞಾನುಸಾರ ಜಂಗಮ ರೂಪವನ್ನು ತಾಳಿದ್ದ ಅನೇಕ ಪ್ರಮಥರೂ ಅವರೊಡನೆ ಹೊರಟರು.

ಹೀಗೆ ಪ್ರಯಾಣ ಮಾಡುತ್ತ ಪ್ರಸಿದ್ದವಾದ ಅರುಣಾಚಲಕ್ಕೆ ಬಂದರು. ಅಲ್ಲಿ ಎಂಟು ದಿಕ್ಕಿನ ಬಾಗಿಲುಗಳಿಂದಲೂ ಏಳಿಸುತ್ತಿನ ಕೋಟೆಯಿಂದಲೂ ಶೋಭಿಸುತ್ತಿದ್ದ ಅರುಣಾಚಲೇಶ್ವರರ ದೇವಾಲಯಕ್ಕೆ ಬಂದರು ಅಲ್ಲಿ ಅರ್ಧ ರಾತ್ರಿಯವರೆಗೆ ಶಿವನನ್ನು ಧ್ಯಾನ ಮಾಡುತ್ತಾ ಅರುಣಾಚಲೇಶ್ವರರನ್ನು ಭಕ್ತಿಯಿಂದ ಪೂಜಿಸಿ ಹಾಗೆಯೇ ಮಲಗಿದ್ದರು. ಆಗ ಅರಣಾಚಲೇಶ್ವರರು ಸಿದ್ದಲಿಂಗೇಶ್ವರರೊಡನೆ ಕಾಲಜ್ಞಾನದ ನಿಯಮ ಮೊದಲಾದ ವಿಷಯಗಳನ್ನು ಮಾತನಾಡಿ ತನಗೆ ಹಾಕಿದ್ದ ಪಂಚತಾವಡವೆಂಬ ಅಮೂಲ್ಯವಾದ ರತ್ನಾಭರಣವನ್ನು ಸಿದ್ಧೇಶ್ವರರ ಕತ್ತಿಗೆಗೆ ಹಾಕಿದರು. ಬೆಳಗಾಗುತ್ತಲೆ ಜಂಗಮರೆಲ್ಲರೂ ತಮ್ಮ ತಮ್ಮ ನಿತ್ಯ ವಿಧಿಯನ್ನು ಮಾಡುತ್ತಿರಲು ಅರುಣಾಚಲೇಶ್ವರರ ಪಂಚತಾವಡವು ಇಲ್ಲದಿದ್ದುದನ್ನು ನೋಡಿ ಆರ್ಚಕರು ಗಾಬರಿಯಿಂದ ಹುಡುಕಾಡುತ್ತಾ ಎಲ್ಲರನ್ನೂ ನೋಡುತ್ತಿರುವಾಗ ಸಿದ್ದಲಿಂಗೇಶ್ವರರ ಕತ್ತಿನಲ್ಲಿದ್ದುದನ್ನು ಕಂಡು ಕೂಡಲೇ ರಾಜನಿಗೆ ದೂರು ಹೇಳಿದರು. ರಾಜನು ಭಟರೊಡನೆ ದೇವಾಲಯಕ್ಕೆ ಬಂದನು. ಆ ಜಂಗಮರ ಮಧ್ಯದಲ್ಲಿ ಪಂಚತಾವಡವನ್ನು ಧರಿಸಿದ್ದ ಸಿದ್ದಲಿಂಗೇಶ್ವರರು ಕಣ್ಣಿಗೆ ಬಿದ್ದರು. ಸಿದ್ದಲಿಂಗೇಶ್ವರರು ರಾಜನನ್ನು ಕುರಿತು"ಎಲೈ ರಾಜನೆ, ನಿಮ್ಮ ಒಡವೆಯನ್ನು ನಾನು ತೆಗೆದುಕೊಂಡವನಲ್ಲ. ಬಲತ್ಕಾರವಾಗಿ ದೇವರೇ ಕೊಟ್ಟರು ನಾನೇನು ಮಾಡಲಿ ?" ಎಂದರು. ಆ ಮಾತನ್ನು ಕೇಳಿ ರಾಜನು ಆಶ್ವರ್ಯಪಟ್ಟು, "ಶಿಲಾ ವಿಗ್ರಹವು ಮನುಷ್ಯನಿಗೆ ಹಾರವನ್ನು ಕೊಟ್ಟಿತೆಂಬುದು ಸುಳ್ಳು, ಹಾಗೆ ನಿಜವಾಗಿದ್ದ ಪಕ್ಷದಲ್ಲು ಯಾರೂ ಇಲ್ಲದಾಗ ಶಿವನು ನಿನಗೆ ಕೊಟ್ಟ ಹಾರವನ್ನು ಈಗ ಕೊಡಲಾರನೇ ? ತೆಗೆದುಕೊಡು, ಪುನಃ ಕೊಟ್ಟರೆ ತೆಗೆದುಕೊ," ಎಂದು ಹೇಳಲು ಸಿದ್ದಲಿಂಗೇಶ್ವರರು ಹಾರವನ್ನು ಅರುಣಾಚಲೇಶ್ವರರಿಗೆ ಧರಿಸಲು ಈಶ್ವರನು ಪ್ರತ್ಯಕ್ಷನಾಗಿ "ಸಿದ್ದಲಿಂಗನೇ ಈ ಹಾರವನ್ನು ನಾನು ನಿನಗೆ ಕೊಡುತ್ತೇನೆ, ಅದರಲ್ಲಿ ಮೋಸವಿಲ್ಲ" ಎಂದು ತನ್ನ ದಿವ್ಯರೂಪವನ್ನು ತೋರಿಸಿದರು. ಆಗ ರಾಜನೂ ಅಲ್ಲಿಯ ಜನರೂ ಸಿದ್ದಲಿಂಗೇಶ್ವರರಿಗೆ ಶರಣಾಗತರಾಗಿ ಶಿವದೀಕ್ಷೆಯನ್ನು ಪಡೆದರು.

ಆಮೇಲೆ ಲೋಕದ ಭಕ್ತರನ್ನು ಉದ್ಧರಿಸುವುದಕ್ಕೋಸ್ಕರ ಸಿದ್ದಲಿಂಗೇಶ್ವರರು ಮುಂದೆ ಹೊರಟರು. ಈಶ್ವರನು ಇವರನ್ನು ಪರೀಕ್ಷಿಸಲು ಎಲ್ಲಿಯೂ ಭಿಕ್ಷವು ಸಿಕ್ಕದಂತೆ ಮಾಡಿದರು; ಏಳೀ ದಿವಸಗಳವರೆಗೂ ಆಹಾರವಿಲ್ಲದೆ ಇರುವುದನ್ನು ಕಂಡು ಮೆಚ್ಚಿದರು. ಸಿದ್ದಲಿಂಗೇಶ್ವರರು ಕೊನೆಗೆ ರೋಹಣವೆಂಬ ಹಳ್ಳಿಯಲ್ಲಿದ್ದ ಕುಂಬಳೇಶ್ವರನ ಮನೆಗೆ ಈಶ್ವರನು ಹೋಗಿ ಆ ಭಕ್ತ ದಂಪತಿಗಳ ಕನಸಿನಲ್ಲಿ "ನಾನು ಬಹಳ ಹಸಿದಿದ್ದೇನೆ, ಕೂಡಲೆ ಆಹಾರ ಕೋಡಿ" ಎಂದು ಕೇಳಿದನು. ಆ ಭಕ್ತನ ಹೆಂಡತಿಯು ಎಚ್ಚರಗೊಂಡು ತನ್ನ ಗಂಡನೊಡನೆ ಅಲೋಚಿಸಿ ಈಶ್ವರನ ಅನುಗ್ರಹಕ್ಕೆ ಸಂತೋಷಪಟ್ಟು ಬರುವ ಸೋಮವಾರ ಶರಣರಿಗೆ ಕುಂಬಳೇಶನಾಲಯದಲ್ಲಿ ಎಡೆಯನ್ನು ಮಾಡಿಸುವುದಾಗಿ ಹರಕೆ ಮಾಡಿಕೊಂಡು ಮಲಗಿದ್ದಳು. ಸ್ವಲ್ಪ ಹೊತ್ತಿನಲ್ಲಿಯೇ ಶಿವನು ಮತ್ತೆ ಹೊಡೆದು ಎಚ್ಚರಿಸಿದಂತಾಗಿ "ಈಗಲೇ ಹೋಗಿ ಇರುವ ಅನ್ನವನ್ನೇ ತೆಗೆದು ಕೊಂಡು ಮೊಸರು, ಉಪ್ಪಿನಕಾಯಿಗಳನ್ನು ಹಾಕಿಕೊಂಡು ಸಿದ್ದಲಿಂಗೇಶನಿಗೆ ಕೊಟ್ಟು ಸತ್ಕರಿಸಿ" ಎಂದು ಹೇಳಲು, ಅವರು ಆಗಲೇ

ಹೊರಟು ಕುಂಬಳೇಶನಾಲಯಕ್ಕೆ ಬಂದು ಸಿದ್ದಲಿಂಗೇಶ್ವರರನ್ನು ಕಂಡು ಸತ್ಕರಿಸಿದರು. ಸಿದ್ದಲಿಂಗ ಯತಿರಾಜನು ಅದನ್ನು ಸ್ವೀಕರಿಸಿ ಅವರನ್ನು ಅನುಗ್ರಹಿಸಿ ಮುಂದಕ್ಕೆ ತೆರಳಿದರು.



## 5. ರಾಮೇಶ್ವರ–ಸ್ತ್ರೀಮಲೆಯಾಳ ಪ್ರವೇಶ

ಶರಣರ ಸಮೂಹದೊಂದಿಗೆ ಸಿದ್ದೇಶ್ವರನು ಪ್ರಯಾಣ ಮಾಡುತ್ತಾ ಶ್ರೀರಂಗ, ಕುಂಭಕೋಣ ಮೊದಲಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತಾ ಗಂಭೀರವಾದ ಮತ್ತು ಪರ್ವತಾಕಾರವಾದ ಅಲೆಗಳಿಂದ ಕೂಡಿದ ಮಹಾ ಸಮುದ್ರದ ತೀರಕ್ಕೆ ಬಂದು ಅಲ್ಲಿ ಸಮುದ್ರದ ಮಧ್ಯದಲ್ಲಿ ದಿಣ್ಣೆಯ ಮೇಲಿರುವ ರಾಮೇಶ್ವರಕ್ಕೆ ಬಂದರು. ತನ್ನ ಭಕ್ತರಿಗೆಲ್ಲಾ ಆ ರಾಮೇಶ್ವರದ ಪಾವನವಾದ ಶ್ರೀ ರಾಮಲಿಂಗ, ಹನುಮಲಿಂಗಗಳ ಪೂರ್ವ ವಿಚಾರವನ್ನು ವಿವರಿಸಿದರು. "ವಿಷ್ಣುವು ಶ್ರೀ ರಾಮಾವತಾರ ಮಾಡಿದನು, ದೇವತೆಗಳೆಲ್ಲರೂ ವಾನರರಾಗಿ ಹುಟ್ಟಿದರು. ಶ್ರೀರಾಮನು ತಂದೆಯ ಮಾತಿನಂತೆ ಕಾಡಿಗೆ ಹೋದನು. ಕಾಡಿನಲ್ಲಿ ಲಕ್ಷ್ಮಣನು ರಾಮನೊಡನೆ ಇದ್ದ ವೇಳೆಯಲ್ಲಿ ರಾಕ್ಷಸನಾದ ರಾವಣನು ಮೋಸದಿಂದ ಸೀತೆಯನ್ನು ಕದ್ದುಕೊಂಡು ಹೋದನು. ಆಗ ಶ್ರೀ ರಾಮನು ಕೋಪದಿಂದ ಹನುಮಂತ ಸುಗ್ರೀವರ ಸ್ನೇಹವನ್ನು ಮಾಡಿಕೊಂಡು ವಾನರ ಸೈನ್ಯದೊಡನೆ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕೆಗೆ ಹೋಗಿ ರಾವಣನನ್ನು ಕೊಂದು ಸ್ನೇಹಿತನಾದ ವಿಭೀಷಣನಿಗೆ ಲಂಕಾಧಿಪತ್ಯವನ್ನು ಕಟ್ಟಿ ಸೀತೆಯನ್ನು ಬಿಡಿಸಿ ಕರೆದುಕೊಂಡು ಬಂದನು. ರಾಕ್ಷಸರನ್ನು ಕೊಂದ ಮೇಲೆ ಶ್ರೀರಾಮನು ಈ ಕ್ಷೇತ್ರಕ್ಕೆ ಪ್ರವೇಶಿಸಿ ಹನುಮಂತನಿಗೆ ಕಾಶಿಯ ಲಿಂಗವನ್ನು ತೆಗೆದುಕೊಂಡು ಬರುವಂತೆ ಅಪ್ಪಣೆ ಮಾಡಿದರು. ಒಡೆಯನ ಮಾತಿನಂತೆ ಹನುಮಂತನು ಕಾಶಿಯ ಲಿಂಗವನ್ನು ತರಲು ಹೋದನು. ಅಷ್ಟರಲ್ಲಿಯೇ ಗೊತ್ತಾದ ಮುಹೂರ್ತ ಕಾಲವು ಬಂದಿತ್ತು. ಹನುಮಂತನು ಇನ್ನೂ ಬಾರದ್ದರಿಂದ ಮರಳಲಿಂಗವನ್ನು ಪ್ರತಿಷ್ಟೆ ಮಾಡಿಸುತ್ತಿದ್ದನು. ಅಷ್ಟರಲ್ಲಿ ಹನುಮಂತನು ಲಿಂಗವನ್ನು ತೆಗೆದುಕೊಂಡು ಬಂದು ನೋಡಿ ತಾನು ಬರುವುದು ಸಾವಕಾಶವದುದಕ್ಕಾಗಿ ವ್ಯಸನ ಕ್ರಾಂತನಾದನು. ಅದನ್ನು ಕಂಡು "ಜನರೆಲ್ಲರೂ ಮೊದಲು ಈ ಕಾಶಿಯ ಲಿಂಗವನ್ನು ಪೂಜಿಸಲಿ, ಅನಂತರ ಮರಳ ಲಿಂಗವನ್ನು ಪೂಜಿಸಲಿ, ನೀನು ದುಃಖಿಸಬೇಡ" ಎಂದು ಶ್ರೀರಾಮನು ಸಮಾಧಾನ ಹೇಳಿ ಮರಳಲಿಂಗಕ್ಕೆ ರಾಮಲಿಂಗವೆಂದೂ ಹನುಮಂತನ ಲಿಂಗಕ್ಕೆ ಹನುಮಲಿಂಗವೆಂದೂ ಹೆಸರಿಟ್ಟು ಆ ಲಿಂಗಗಳ ಪೂಜೆಗಳನ್ನು ನೆರವೇರಿಸಿದನು. "ಪಂಚ ಮಹಾಪಾತಕಗಳೂ ಕೂಡ ಪಂಚವಿಧ ಶುದ್ಧಿಯಿಂದ ಶಿವಾರ್ಚನೆಯನ್ನು ಮಾಡಿದರೆ ಪರಿಹಾರವಾಗುವುವು. ಬ್ರಹ್ಮನೇ ಮೊದಲಾದ ದೇವತೆಗಳೂ, ಗುರು, ಶುಕ್ರಾದಿಗಳೂ ವಿಧ ವಿಧವಾದ ಲಿಂಗಗಳನ್ನು ಪೂಜಿಸಿ, ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಂಡಿರುವರು" ಎಂದು ಲಿಂಗಾರ್ಚನೆಯ ಶ್ರೇಷ್ಠತೆಯನ್ನು ಜಂಗಮರಿಗೆಲ್ಲಾ ವಿವರಿಸುತ್ತಾ ಪಶ್ಚಿಮಾಭಿಮುಖವಾಗಿ ಹೊರಟು ಆನಂತಶಯನ, ತಾಮ್ರಪರ್ಣಿ ಮೊದಲಾದ ಪುಣ್ಯಕ್ಷೇತ್ರಗಳನ್ನು ನೋಡುತ್ತಾ ಮಲೆಯಾಳ ದೇಶಕ್ಕೆ ಬಂದರು.

ಆ ರಾಜ್ಯದಲ್ಲಿ ಅರಸನು ಮೊದಲ್ಗೊಂಡು ಮಂತ್ರಿ, ಸೇನಾಧಿಪತಿ, ನ್ಯಾಯಾಧಿಪತಿ, ಗ್ರಾಮಾಧಿಪತಿಗಳೆಲ್ಲರೂ ಸ್ತ್ರೀಯರೇ ಆಗಿದ್ದರು. ಆ ದೇಶದ ಸ್ತ್ರೀಯರು ಆ ಜಂಗಮರನ್ನು ಒಲಿಸಿಕೊಳ್ಳು ಶಕ್ತಿದೇವತೆಯನ್ನು ಪೂಜಿಸಲು ಆ ಶಕ್ತಿದೇವತೆಗಳು ಈ ಶರಣರ ಸಮೀಪಕ್ಕೂ ಬರಲಾಗದೆ ಹೆದರಿ ಹಿಂದಕ್ಕೆ ಹೋಗುತ್ತಿದ್ದವು. ಮನ್ಮಥನ ಶತ್ರುವಾದ ಈಶ್ವರನ ಭಕ್ತರನ್ನು ಕೆಣಕುವುದಕ್ಕೆ ಪ್ರಯತ್ನಿಸಿದ ಆ ಸ್ತ್ರೀಯರು ತಲೆಶೂಲೆ, ಜ್ವರ ಮೊದಲಾದ ವ್ಯಾದಿಗಳಿಗೆ ಸಿಕ್ಕಿ ನರಳಲಾರಂಭಿಸಿದರು. ಹೀಗೆ ನರಳಾಡುತ್ತಿದ್ದಾಗ ಆ ರಾಜ್ಯದ ರಾಣಿಯು ಪ್ರಜ್ಞೆತಪ್ಪಿ ಬಿದ್ದಿರುವ ಸಮಯದಲ್ಲಿ ಅವಳಿಗೆ ಜ್ಞಾನೋದಯವಾಯಿತು. ಲೋಕರಕ್ಷಕನಾದ ಈಶ್ವರನು ನಮ್ಮನ್ನು ಕಾಪಾಡಲು ಬಂದಿದ್ದಾನೆ. ಅವನನ್ನು ನ್ಯಾಯವಾದ ರೀತಿಯಲ್ಲಿ ಕಂಡು ಅವರು ಅನುಗ್ರಹವನ್ನು ಪಡೆಯದೆ ತಪ್ಪು ಮಾಡಿದೆವೆಂದು ತಿಳಿದು ಅವರನ್ನೇ ಶರಣುಹೊಗುವೆನೆಂದು

ಸಿದ್ದಲಿಂಗೇಶ್ವರರನ್ನು ಧ್ಯಾನ ಮಾಡಲು ಅವರು ರೋಗವೆಲ್ಲವೂ ಮಾಯವಾಯಿತು. ರಾಣಿಯು ಗುರು ರಾಜರ ಬಳಿಗೆ ಬಂದು ನಮಸ್ಕರಿಸಿದಳು. ಸಿದ್ದಲಿಂಗೇಶ್ವರರು ಅವಳಿಗೆ ಭಸ್ಮವನ್ನು ಕೊಟ್ಟು ಹರಸಿದರು. ಅವಳ ಕೋರಿಕೆಯಂತೆ ಅಂದು ಅವಳ ಪಟ್ಟಣದಲ್ಲಿ ಭಿಕ್ಷವನ್ನು ಸ್ವೀಕರಿಸಿ. ಅವಳಿಗೆ ಶಿವಭಕ್ತಿಯ ಮಾರ್ಗವನ್ನು ಬೋಧಿಸಿ ಮುಂದೆ ಸಂಚಾರ ಮಾಡುತ್ತಾ ಕೊಡಗು, ಕೊಂಕಣ ಮೊದಲಾದ ಎಲ್ಲಾ ಪುಣ್ಯಕ್ಷೇತ್ರಗಳಲ್ಲಿಯೂ ಸಂಚರಿಸುತ್ತಾ ಶಿವಶರಣರೊಡನೆ ಹೋಗುತ್ತಿರಲು ಮಳೆಗಾಲವು ಪ್ರಾಪ್ತವಾಯಿತು. ಎಲ್ಲಿ ನೋಡಿದರೂ ನೀರಿನಿಂದ ತುಂಬಿರುವ ಕೆರೆ, ಕೊಳ, ನದಿಗಳೂ ಶೋಭಿಸುತ್ತಿದ್ದವು. ಸಿದ್ದಲಿಂಗೇಶನು ಪರುಶುರಾಮಕ್ಷೇತ್ರ, ಉಡುಪಿಯ ಕೃಷ್ಣ, ಶಂಕರನಾರಾಯಣ, ಕೊಲ್ಲೂರ ಮೂಕಾಂಬಿಕೆ ಇವುಗಳನ್ನೆಲ್ಲಾ ಸಂಧರ್ಶಿಸುತ್ತಾ ಬರುತ್ತಿರಲು ಒಂದು ಘೋರಾರಣ್ಯವು ಸಿಕ್ಕಿತು. ಆ ಅರಣ್ಯದಲ್ಲಿ ಒಬ್ಬ ದುಷ್ಟವ್ಯಾಧನು ಸುತ್ತಿನ ಐದುಗಾವುದಗಳ ಪ್ರಜೆಗಳನ್ನೂ ದಾರಿಕಾಯ್ದು ತಲೆ ಹೊಡೆದು ಜೀವಿಸುತ್ತಿದ್ದನು. ಇವನ ಹೆಸರು ಇರುಲ ಶರಣರು ಆ ಆರಣ್ಯಕ್ಕೆ ಬಂದ ಕೂಡಲೇ ಅವನು ತನ್ನ ಜೊತೆಯವರೊಡನೆ ಬಂದು ಇವರನ್ನು ಅಡ್ಡಗಟ್ಟಿದನು. ಸಿದ್ದೇಶ್ವರರು ಕೂಡಲೇ ಅವರು ಕಣ್ಣಿಗೆ ಬೇಕಾದ ಅಮೂಲ್ಯವಾದ ವಸ್ತ್ರಾಭರಣಗಳನ್ನು ಮುಂದಿಟ್ಟು "ತೆಗೆದುಕೊಳ್ಳಿರಿ" ಎಂದು ಹೇಳಿದರು. ಕಳ್ಳರು ಅದನ್ನು ತೆಗೆದುಕೊಳ್ಳಲು ಕೈ ಹಾಕಲು ಅವರು ಕಣ್ಣ ಗುಡ್ಡೆಗಳೆಲ್ಲ ತಿರುಗಿದಂತಾಗಿ ಕಣ್ಣೇ ಕಾಣಿಸದಂತಾಯಿತು. ಕಳ್ಳರು ಎಲ್ಲಿದ್ದವರು ಅಲ್ಲಿಯೇ ಸ್ತಂಭಿಭೂತರಾದರು. ಆಗ ಅವರೆಲ್ಲರೂ ನಿಂತಲ್ಲಿಯೇ ತಮ್ಮ ಅಪರಾದವನ್ನು ಮನ್ನಿಸಬೇಕೆಂದು ಶಿವನನ್ನು ಧ್ಯಾನಿಸತೊಡಗಿದರು. ಆ ವ್ಯಾದರ ಹೆಂಡತಿಯರು ಆನೆಯ ದಂತವನ್ನು ಸಿದ್ದೇಶನಿಗೆ ಕಾಣೀಕೆಯಾಗಿ ಕೊಟ್ಟು, ತಮ್ಮ ಗಂಡಂದಿರನ್ನು ಕಾಪಾಡೆಂದು ಗೋಳಾಡಿದರು. ಆ ಸಿದ್ದೇಶ್ವರರು ಮತ್ತೆ ಏನಾದರೂ ಕಳ್ಳತನವನ್ನು ಮಾಡಿದರೆ ಹೀಗೆಯೇ ಆಗುವುದೆಂದು ಎಚ್ಚರಸಿ ಕಣ್ಣನ್ನು ಕೊಟ್ಟರು. ಇರುಲನು ತನ್ನನ್ನು ಪವಿತ್ರ ಮಾಡಬೇಕೆಂದು ಬೇಡಿಕೊಳ್ಳಲು ಅವನಿಗೆ ಭಸ್ಮ, ರುದ್ರಾಕ್ಷಿ ಧಾರಣೆಯನ್ನು ಮಾಡಿಸಿ ಶಿವತತ್ವವನುಗ್ರಹಿಸಿ ಕಳುಹಿಸಿದರು.

ದುರಾತ್ಮನಾಗಿದ್ದ ಚೋರನು ಪರಮ ಶಿವಭಕ್ತನಾದನೆಂಬ ಸಮಾಚಾರವು ಎಲ್ಲಾ ಕಡೆಯಲ್ಲಿಯೂ ಹರಡಿತು. ಇದನ್ನೆಲ್ಲ ಕೇಳಿ ಜನರು ತಂಡೋಪಡಂಡವಾಗಿ ಬಂದು ಸಿದ್ದೇಶ್ವರರನ್ನು ಸಂದರ್ಶಿಸುತ್ತಿದ್ದರು.

## 6. ಉತ್ತರ ಭಾರತ ಸಂಚಾರ

ಆನಂತರ ಸಿದ್ದಲಿಂಗೇಶ್ವರರು ಉತ್ತರ ದೇಶಗಳಲ್ಲಿ ಪ್ರಯಾಣ ಮಾಡುತ್ತಾ ಹಿಮವತ್ಪರ್ವತ ಪ್ರದೇಶಕ್ಕೆ ಬಂದರು. ಆಗ ಅಲ್ಲಿ ಸಿದ್ದೇಶ್ವರಿಗೆ ಬಹುದೂರದ ಒಂದು ಗಟ್ಟಿಯಾದ ಧ್ವನಿಯು ಕೇಳಿಸಿತು. ಆ ಧ್ವನಿಯು ಒಬ್ಬ ಗೊಲ್ಲನ ಧ್ವನಿಯೆಂದು ತಿಳಿದು ಸಿದ್ದೇಶ್ವರರು ತಟ್ಟನೆ ಮಾಯದಿಂದ, ಅಲ್ಲಿಗೆ ಇನ್ನೂರು ಗಾವುದ ದೂರದಲ್ಲಿ "ಎನ್ನ ಗೋವುಗಳನ್ನು ಕಾಯೋ, ಶಿವನೇ ! ಎಂದು ಕೂಗುತ್ತಾ ಗೊಲ್ಲನಿದ್ದಡೆಗೆ ಬಂದರು. ಅಲ್ಲಿ ನೋಡಲಾಗಿ ಒಂದು ಹುಲಿಯು ಗೊಲ್ಲನ ಗೋವೊಂದನ್ನು ಹಿಡಿದುಕೊಂಡಿರಲು ಹುಲಿಯನ್ನು ಕೊಂದು ಗೋವನ್ನು ಕಾಪಾಡಿಕೊಟ್ಟರು.

ಆ ಗೊಲ್ಲನು ಒಂದು ದಿನ ಕರುಗಲ್ಲೇಶನ್ನನು ಪೂಜಿಸುತ್ತಿದ್ದಾಗ ಆಕಾಲದಲ್ಲಿ ಆಕಾಶದಲ್ಲಿ ಮೋಡವುಂಟಾಗಿ ಮಳೆ ಬರಲು ಪ್ರಾರಂಭವಾಯಿತು. ಕೂಡಲೇ ಮಹತ್ತರವಾದ ಮಿಂಚು ಹೊಳೆಯಿತು, ಗೊಲ್ಲನು ಮಿಂಚು ತಮ್ಮ ಕರುಗಲ್ಲೇಶನಿಗೆ ಎಲ್ಲಿ ತಾಕಿತೋ ಎಂದು ಅದಕ್ಕೆ ಎದುರಾಗಿ ತನ್ನ ಬೆನ್ನನ್ನು ಒಡ್ಡಿ ಲಿಂಗಕ್ಕೆ ಮರೆಯಾದನು. ಅದನ್ನು ಕಂಡು ಸಿದ್ದೇಶ್ವರರು ಆ ಮಿಂಚನ್ನು ಹಿಡಿದುಕೊಂಡು ಅವನನ್ನು ರಕ್ಷಿಸಿದರು. ಅನಂತರ ಆ ಗೊಲ್ಲನ ಭಕ್ತಿಗೆ ಮೆಚ್ಚಿ ಅವನ ಇಷ್ಟಾರ್ಥವೇನೆಂದು ಕೇಳಿದರು. ಗೊಲ್ಲನು "ತನಗೆ ಕಾಲವು ಒದಗಿದಾಗ ಕೈಲಾಸವನ್ನು ಕೊಡು" ಎಂದು ಕೇಳಿದನು. ಸಿದ್ದೇಶ್ವರರು ಹಾಗೆಯೇ ಆಗಲೆಂದು ವರವನ್ನು ಕೊಟ್ಟು ತನ್ನನ್ನೇ ಎದುರು ನೋಡುತ್ತಿದ್ದ ಶರಣರನ್ನು ನೋಡಬೇಕೆಂಬ ಕುತೂಹಲದಿಂದ ಶಿವಶರಣರು ತಂಗಿದ್ದ ಕೇದಾರಕ್ಕೆ ಬಂದರು. ಶರಣರು ಸಿದ್ದೇಶನನ್ನು ಕಂಡಕೂಡಲೇ ಹಸಿದವನು ಅಮೃತವನ್ನೂ ಕರುಡನು ಕಣ್ಣುಗಳನ್ನೂ ಪಡೆದಂತೆ ಆನಂದದಿಂದ ಅವರ ಮಹಿಮೆಯನ್ನು ಕೊಂಡಾಡಿದರು. ಅನಂತರ ಸಿದ್ದೇಶ್ವರರು ದಕ್ಷಿಣಕ್ಕೆ ಹಿಂತಿರುಗಿ ಅನೇಕ ಸ್ಥಳಗಳಲ್ಲಿ ತನ್ನ ಮಹಿಮೆಯನ್ನು ತೋರಿ ಆ ಮೇಲೆ ಜಂಗಮರೋಡನೆ ಗೂಳೂರು ಮಠಕ್ಕೆ ಬಂದರು. ಆಗ ಅವರ ಗುಂಪಿನವರಲ್ಲಿ ಒಬ್ಬನು ನಮ್ಮ ಸಿದ್ದಲಿಂಗೇಶ್ವರರಿಗೆ ಸರಿಯಾದ ಜಂಗಮ ಮತ್ತೊಬ್ಬರಿಲ್ಲವೆಂದು ಹೇಳಲು ಅವನ ಬಾಯಿ ನಿಂತು ಹೋಗಿ ಕೈಸನ್ನೆ ಮಾಡಲು ಪ್ರಾರಂಭಿಸಿದನು. ಇದನ್ನು ತಿಳಿದು ಸಿದ್ದೇಶ್ವರರು ಅವನಿಗೆ ಬುದ್ಧಿ ಹೇಳಿ ಶಿವಭಕ್ತರೆಲ್ಲರೂ ಒಂದೇ ಎಂದೂ ಅವರನ್ನು ನಿಂದಿಸಕೂಡದೆಂದೂ ಹೇಳಿ ಅವನಿಗೆ ನಾಲಿಗೆ ಕೊಟ್ಟು ಕಾಪಾಡಿದರು. ಅನಂತರ ಅಲ್ಲಿಂದ ಒಂದು ಯೋಜನೆ ದೂರದಲ್ಲಿ ಕೇತ್ಸಮುದ್ರವೆಂದು ಗ್ರಾಮದ ಹತ್ತಿರವಿದ್ದ ಒಂದು ಅರಕಲ್ಲು ಬಂಡೆಯ ಬಳಿಗೆ ಸಿದ್ದೇಶ್ವರರು ಶರಣರೆಲ್ಲರೂ ನೋಡಿ "ಈಶ್ವರನೇ ! ಈ ಸ್ಥಳದಲ್ಲಿ ನಿರ್ಮಲೋದಕವು ಬಂದರೆ ಸ್ನಾನ ಮಾಡಬಹುದು ಎಂದರು ಅವರು ಮಾತಿಗೆ ಪ್ರಗತಿಯಿಲ್ಲದೆ ಶಿವನು ತನ್ನ ಪಾದವನ್ನು ಕಲ್ಲಿನ ಮೇಲೆ ಊರಲು ಪಾವನವಾದ ಗಂಗೆಯ ಉದ್ಭವಿಸಿತು. ಅಂದಿನಿಂದ ಅದನ್ನು ಸಿದ್ದಗಂಗೆಯೆಂದು ಕರೆಯುತ್ತಾರೆ. ಆ ಪಾವನಕರವಾದ ಗಂಗೆಯ ನೀರಿನಲ್ಲಿ ಹಿರಿಯರೆಲ್ಲರೂ ಕೂಡ ಲಿಂಗಾರ್ಚನೆ ಮಾಡಿದರು.

ಈಗ ಆ ಸಿದ್ದಗಂಗಾ ಕ್ಷೇತ್ರವು ಅಲ್ಲಿ ನೆಲಸಿರುವ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಘನ ನೇತೃತ್ವ ನಿಮಿತ್ತ ಬಹಳ ಪ್ರಸಿದ್ದವಾದ ಮಹಾ ವಿದ್ಯಾಪೀಠವೂ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯ ಒಂದು ಮುಖ್ಯ ಯಾತ್ರಾ ಸ್ಥಳವು ಆಗಿರುತ್ತದೆ.

## 7. ಸಿದ್ದಗಂಗಾ ಕ್ಷೇತ್ರಾನುಷ್ಠಾನ

ಇಷ್ಟಾರ್ಥವನ್ನು ಕೊಡುವ, ಪಾಪಗಳನ್ನು ಪರಿಹರಿಸುವ ಪವಿತ್ರವಾದ ಸಿದ್ದಗಂಗಾ ತೀರ್ಥವನ್ನು ಸಿದ್ದಲಿಂಗೇಶ್ವರರು ತನ್ನ ಪಾದದಿಂದ ಸೃಜಿಸಿ ಶರಣರೊಡನೆ ಅಲ್ಲಿಯೇ ಶಿವನ ಧ್ಯಾನದಲ್ಲಿರುತ್ತಿರಲು ದ್ರಾವಿಡ ದೇಶದಿಂದ ಒಬ್ಬ ವೀರಣ್ಣಾರ್ಯನೆಂಬುವನು ವಿಷರೋಗಗ್ರಸ್ತನಾಗಿ ಉಬ್ಬಸದಿಂದ ನರಳುತ್ತಾ ಸಿದ್ದೇಶ್ವರರ ಬಳಿಗೆ ಬಂದನು. ಸಿದ್ದೇಶ್ವರರನ್ನು ತನ್ನ ದ್ರಾವಿಡ ಭಾಷೆಯಿಂದ ಅನೇಕ ವಿಧವಾಗಿ ಸ್ತೋತ್ರ ಮಾಡಿ ತನ್ನ ವಿಷವ್ಯಾಧಿಯನ್ನು ಪರಿಹರಿಸೆಂದು ಬಹಳವಾಗಿ ಬೇಡಿಕೊಂಡನು. ಆಗ ಸಿದ್ದಲಿಂಗೇಶ್ವರರು ಅವನನ್ನು "ಸಿದ್ದಗಂಗಾ ತೀರ್ಥದಲ್ಲಿ ಸ್ನಾನ ಮಾಡು, ನಿನ್ನ ವ್ಯಾಧಿಯೆಲ್ಲವೂ ಪರಿಹಾರವಾಗುದು. ಎಂದು ಅಪ್ಪಣೆ ಮಾಡಿದರು. ಅದೇ ಪ್ರಕಾರ ವೀರಣ್ಣಾರ್ಯನು ಸಿದ್ದೇಶ್ವರರ ಮಾತಿನಂತೆ ಆ ತೀರ್ಥದಲ್ಲಿ ಸ್ನಾನ ಮಾಡಲು ಅವನ ವಿಷರೋಗವೆಲ್ಲವೂ ಪರಿಹಾರವಾಯಿತು. ಆ ವೀರಣ್ಣಾರ್ಯನು ರೋಗದಿಂದ ಬಿಡುಗಡೆ ಹೊಂದಿ ಬಹಳ ಸಂತೋಷಪಟ್ಟು ಸಿದ್ದೇಶ್ವರರನ್ನು ತನ್ನ ಬಾಷೆಯಾದ ತಮಿಳು ಭಾಷೆಯಲ್ಲಿ ಸ್ತೋತ್ರ ಮಾಡಿದನು. ಆ ಭಾಷೆಯನ್ನು ತಿಳಿಯದ ರುದ್ರಗಣವೆಲ್ಲವೂ ಗುರುವನ್ನು ಅವನ ಸ್ತೋತ್ರದ ರೀತಿಯು ತಮಗೆ ತಿಳಿಯುವಂತೆ ಮಾಡಬೇಕೆಂದು ಕೇಳಿಕೊಂಡರು ಅವರ ಮಾತನ್ನು ಕೇಳಿ ಸಿದ್ದೇಶ್ವರರು ಆ ದ್ರಾವಿಡ ಶರಣನಿಗೆ ಕನ್ನಡ ಭಾಷೆಯು ಬರುವಂತೆ ಅನುಗ್ರಹಿಸಿದರು. ಅನಂತರ ವೀರಣ್ಣಾರ್ಯನು ಮನಮೋಹಕವಾದ ಕನ್ನಡ ಭಾಷೆಯಲ್ಲಿ ಸ್ತುತಿಸುವುದನ್ನು ಜಂಗಮರೆಲ್ಲರೂ ಕೇಳಿ ಸಂತೋಷಿಸಿದರು.

ಕನ್ನಡ ಭಾಷೆಯೇ ಬಾರದವನಿಗೆ ತಕ್ಷಣವೇ ಆ ಭಾಷೆಯನ್ನು ಅನುಗ್ರಹಿಸಿ ವಿಷ ರೋಗವನ್ನು ಕೂಡ ಪರಿಹರಿಸುವ ಶ್ರೇಷ್ಟವಾದ ತೀರ್ಥವನ್ನು ಅರೆಯ ಬಂಡೆಯಲ್ಲಿ ತನ್ನ ಪಾದದಿಂದ ಸೃಜಿಸಿ ಸಿದ್ದಲಿಂಗೇಶ್ವರರು ಅಲ್ಲಿಂದ ಮುಂದೆ ಕನ್ನಡನಾಡಿನಲ್ಲಿ ಸಂಚರಿಸುತ್ತಾ ಅಲ್ಲಲ್ಲಿ ಒಬ್ಬೊಬ್ಬರು ವಿರಕ್ತರನ್ನು ನಿಯಮಿಸುತ್ತಾ ಭಕ್ತಿಯಿಂದ ತನ್ನನ್ನು ಕರೆದವನಿಗೆ ಓ ಎಂದುಕೊಂಡು ಪ್ರತ್ಯಕ್ಷವಾಗಿ ಅವರವರ ಕೋರಿಕೆಗಳನ್ನು ನೆರವೇರಿಸುತ್ತಾ, ಎಲ್ಲಾ ಕಡೆಯಲ್ಲಿಯೂ ತನ್ನ ಕೀರ್ತಿಯು ಬೆಳಗುವಂತೆ ಮಹಿಮೆಯನ್ನು ತೋರಿಸುತ್ತಾ, ಪ್ರಕಾಶಿಸುತ್ತಿದ್ದರು. ಒಂದೊಂದು ಸಲ ಶರಣರ ಗುಂಪಿನಲ್ಲಿಯೂ ಒಂದೊಂದು ವೇಳೆ ನೆನೆದವರಿಗೆ ಪ್ರತ್ಯಕ್ಷನಾಗುತ್ತಲೂ, ಚಿನ್ಮಯಾಕಾರನಾಗಿ ತೀರ್ಥಗಿರಿಗೆ ಬಂದು ಗುಹೆಯಲ್ಲಿ ಇರುತ್ತಿದ್ದರು. ಅಲ್ಲಿ ಒಬ್ಬ ಶಿವಶರಣನು ಪ್ರತಿನಿತ್ಯವು ಈಶ್ವರನನ್ನು ಪೂಜಿಸುತ್ತಾ ಇದ್ದನು. ಅವನು ಗುಹೆಯೊಳಗೆ ಇರುತ್ತಿದ್ದ ಸಿದ್ದಲಿಂಗೇಶ್ವರರನ್ನು ಸೇವಿಸುತ್ತಾ, ಶೇಷ್ಟಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸುತ್ತಾ ಇರಲು ಅವನು ಶಿವನ ಅನುಗ್ರಹದಿಂದ ಹಾಗಾಲ್ವಾಡಿಯ ಪ್ರಾಂತ್ಯಕ್ಕೆ ಒಡೆಯನಾಗಿ ಶಾಲಿನಾಯಕನೆಂಬ ಹೆಸರಿನಿಂದ ರಾಜ್ಯವಾಳುತ್ತಿದ್ದನು. ನಿಜವಾದ ಭಕ್ತನೆಂದೆ ಇವನಂತೆ ಜ್ಞಾನಿಯಾಗಿಯೂ, ಅಹಂಕಾರವನ್ನು ಬಿಟ್ಟವನಾಗಿಯೂ, ಸಂತೋಷ ದುಃಖಗಳೆರಡನ್ನೂ ಒಂದೇ ಎಂದು ತಿಳಿದವನಾಗಿಯೂ ಭೂತದಯೆಯನ್ನು ಹೊಂದಿದವನಾಗಿಯೂ ಇರಬೇಕು. ಅಂಥವನೇ ನಿಜವಾದ ಭಕ್ತನೆನಿಸುವನು ಪರನಿಂದೆ, ಪರಹಿಂಸೆ, ಪರಸ್ವತ್ತನ್ನು ಅಪಹರಿಸುವುದು, ಪರಸ್ತ್ರಿಯರ ಸಂಗ ಇವುಗಳನ್ನು ಬಿಟ್ಟಿರಬೇಕು. ಗುರುವಿನ ಮಂತ್ರೋಪದೇಶವನ್ನು ಇಂತಹ ಸದ್ಗುಣಗಳಿಂದ ಕೂಡಿ ಶಾಲಿನಾಯಕನು ಶಿವನ ಕೃಪೆಯಿಂದ ಸುಖವಾಗಿದ್ದನು.

ಇತ್ತಲಾಗಿ ಸಿದ್ದೇಶರು ನಿಂತಿದ್ದಂತೆಯೇ ಕಲ್ಯಾಣದ ವೃಷಭೇಶ್ವರರ ದೇವಾಲಯಕ್ಕೆ ಪ್ರವೇಶಿಸಲು ಅನೇಕ ಜಂಗಮರೊಡನೆಯೂ,. ನಂದಿಯ ಧ್ವಜಗಳೊಡನೆಯೂ, ವಾದ್ಯಗಳಿಂದಲೂ ಆ ಪಟ್ಟಣದಲ್ಲಿ ದೊಡ್ಡ

ಜಾತ್ರೆಯು ನಡೆಯಿತು, ವೃಷಭೇಷರ ಆಲಯದಲ್ಲಿ ಭಕ್ತರಿಂದ ಧೂಪ, ದೀಪ, ನೈವೇದ್ಯ, ಅರತಿ ಮೊದಲಾದ ಸೇವೆಗಳು ನಡೆಯುತ್ತಿದ್ದವು. ಆ ವೇಳೆಯಲ್ಲಿ ಚಿನ್ನದ ಬಟ್ಟಲಿನಲ್ಲಿ ಹಾಲು ತುಪ್ಪವನ್ನು ಒಬ್ಬಳು ಕನ್ಯೆಯು ದೇವಾಲಯದ ಶಿಲಾ ವೃಷಭನ ಮುಂದಿರಿಸಲು ಸಿದ್ದಲಿಂಗೇಶ್ವರು ಅದನ್ನು ಭುಂಜಿಸೆಂದು ವೃಷಭೇಷನಿಗೆ ಅಪ್ಪಣೆ ಮಾಡಲು ಶಿವನ ಅಪ್ಪಣೆಯಂತೆ ನಿಜರೂಪಿನಿಂದ ಬಂದು ಅದನ್ನು ಸ್ವೀಕರಿಸಿದರು. ಹೀಗೆ ಶಿವನು ಜಂಗಮರೋಡನೆ ಇದ್ದುಕೊಂಡು ಬೇಕಾದ ಭಕ್ತರಿಗೆ ಪ್ರತ್ಯಕ್ಷನಾಗುತ್ತಲೂ, ಸ್ಮರಿಸಿದವರ ಕಷ್ಟವನ್ನು ಪರಿಹರಿಸುತ್ತಲೂ, ಕೆಲವು ವೇಳೆ ಸ್ವರಿಸಿದವರಿಗೆ ಓ ಎನ್ನುತ್ತಲೂ ನಾನಾ ರೂಪುಗಳನ್ನು ಹೊಂದುತ್ತಾ ಮೆರೆಯುತ್ತಿದ್ದರು. ಒಂದು ಸಲ ತುಮಕೂರಿನಲ್ಲಿ ತುಂಬೆಯ ಹೂವಿನ ಮಳೆಯನ್ನು ಕರೆಸಿದರು. ಮತ್ತೊಮ್ಮೆ ದೇವರಾಯನದುರ್ಗ, ಚನ್ನರಾಯಪಟ್ಟಣ, ಗೂಳೂರು ಮೊದಲಾದ ಆನೇಕ ಕಡೆಗಳಿಗೆ ಒಂದೇ ರಾತ್ರಿಯಲ್ಲಿ ನಾನಾ ರೂಪಿನಿಂದ ಹೋಗಿ ಬರುತ್ತಿದ್ದರು.

ಆಮೇಲೆ ಹಾಗಲವಾಡಿ, ಹೆಬ್ಬೂರು, ಕುಣಿಗಲು ಮುಂತಾದ ಸ್ಥಳಗಳಲ್ಲಿ ಜನರಿಗೆಲ್ಲ ದರ್ಶನವನ್ನು ಕೊಟ್ಟು ಅಲ್ಲಿಂದ ಮುಂದೆ ಹೋಗುತ್ತಿರಲು ಮನೋಹರವಾದ ಒಂದು ಬೆಟ್ಟವು ಕಾಣಿಸಿತು. ಅದರ ಹೆಸರು ಹುಲಿಯೂರುದುರ್ಗ ಅಲ್ಲಿಯೂ ಬಂಡೆಯಲ್ಲಿ ಸಿದ್ದಗಂಗೆಯನ್ನು ಬರಿಸಿ ಕೀರ್ತಿಯನ್ನು ಗಳಿಸಿದರು. ಆ ದುರ್ಗದಲ್ಲಿಯೇ ಅನೇಕ ತಪಸ್ವಿಗಳು ವಾಸಿಸುತ್ತಿದ್ದರು. ಅವರಲ್ಲಿ ಒಬ್ಬನು ಮಾತ್ರ ಸತ್ಯಶರಣನಾಗಿ ಶಿವಯೋಗತತ್ಪರನಾಗಿ ಹರಯೋಗಿಯಿಂಬ ಹೆಸರಿನಿಂದ ಪತಿವ್ರತೆಯಾಗದ ಹೆಂಡತಿಯೊಡನೆ ವಾಸಿಸುತ್ತಿದ್ದನು. ಅವನಿಗೆ ವೃದ್ಯಾಪವು ಬಂದು ಅವಸಾನ ಕಾಲವು ಪ್ರಾಪ್ತವಾಗಲು ಅವನ ಹೆಂಡತಿಯು ಶಿವನ ಧ್ಯಾನ ಮಾಡುತ್ತಿದ್ದ ಹಾಗಯೇ ಅವನ ಪ್ರಾಣವು ಹೋಯಿತು. ಅವರು ಎದೆಗುಂದದೆ ಶಿವನ ಧ್ಯಾನದಲ್ಲಿಯೇ ಇದ್ದು ಕೊಂಡು ಶವವನ್ನು ಶೃಂಗರಿಸಿ, ವಿಭೂತಿಯನ್ನು ಧರಿಸಿ ಸ್ಮಶಾನಕ್ಕೆ ತರುತ್ತಿರಲು ಸಿದ್ದಲಿಂಗೇಶರು ಅಲ್ಲಿಗೆ ಬಂದರು. ಇವರನ್ನು ಕಂಡೊಡನೆಯೇ ದುಃಖದಿಂದ ಕೂಡಿದ್ದ ಹೆಂಗಸು ನಮಸ್ಕರಿಸಿದಳು. ಶಿವನು "ಮುತ್ತೈದೆಯಾಗಿ ಬಾಳು" ಎಂದು ಹರಿಸಿದರು. ಅವಳ ಅತಿ ದುಃಖದಿಂದ ಪತಿಯನ್ನು ಕಳೆದುಕೊಂಡಿರುವ ತನಗೆ ಮುತ್ತೈದೆತನವು ಹೇಗೆ ಬಂದೀತು ? ಎಂದು ಕೇಳಲು ಸಿದ್ದೇಶನು ನಗುತ್ತಾ "ಮಗಳೇ! ನಿನ್ನನ್ನು ಮುತ್ತೈದೆಯಾಗಿರು ಎಂದು ಈಶ್ವರನು ಕರುಣಿಸಿದ್ದಾನೆ. ಅಲ್ಲಿ ನೋಡು" ಎಂದು ತೋರಿಸಲು ಶವವಾಗಿದ್ದ ಆ ಭಕ್ತನು ಬದುಕಿದುದನ್ನು ನೋಡಿ ಹೆಂಡತಿಯು ಕೈ ಹಿಡಿದು ಎಬ್ಬಿಸಿ ಸಿದ್ದಲಿಂಗೇಶ್ವರರ ಪಾದಗಳಿಗೆ ಇಬ್ಬರೂ ನಮಸ್ಕಾರ ಮಾಡಿದರು. ಕಾಲವಶನಾದ ಮನುಷ್ಯನಿಗೆ ಪ್ರಾಣವನ್ನು ಕೊಟ್ಟು ಚಿರಂಜೀವಿಯಾಗಿ ಮಾಡಿದ ಈ ಮಹಿಮೆಯನ್ನು ಕೇಳಿ ಎಲ್ಲರೂ ಬಹಳವಾಗಿ ಸ್ತೋತ್ರ ಮಾಡಿದರು. ಶರಣದಂಪತಿಗಳೋಡನೆ ಸಿದ್ದೇಶರು ಅವರು ಮನೆಗೆ ತೆರಳಿದರು.

## 8. ಕಗ್ಗೆರೆಯಲ್ಲಿ ಶಿವಯೋಗನಿರತ

ಸಿದ್ಧವಿದ್ಯಾಧರ ಗಂದರ್ವರಿಂದ ಓಲೈಸಲ್ಪಡುತ್ತಾ ಕೈಲಾಸದಲ್ಲಿ ಪರಮೇಶ್ವರನು ಓಲಗದಲ್ಲಿರುತ್ತಿರಲು ನಾರದಮಹರ್ಷಿಯು ಅಲ್ಲಿಗೆ ಬಂದನು. ಶಿವನ ಸಭೆಯವರು ಎದುರು ಗೊಂಡು ಸುಖಾಸನದಲ್ಲಿ ಕುಳ್ಳಿರಿಸಿ ಆರ್ಘ್ಯ ಪಾದ್ಯಾದಿಗಳಿಂದ ಸತ್ಕರಿಸಿದರು. ನಾರದನು ಈಶ್ವರನ್ನು ಅನೇಕ ವಿಧವಾಗಿ ಸ್ತೋತ್ರ ಮಾಡುತ್ತಿರಲು ಶಿವನು ಮೆಚ್ಚಿ, ಬಂದ ಕಾರ್ಯವೇನೆಂದು ಪ್ರಶ್ನೆ ಮಾಡಿದನು. ಆಗ ನಾರದನು "ಮಹಾದೇವನೇ, ಭೂ ಲೋಕದಲ್ಲಿ ಧರ್ಮವು ನೆಲೆಗೊಂಡಿದೆ. ಸಿದ್ದಲಿಂಗೇಶ್ವರನ ಅಪ್ಪಣೆಯಿಂದ ಸತ್ಯವು ವ್ಯಾಪಿಸಿತು. ಜನರು ನೀತಿವಂತರಾಗಿ ಗುರುಹಿರಿಯರಲ್ಲಿ ಭಕ್ತಿಯುಳ್ಳವರಾಗಿ ಯತಿನಿಂದೆ, ಮರದ್ವೇಷಾದಿಗಳನ್ನು ಬಿಟ್ಟು ಸದಾ ಶಿವಭಕ್ತಿಯಿಂದ ಕೂಡಿದವರಾಗಿ ಸೌಖ್ಯದಿಂದಿದ್ದಾರೆ. ಸಿದ್ದಲಿಂಗೇಶನು ಭೂ ಲೋಕದಲ್ಲಿ ತಾನೇ ಸಾಕ್ಷಾತ್ ಈಶ್ವರನೆಂಬ ಕೀರ್ತಿಯನ್ನು ಪಡೆಯುತ್ತಿದ್ದಾನೆ" ಎಂದು ಬಿನ್ನೈಸಿದನು.

ಇದನ್ನು ಕೇಳಿ ಪ್ರಮಥರು ಸಿದ್ದಲಿಂಗೇಶನ ಮುಂದಿನ ಕಥೆಯನ್ನು ಹೇಳಬೇಕೆಂದು ಈಶ್ವರನನ್ನು ಕೇಳಿಕೊಳ್ಳಲು ಅವನಿಗೆ ಈ ಮುಂದಿನ ಕಥೆಯನ್ನು ಹೇಳತೊಡಗಿದರು:–

ಭೂಮಿಯಲ್ಲಿ ಅತ್ಯಂತ ಮನೋಹರವಾದ ಕಗ್ಗೆರೆಯೆಂಬ ಒಂದು ಪಟ್ಟಣವು ಪ್ರಕಾಶಿಸುತ್ತಿದೆ. ಆ ಪಟ್ಟಣವು ಅನೇಕ ಕಾಲುವೆ, ಕೆರೆಕಟ್ಟೆಗಳಿಂದಲೂ, ವಿಧವಿಧವಾದ ಮರಗಿಡಗಳಿಂದ ಕೂಡಿದ ತೋಟಗಳಿಂದಲೂ, ವಿಶಾಲವಾದ ನೆಲ್ಲುಗದ್ದೆಗಳಿಂದಲೂ, ಪರಮ ಶಿವಭಕ್ತರ ಮನೆಗಳಿಂದಲೂ, ಜಂಗಮರ ಮಠಗಳಿಂದಲೂ ಶೋಭಿಸುತ್ತಿದೆ. ಆ ಪಟ್ಟಣದಲ್ಲಿ ಸದ್ಗುಣ ಸಂಪನ್ನನಾದ ಶಿವಭಕ್ತಿ ಪರಾಯಣನಾದ ನಂಬಣ್ಣಶೆಟ್ಟಿ ಎಂಬಾತನೊಬ್ಬನು ವಾಸಿಸುತ್ತಿದ್ದನು. ಆ ಪಟ್ಟಣವನ್ನು ಕಂಡು ಸಿದ್ದಲಿಂಗೇಶರು ಆ ಊರಿನ ದಕ್ಷಿಣ ದಿಕ್ಕಿನಲ್ಲಿ ಹರಿಯುತ್ತಿದ್ದ ನಾಗಿಣಿ ನದಿಯ ತೀರದಲ್ಲಿ ಶಿವಪೂಜೆಯನ್ನು ಮಾಡುತ್ತಿದ್ದರು. ನಂಬ್ಯಣ್ಣನು ಅಲ್ಲಿಗೆ ಬಂದು ಸಿದ್ದೇಶರನ್ನು ಕಂಡು ಅವರಿಗೆ ನಮಸ್ಕರಿಸಿ ಭಕ್ತಿಯಿಂದ ತನ್ನ ಮನೆಗೆ ಕರೆದು ಕೊಂಡು ಹೋದನು. ಅವನ ಉಪಚಾರವನ್ನು ಕೈಕೊಳ್ಳುತ್ತ ಒಂದಾನೊಂದು ದಿವಸ ಆ ಊರ ಹೊರಗಿನ, ಫಲಪುಷ್ಪಗಳಿಂದ ತುಂಬಿದ ಒಂದು ವನಕ್ಕೆ ಬಂದು ಅಲ್ಲಿ ಒಂದು ಮಾವಿನ ಮರದ ನೆರಳಿನಲ್ಲಿ ಸಿದ್ದೇಶನು ಕುಳಿತುಕೊಂಡಿರಲಾಗಿ ಗಿರಿಯಣ್ಣಗೌಡನೆಂಬ ಮತ್ತೋರ್ವ ಕಗ್ಗೆರೆ ನಿವಾಸಿಯು ಕಣ್ಣಿಗೆ ಬಿದ್ದನು ಭೂತಭವಿಷ್ಯದ್ವರ್ತಮಾನಗಳನ್ನು ಅರಿತವರಾದ ಸಿದ್ದಲಿಂಗೇಶರು ಗೌಡನನ್ನು ಕುರಿತು "ಧಾಳಿಕಾರರಿಂದ ಕಗ್ಗೆರೆಯು ಲೂಟಿಯಾಗುವುದು, ನೀವು ಕೂಡಲೇ ಬೇರೆ ಪಟ್ಟಣಕ್ಕೆ ಹೋಗಿ ವಾಸಮಾಡಿಕೊಂಡಿರಿ" ಎಂದು ಹೇಳಲು ಅವರು ಅದೇ ರೀತಿ ಬೇರೆ ಗ್ರಾಮಕ್ಕೆ ಹೋಗಿ ನೆಲಸಿದರು.

ಧಾಳಿಕಾರರು ಕಗ್ಗೆರೆಯನ್ನು ಲೂಟಿ ಮಾಡಿಕೊಂಡು ಹೊರಟು ಹೋದರು. ಸಿದ್ದಲಿಂಗೇಶರು ಹೇಳಿದ ಮಾತು ನಿಶ್ಚಯ ಎಂದು ಎಲ್ಲರೂ ಆಶ್ಚರ್ಯಪಟ್ಟರು. ಸಿದ್ದಲಿಂಗೇಶರು ನಂಬ್ಯಣ್ಣನಿಂದ ಬಿನ್ನಹ ಪಡೆದು, ಭಸಿತವನ್ನು ಸ್ವೀಕರಿಸಿದ್ದುದರಿಂದ ಆ ಸ್ಥಳವನ್ನು ಬಿಟ್ಟು ಹೋಗಲಾಗದೆಂದು ಅಲ್ಲಿಯೇ ಇದ್ದುಬಿಟ್ಟರು. ಅಲ್ಲಿ

ತನ್ನ ಕರಸ್ಥಲಲಿಂಗವನ್ನು ಪ್ರೀತಿಯಿಂದ ಆರು ವಿಧವಾದ ಭಕ್ತಿಯಿಂದ ಧ್ಯಾನಿಸುತ್ತಾ ಧ್ಯಾನದಲ್ಲೇ ತಲ್ಲೀನರಾಗಿ ಶಿವಸಮಾಧಿಯಲ್ಲಿದ್ದು ಶಿವಯೋಗಿ ದೇವನಂತೆ ಒಪ್ಪುತ್ತಿದ್ದರು. ಹೀಗೆ ಧ್ಯಾನರೂಢನಾಗಿ ಕುಳಿತಿರಲು ಅವರ ಸುತ್ತಲೂ ಗುಡಿಗೋಪುರದಂತೆ ಗೆದ್ದಲು ಹುಳುಗಳು ಹುತ್ತವನ್ನು ಕಟ್ಟಿದವು, ಮೇಲಿನಿಂದ ಇಳಿಯಬಿದ್ದುರುವ ಮರದ ಜಡೆಗಳ ಪೊದರಿನಲ್ಲಿ ಮೊಲಗಳು ಮನೆಮಾಡಿಕೊಂಡು ಹೋಗಿಯ ಬಿನ್ನಿನ ಪ್ರದೇಶದಲ್ಲಿ ಇರುತ್ತಿದ್ದವು. ಈ ಪ್ರಕಾರವಾಗಿ ಸಿದ್ದೇಶ್ವರರು ಹನ್ನೆರಡು ವರ್ಷಗಳ ಕಾಲ ಶಿವಯೋಗದಲ್ಲಿರಲು ಕಗ್ಗೆರೆಯ ಗೌಡನು ಪುನಃ ಗ್ರಾಮವನ್ನು ಹೊಸದಾಗಿ ಕಟ್ಟಿಕೊಂಡು ನಂಬಣ್ಣಶೆಟ್ಟಿ ಮೊದಲಾದವರನ್ನು ಆ ಗ್ರಾಮಕ್ಕೆ ಕರಿಸಿಕೊಂಡು ಸಂತೋಷದಿಂದ ವಾಸ ಮಾಡಿಕೊಂಡಿದ್ದನು. ಹೀಗಿರುವಾಗ ನಂಬ್ಯಣ್ಣ ಶೆಟ್ಟಿಯ ಗೋವೊಂದು ಪ್ರತಿ ದಿನವೂ ರಾತ್ರಿ ವೇಳೆಯಲ್ಲಿ ಹಾಲು ಕರೆಯದೆ ಒದಯುತ್ತಾ ಕರುವನ್ನೂ ಸಹ ಕುಡಿಸಿಕೊಳ್ಳದೆ ಇರುತ್ತಿರಲು ಹಸುವು ಹಾಲನ್ನು ಕೊಡದೆ ಇರುವುದಕ್ಕೆ ಕಾರಣವೇನೆಂದು ನಂಬ್ಯಣ್ಣಶೆಟ್ಟಿಯು ಚಿಂತಿಸುತ್ತಿದ್ದನು. ಸ್ತ್ರೀಯರು ದನ ಕಾಯುವವನೇ ಏನಾದರೂ ಕುಡಿದುಬಿಡುವನೋ, ಮೇವು ಸಾಲದೆ ಹೀಗೆ ಏನಾದರೂ ಆಗೆದೆಯೋ, ಮನೆದೇವರ ತೊಡಕಿನಿಂದೇನಾದರೂ ಹೀಗೆ ಆಗೆದೆಯೋ, ಎಂದು ದನ ಕಾಯುವವನನ್ನು ಕರೆದು ಅವನನ್ನು ಬೈದು ಹೀಗಾದುದಕ್ಕೆ ಕಾರಣವೇನೆಂದು ಕೇಳಿದರು. ಅವನು "ನಾಳೆ ಇದರ ನಿಜಾಂಶವನ್ನು ತಿಳಿದುಕೊಂಡು ಬರುವೆನು" ಎಂದು ಹೇಳಿ ಮಾರನೆಯ ದಿನ ಗೋಪಾಲಕನು ಊರಬಾಗಿಲಲ್ಲಿ ತಡೆದು ನಿಲ್ಲಿಸಿರಲು ಕಪಿಲೆಯೆಂಬ ಗೋವು ಗುಂಪನ್ನು ಹಿಂದೆಬಿಟ್ಟು ಬಾಲವನ್ನು ಎತ್ತಿಕೊಂಡು ತಕ್ಷಣವೇ ಮುಂದೆಹೋಗಿ ಎಂದಿನಂತೆ ಊರಾಚೆ ಕಾಡಿನ ಮಧ್ಯದಲ್ಲಿ ಹೂ ತೋಟದಲ್ಲಿದ್ದ ಒಂದು ಹುತ್ತದ ಮೇಲತ್ತಿ ನಾಲ್ಕು ಕಾಲುಗಳನ್ನೂರಿ ಸರಿಯಾಗಿ ನಿಂತು ದೇಹವು ಅಲ್ಲಾಡದಂತೆ ಕೆಚ್ಚಲಿನಿಂದ ಹಾಲನ್ನು ಧಾರೆ ಕಟ್ಟಿ ಕರೆಯುತ್ತಿದ್ದುದನ್ನು ಗೋಪಾಲಕನು ನೋಡಿ ಅಚ್ಚರಿಗೊಂಡು ದನಗಳೆಲ್ಲವನ್ನು ಮನೆಗಳಿಗೆ ಹೊಡದುಕೊಂಡು ಬಂದು, ನಡೆದ ಸಂಗತಿಯನ್ನು ನಂಬ್ಯಣ್ಣನಿಗೆ ತಿಳಿಸಿದನು. ಇದನ್ನು ಕೇಳಿ ಮನೆಯವರೆಲ್ಲರೂ ಮತ್ತಷ್ಟು ಅಚ್ಚರಿಗೊಂಡು ಇದು ಏನು ಕಾರಣವೆಂದು ತಿಳಿಯಲಾರದೆ ಇದ್ದರು. ಮಾರನೆಯ ದಿನ ನಂಬ್ಯಣ್ಣಶೆಟ್ಟಿಯು ಆ ಹೂವಿನ ತೋಟಕ್ಕೆ ಹೋಗಿ ಹೂವು ಪತ್ರೆಗಳನ್ನು ಎತ್ತುತ್ತಿದ್ದಾಗ ಕಪಿಲೆಯೆಂಬ ತನ್ನ ಗೋವು ಬಂದು ಹುತ್ತದ ಮೇಲೆ ಹಾಲನ್ನು ಕರೆಯುತ್ತಿದ್ದುದನ್ನು ನೋಡಿ ನಂಬ್ಯಣ್ಣನು ಆ ಹುತ್ತದ ಬಳಿಗೆ ಹೋಗಿ–ಮೊದಲು ಅಲ್ಲಿ ಇಲ್ಲದೆ ಇದ್ದುದು ಈಗ ಬೆಳೆದಿದೆಯೆಂದೂ ಅದರಲ್ಲಿ ಏನೋ ಆಶ್ಚರ್ಯವಿದೆಯೆಂದೂ ಯೋಚಿಸಿ ಹತ್ತಿರಕ್ಕೆ ಹೋಗಿ ನೋಡಲು ಅಲ್ಲಿದ್ದ ಮೊಲವು ಈಚೆಗೆ ಓಡಿ ಬಂದಿತು. ಅದು ಇದ್ದ ಸ್ಥಳದಲ್ಲಿ ಮರಿಗಳೂ ಇದ್ದವು. ಗೂಡು ಕಟ್ಟಿಕೊಂಡಿದ್ದ ಕಣಜವನ್ನೂ ಅದರ ಮರಿಗಳನ್ನೂ ಹೆಡೆಯನ್ನೇತ್ತುತ್ತಾ ಓಡಾಡುತ್ತಿದ್ದ ಸರ್ಪಗಳನ್ನೂ ಕಂಡು ಅವುಗಳ ಮಧ್ಯದಲ್ಲಿದ್ದ ಯತೀಶ್ವರನನ್ನು ನೋಡಿ ಆನಂದದಿಂದ ಆ ಊರಿನ ಆನೇಕ ಭಕ್ತರನ್ನು ಕರೆಯಿಸಿ ಗೌಡನನ್ನು ಬರಮಾಡಿಕೊಂಡು ಆ ಹುತ್ತದ ಸುತ್ತಲೂ ಇದ್ದ ಹುಲ್ಲು ಪೊದರುಗಳನ್ನು ತೆಗೆಸಿ ಆಲ್ಲಿದ್ದ ಶಿವಸ್ವರೂಪರಾದ ಸಿದ್ದೇಶರನ್ನು ತೋರಿಸಿದರು ಎಲ್ಲರೂ ಆ ವಿಚಿತ್ರವನ್ನು ನೋಡಿ ಕೊಂಡಾಡಿದರು ಆ ನಂತರ ನಂಬಣ್ಣನು ಆ ಜನರಿಗೆಲ್ಲಾ ಹೀಗೆಂದು ಹೇಳಿದನು–ಸಿದ್ಧಲಿಂಗೇಶರನ್ನು ಹಿಂದೆ ತನ್ನ ಮನೆಗೆ ಭಿನ್ನಹಕ್ಕೆ ಬರಬೇಕೆಂದು ಭಸಿತವನ್ನು ಕೊಟ್ಟು ವಿಜ್ಞಾಪಿಸಿಕೊಂಡಿದ್ದೆನು ಧಾಳೀಕಾರರಿಂದ ತೊಂದರೆ ಯುಂಟಾಗುವುದೆಂಬುದನ್ನು ತಿಳಿದು ಬೇರೆಗ್ರಾಮಕ್ಕೆ ಹೋಗಿರೆಂದು ಸಿದ್ದೇಶರು ಅಪ್ಪಣೆ ಮಾಡಿದ್ದರು ಅದರಂತೆ ನಾವು ಬೇರೆ ಗ್ರಾಮಕ್ಕೆ ಹೋಗಿ ಅಲ್ಲಿ ವಾಸಮಾಡಿಕೊಂಡಿದ್ದು ಈಗ ಮತ್ತೆ ಈ ಗ್ರಾಮಕ್ಕೆ ಬಂದಿದ್ದೇವೆ ಅಂದಿನಿಂದ ಈ ಶಿವಯೋಗಿಯು ಇಲ್ಲಿಯೇ ದ್ಯಾನದಲ್ಲಿ ಕುಳಿತು ತನ್ನ ಮೈ ಮೇಲೆಲ್ಲಾ ಪ್ರಾಣಿಗಳು ಕ್ರಿಮಿಕೀಟಗಳು ಓಡಾಡುತ್ತಾ ಗೂಡುಕಟ್ಟಿಕೊಂಡು ವಾಸಮಾಡುತ್ತಿದ್ದರೂ ಗಮನಿಸದೆ ಹಸಿವು ತೃಷೆಗಳನ್ನು ತಡೆದು ದ್ಯಾನಮಾಡುತ್ತಿರುವುದು ಆಶ್ಚರ್ಯ ಹಿಂದೆ ಪೊನ್ನಾಂಬಲದಲ್ಲಿ ಶಿವಚಿತ್ತನೆಂಬುವನು ಕಳ್ಳರಿಂದ ಮರಕ್ಕೆ ಕಟ್ಟಲ್ಪಟ್ಟಾಗ ಹಸಿವು ತೃಷೆಗಳನ್ನು ಲಕ್ಷಿಸದೆ ಶಿವದ್ಯಾನದಲ್ಲೇ ಮಗ್ನನಾಗಿದ್ದಾಗ ಪೊನ್ನಾಂಬಲೇಶನು ಅವನ

ಭಕ್ತಿಗೆ ಮೆಚ್ಚಿ ಅವನನ್ನು ತನ್ನಲ್ಲಿ ಅಡಗಿಸಿಕೊಂಡನು ಏಕಪಾದಮುನಿಯೆಂಬ ಮತ್ತೋರ್ವನು ಹುಲ್ಲಿನ ರಸವನ್ನು ಸೇವಿಸುತ್ತಾ ಪ್ರಾಣವನ್ನುಳಿಸಿ ಕೊಂಡಿದ್ದನು ಚಿರಿಮುಲಿಯರೆಂಬ ಶಿವಶರಣರು ಜಂಗಮ ಪಾದೋದಕ ಪ್ರಸಾದವಿಲ್ಲದೆ ಊಟ ಮಾಡುವುದಿಲ್ಲವೆಂದು ನಲವತ್ತೈದು ದಿನಗಳವರೆಗೆ ಆಹಾರವಿಲ್ಲದೆ ಇದ್ದನು ಹಾಗೆಯೇ ಈ ಸಿದ್ದೇಶನು ನನ್ನಿಂದ ಭಸಿತವನ್ನು ಸ್ವಿಕರಿಸಿ ಅಂದಿನಿಂದಲೂ ಹಸಿವು ಬಯಾರಿಕೆಗಳನ್ನು ಲಕ್ಷಿಸದೆ ಇರುತ್ತಾರೆ. ಈ ಮಹಾನುಭಾವರನ್ನು ಏಳಿಸುವುದು ಹೇಗೆ ? ಎಂದು ಕೇಳಲು ಅವರು ಪಂಚವಾದ್ಯಗಳನ್ನು ತಂದು ಧ್ವನಿ ಮಾಡಿ ಏಳಿಸಬೇಕೆಂದು ಸೂಚಿಸಲು ನಂಬ್ಯಣ್ಣನು ಅವುಗಳನ್ನು ತರಿಸಿ ವಾದ್ಯ ಮಾಡಿಸಲು ಸಿದ್ದೇಶರು ಎಚ್ಚರಹೊಂದಿ ಗಟ್ಟಿಯಾಗಿ ಶಿವನನ್ನು ಧ್ಯಾನಮಾಡುತ್ತಾ ಇದ್ದರು ಆಗ ಜನರು ಹುತ್ತವನ್ನು ಒಡೆದು ಈಚೆಗೆ ಕರೆದುಕೊಳ್ಳಬೇಕೆಂದು ಮಾತನಾಡಿ ಕೊಳ್ಳುತ್ತಿರಲು ಸಿದ್ದೇಶರು ಒಳಗಿನಿಂದಲೇ ಮಾತನಾಡುತ್ತಾ ಆ ಕೆಲಸ ಈಗಲೇ ಬೇಡ ಅಲ್ಲಿ ಗೂಡು ಕಟ್ಟಿಕೊಂಡಿರುವ ಪ್ರಾಣಿಗಳು ಮೊಟ್ಟೆ ಮರಿಗಳನ್ನು ಇಟ್ಟಿರುವುವು ಅವು ಇನ್ನು ಎಂಟು ಹತ್ತು ದಿನಗಳಲ್ಲಿ ಬಲಿಯುವುವು ಆನಂತರ ಹುತ್ತವನ್ನು ಒಡೆಯಿರಿ ಎಂದು ಅಪ್ಪಣೆ ಮಾಡಿದರು ಆದೇ ಪ್ರಕಾರವಾಗಿ ಜನರು ಎಂಟು ಹತ್ತು ದಿನಗಳ ನಂತರ ನಂಬ್ಯಣ್ಣನಿಗೆ ತಿಳಿಸಲು ಅವನು ತಥೇಚ್ಚವಾಗಿ ಹಾಲನ್ನು ತಂದು ಆ ಹುತ್ತದ ಮೇಲೆ ಸುರಿಸಿ ಅದನ್ನು ಕರಗಿಸಿದನು. ಆನಂತರ ಯತೀಶ್ವರರಿಗೆ ಪಂಚಾಮೃತ ಸ್ನಾನವನ್ನು ಮಾಡಿಸಿ ಶುಭ್ರವಸ್ತ್ರವನ್ನು ಧರಿಸಿ ವೈಭವದಿಂದ ತನ್ನ ಮನೆಗೆ ಕರೆದುಕೋಂಡು ಹೋದನು ಅಲ್ಲಿ ರತ್ನಖಚಿತವಾದ ಅಸನದಲ್ಲಿ ಕುಳ್ಳಿರಿಸಿ ಸತ್ಕರಿಸಿದನು ಪ್ರತಿದಿನವೂ ಅವರ ಪಾದೋದಕ ಪ್ರಸಾದವನ್ನು ಸ್ವೀಕರಿಸುತ್ತಾ ಅವರ ಸೇವೆಯನ್ನು ಭಕ್ತಿಯಿಂದ ನಡೆಸುತ್ತಿದ್ದನು ಸಿದ್ದೇಶರು ಅವನ ಸೇವೆಯನ್ನು ಕೈಗೊಳ್ಳುತ್ತಾ ತೋಟದಲ್ಲಿ ಯೋಗ ಸಮಾದಿಯಲ್ಲಿದ್ದುದರಿಂದ ತೋಂಟದಾರ್ಯ ರೆಂಬ ಖ್ಯಾತಿಯನ್ನು ಪಡೆದು ಕೆಲವು ಕಾಲ ಅಲ್ಲಿಯೇ ಇದ್ದರು.

ತೋಂಟದ ಯತೀಶ್ವರ ಕೀರ್ತಿಯು ಎಲ್ಲಾ ಕಡೆಯಲ್ಲಿಯೂ ಹರಡಿತು. ಇವರನ್ನು ಸೇವಿಸಲು ಆನೇಕ ಗಣವರ್ಯರು ಕಗ್ಗೆರೆಗೆ ಬಂದರು. ಇವರಲ್ಲಿ ಪಟ್ಟದ ದೇವರಾದ ಗುರುಬೋಳಬಸವಾರ್ಯನೂ, ಸಪ್ಪೆಯ ದೇಶಿಕನೂ ಸಿದ್ದಮಲ್ಲೇಶನೂ ಇವರೆ ಮೊದಲಾದ ಅನೇಕರಿದ್ದರು, ಪ್ರತಿದಿನವು ಅನೇಕರು ಸಿದ್ದೇಶರನ್ನು ನೋಡಿ ತಮ್ಮ ಇಷ್ಟಾರ್ಥವನ್ನು ಪಡೆದು ಕೊಂಡು ಹೋಗುತ್ತಿದ್ದರು.

ಹೀಗೆ ಅತ್ಯಂತ ಮಹಿಮೆಯಿಂದ ಕೂಡಿದ ತೋಂಟದ ಯತೀಶ್ವರರು ಕಗ್ಗರೆಯ ಪುಷ್ಪವಾಟಿಯಲ್ಲಿ (ಗೂವಿನ ತೋಟದಲ್ಲಿ) ಇರುತ್ತಿರಲು ಒಂದು ದಿನ ನಂಬ್ಯಣ್ಣಶೆಟ್ಟಿಯ ಮನೆಯ ದಾಸಿಯೊಬ್ಬಳು ಮನೆಯ ಯಜಮಾನರ ಅಪ್ಪಣೆಯಿಲ್ಲದೆ ಹಸುವಿನ ಹಾಲನ್ನು ಕರೆದು ಕೆಂಪಗೆ ಕಾಯಿಸಿ ತಂದು ಸಿದ್ದೇಶ್ವರರ ಪಾದಕಮಲಕ್ಕೆ ನಮಿಸಿ ಸ್ವೀಕರಿಸಬೇಕೆಂದು ಕೇಳಿಕೊಳ್ಳಲು ಯತಿಶ್ರೇಷ್ಠರು "ಎಲೆ ಮಗಳೆ, ಬೇಡ" ಎಂದೆನ್ನಲು, ದಾಸಿಯು ಬಹಳ ಬೇಡಿಕೊಳ್ಳಲು ಕೊನೆಗೆ ಅವರ ಭಕ್ತಿಗೆ ಮೆಚ್ಚಿ ಸೇವಿಸಿದರು. ಬಳಿಕ ಮನೆಯ ಒಡತಿಯು ಪಾತ್ರೆಯಲ್ಲಿ ಹಾಲು ಇಲ್ಲದುದನ್ನು ಕಂಡು ದಾಸಿಯುನ್ನು ಕೇಳಲು ಅವಳು ನಡೆದ ಸಮಾಚಾರವನ್ನು ಹೇಳಿಬಿಟ್ಟಳು. ಒಡತಿಯು ಕೋಪದಿಂದ ನನ್ನ ಅಪ್ಪಣೆಯಿಲ್ಲದೆ ಏಕೆ ತೆಗೆದುಕೊಂಡು ಹೋದೆ ಎಂದು ಗದರಿಸಿ ಬಯ್ದಳು. ಆ ರಾತ್ರಿ ಹಾಲನ್ನು ಕರೆಯಲು ಹೋದಾಗ ಹಸುಗಳು ಹಾಲಿಗೆ ಬದಲು ರಕ್ತವನ್ನು ಕರೆದವು. ಈ ವಿಷಯವನ್ನು ಅವಳು ಯಜಮಾನನಿಗೆ ಹೇಳಲು ನಂಬ್ಯಣ್ಣನು ಇದು ಸಿದ್ದಲಿಂಗೇಶ್ವರರ ಮಯೆಯೇ ಇರಬೇಕೆಂದು ಊಹಿಸಿ ಹೆಂಡತಿಯನ್ನು "ಏನು ತಪ್ಪು ಮಾಡಿದೆ ?" ಎಂದು ಗದರಿಸಿದನು. ಎಲ್ಲಾ ವಿಷಯವನ್ನೂ ತಿಳಿದ ಕೂಡಲೇ ಸಿದ್ದಲಿಂಗೇಶ್ವರರ ಬಳಿಗೆ ಹೋಗಿ ಸರ್ವಾಪರಾಧವಾಯಿತೆಂದು ಅವರಿಗೆ ನಮಸ್ಕರಿಸಿ ಮನ್ನಿಸಬೇಕೆಂದು ಕೇಳಿಕೊಂಡನು. ಸಿದ್ದೇಶರು ಅವನನ್ನು ಮನ್ನಿಸಿದರು. ಅವನ ಗೋವುಗಳು ಮೊದಲಿನಂತೆಯೇ ಹಾಲನ್ನು ಕರೆಯುತ್ತಾ ಸುಖದಿಂದದ್ದವು.

## 9. ತುಮಕೂರಿನಲ್ಲಿ ಭಕ್ತಾನುಗ್ರಹ

ಪವಿತ್ರ ಚಾರಿತನಾದ ಸಿದ್ದಲಿಂಗೇಶರ ಕೀರ್ತಿಯನ್ನು ಕೇಳಿ ತುಮಕೂರಿನ ಭಕ್ತರು ಬಂದು ತಮ್ಮನ್ನು ಪವಿತ್ರರನ್ನಾಗಿ ಮಾಡಬೇಕೆಂದು ಬೇಡಿಕೊಳ್ಳಲು ಸಿದ್ದೇಶ್ವರು ಒಪ್ಪಿದರು. ಆತಿಶಯವಾದ ಪಂಚವಾದ್ಯ ಮೊದಲಾದ ವೈಭವಗಳಿಂದ ಅಲ್ಲಿಗೆ ಬಿಜಯಮಾಡಿಸಿ ಆ ಊರಿನ ದಕ್ಷಿಣ ದಿಕ್ಕಿನಲ್ಲಿದ್ದ ವೃಷಭೇಶನು ದೆವಾಲಯದಲ್ಲಿ ಬಿಡಾರ ಮಾಡಿಸಿದರು. ಅಲ್ಲಿಗೆ ಆನೇಕ ಭಕ್ತರು ಬಂದು ಸೇವಿಸುತ್ತಿದ್ದರು. ಆ ಸಮಯದಲ್ಲಿ ಪ್ರಭುಶೆಟ್ಟಿ ಎಂಬುವನು ಸಿದ್ದಲಿಂಗ ಯತಿಯ ಪಾದಗಳಿಗೆ ನಮಸ್ಕರಿಸಿ ಭಸಿತವನ್ನು ಕೊಟ್ಟು ಕರುಣದಿಂದ ತನ್ನ ಮನೆಗೆ ಬರಬೇಕೆಂದು ಕೇಳಿಕೊಂಡನು. ಗುರುವು ಅದನ್ನು ಪ್ರೀತಿಯಿಂದ ಅಂಗೀಕರಿಸಿದರು. ಆ ವೇಳೆಗೆ ಸಂಧ್ಯಾ ಕಲಾವಾಗಲು ಚಂದ್ರೋದಯವಾದ ಮೇಲೆ ಯತಿಶ್ರೇಷ್ಟರಾದ ಸಿದ್ದೇಶರು ಎಲ್ಲಾ ವಿರಕ್ತರೊಡಗೂಡಿ ಭಕ್ತಶ್ರೇಷ್ಟನಾದ ಪ್ರಭುಶೆಟ್ಟಿಯ ಮನೆಗ ಹೊರಟರು., ಸಿದ್ದೇಶ್ವರರನ್ನು ಪಲ್ಲಕ್ಕಿಯಲ್ಲಿ ಕುಳ್ಳರಿಸಿ ಆನೆ ಕುದುರೆಗಳ ಮೇಲೆ ಇತರ ಷಟ್ಸಸ್ಥಲಜ್ಞಾನಿಗಳು ಕುಳಿತುಕೊಂಡು, ಭೇರಿವಾದ್ಯ ಮೊದಲಾದ ಸಂಭ್ರಮದೊಡನೆ ಹೊರಟರು. ದಾರಿಯುದ್ದಕ್ಕೂ ಅನೇಕರು ಸಿದ್ದೇಶರನ್ನು ನೋಡಲು ನೆರೆದಿದ್ದರು. ಆರತಿಯನ್ನು ಬೆಳಗುತ್ತಲೂ ಶೋಭಾನೆಯನ್ನು ಹಾಡುತ್ತಲೂ ಸ್ತ್ರೀಯರೂ ಅಲ್ಲಲ್ಲಿ ನಿಂತಿದ್ದರು. ಈ ವಿಧವಾದ ಸಂಭ್ರಮದಿಂದ ಪ್ರಭುಶೆಟ್ಟಿಯ ನಿತ್ಯಾನಂದನೆನಿಸಿದ ಶರಣವಂದ್ಯನಾದ ಸಿದ್ದಲಿಂಗೇಶರನ್ನು ಪ್ರಯಾಣ ಮಾಡಿಸಿಕೊಂಡು ಬಂದು ತಳಿರು ತೋರಣಗಳಿಂದ ಅಲಂಕೃತವಾದ ಮಂಟಪದಲ್ಲಿ ರತ್ನ ಖಚಿತವಾದ ಸಿಂಹಾಸನದಲ್ಲಿ ಕುಳ್ಳರಿಸಿದನು. ಆನಂತರ ಪ್ರಭುಶೆಟ್ಟಿಯು ಅತಿಸಯಾನಂದದಿಂದ ಕೂಡಿ ಆನಂದ ಭಾಷ್ಪ ಸುರಿಸುತ್ತಾ ತೋಂಟದಾರ್ಯರ ಪಾದಗಳೀಗೆ ನಮಸ್ಕರಿಸಿ ಅವರ ಸುತ್ತಲೂ ಕುಣಿಯುತ್ತಾ, ಹಾಡುತ್ತಾ, ಗುರುವನ್ನು ನಾನಾ ವಿಧವಾದ ಆರ್ಚನೆಗಳಿಂದ ಸೇವಿಸುತ್ತಿದ್ದನು. ಸಿದ್ದೇಶರು ಶಿವಪೂಜೆಯನ್ನು ಮಾಡುವ ಸಮಯಕ್ಕೆ ನೈವೇದ್ಯವನ್ನು ಕೊಟ್ಟು ತಾಂಬೂಲ, ನಿರಾಜನ ಮೊದಲಾದ ಉಪಚಾರಗಳನ್ನೆಲ್ಲಾ ನೆರವೇರಿಸಿದನು. ಆಗ ಒಬ್ಬ ಭಕ್ತನು "ನಾನು ತುಂಬೇ ಹೂವಿನಿಂದ ಆರ್ಚನೆ ಮಾಡುವ ನಿಯಮವುಂಟು, ಅದು ಇಲ್ಲದಿದ್ದರೆ ಪ್ರಸಾದ (ಭೋಜನ) ಮಾಡುವುದಿಲ್ಲ ಎಂದು ಹೇಳಲು ಸಿದ್ದೇಶ್ವರರು ಆತನನ್ನು ನೋಡಿ ಕರುಣದಿಂದ ಬೇಗನೆ ತುಂಬೇ ಹೂವಿನ ಮಳೆಯನ್ನು ಕರೆಸಿದರು. ಆ ಭಕ್ತನು ಬಹಳ ಸಂತೋಷದಿಂದ ಲಿಂಗಾರ್ಚನೆ ಮಾಡಿದನು. ಸಿದ್ದೇಶರ ಪ್ರಸಾದವನ್ನು ಎಲ್ಲರೂ ಸ್ವೀಕರಿಸಿದರು. ತುಂಬೇ ಹೂವಿನ ಮಳೆಯನ್ನು ಕರಿಸಿದುದಕ್ಕಾಗಿ ಎಲ್ಲರೂ ಬಹಳ ಆಶ್ಚರ್ಯಪಟ್ಟರು.

ತೋಂಟದ ಯತೀಂದ್ರರು ಪ್ರಭುಶೆಟ್ಟಿ ಮುಂತಾದವರಿಂದ ಉಪಚರಿಸಿಕೊಂಡು ಅನಂತರ ತುಮಕೂರನ್ನು ಬಿಟ್ಟು ಅನ್ನದಾನು ಮಲ್ಲಿಕಾರ್ಜುನ ದೇವಾಲಯಕ್ಕೆ ಬಂದು ನಿಂತರು. ಎಲೆಯ ಪರ್ವಯ್ಯನೆಂಬುವನು ತನ್ನ ಪತ್ನಿ ಲಿಂಗಮ್ಮನೊಡನೆ ಮೂರು ವರ್ಷದ ಬಾಲಕನನ್ನು ಎತ್ತಿಕೊಂಡು ಸಿದ್ದೇಶ್ವರರ ಹರಕೆಯನ್ನು ಒಪ್ಪಿಸಬೇಕೆಂದು ಬಂದನು ಬಂದ ಕೂಡಲೇ ಪಾದಗಳಿಗೆ ನಮಸ್ಕರಿಸಿ ಗಣಪರ್ವವನ್ನು ಮಾಡಿ ಸುಖವಾಗಿರಲು ಅಷ್ಟರಲ್ಲಿಯೇ ಮಾರನೆಯ ದಿನ ಬೆಳಗಿನ ವೇಳೆಗೆ ಮಗುವಿಗೆ ಜ್ವರವು ಬಂದಿತು. ಅನಂತರ ಏಳೆ ದಿನಕ್ಕೆ ಮರಣವನ್ನು ಹೊಂದಿತು. ತಾಯಿ ತಂದೆಗಳು ಗೋಳಾಡುತ್ತಾ ಸತ್ತ ಮಗುವನ್ನು ಸಿದ್ದೇಶ್ವರ ಪಾದಗಳ ಮೇಲೆ ಹಾಕಿ ತಮ್ಮನ್ನು ರಕ್ಷಸಬೇಕು ಎಂದು ಗುರುವನ್ನು ಬಹಳ ದೈನ್ಯದಿಂದ ಬೇಡಿಕೊಳ್ಳುತ್ತಿರಲು ಸಿದ್ದೇಶ್ವರರು ತನ್ನ

ಕೈಯಿಂದ ಭಸಿತವನ್ನು ತೆಗೆದು ಶಿಶುವಿನ ಹಣೆಗೆ ಹಚ್ಚಲು ಮಗುವಿನ ಪ್ರಾಣವು ಬಂದಿತು. ತಂದೆ ತಾಯಿಗಳು ಬಹಳ ಆನಂದಿಸಿದರು. ಇದನ್ನು ನೋಡಿ ಭಕ್ತರೆಲ್ಲರೂ ಆಶ್ಚರ್ಯಪಟ್ಟು ಸಿದ್ದೇಶರನ್ನು ಕೊಂಡಾಡಿದರು.

ಬಳಿಕ ಮತ್ತೊಂದು ದಿನ ಸಿದ್ದೆಶರಿಂದ ಕಣ್ಣುಗಳನ್ನು ಪಡೆಯಲು ಕುಂತಳ ದೇಶದಿಂದ ಒಬ್ಬ ಜಂಗಮನು ಬಂದು ಪಾದಗಳ ಮೇಲೆ ಬಿದ್ದು "ಕಣ್ಣುಗಳನ್ನು ಕೊಡಬೇಕು" ಎಂದು ಬೇಡಿಕೊಳ್ಳಳು, ಅವನನ್ನು "ನೀನು ಹೊರಗೆ ನೋಡದೆ ಶಿವನಲ್ಲಿ ಜ್ಞಾನವನ್ನು ಇಡು" ಎಂದು ಶಿವನು ಹೇಳಿದ್ದಾನೆಯೇ ಹೊರತು ನಿನಗೆ ಕಣ್ಣುಗಳಿಲ್ಲದೆ ಇಲ್ಲ ಎಂದು ತಲೆಯನ್ನು ಹಿಡಿದೆತ್ತಿ ಈಗ ನೋಡು ಶರಣರನ್ನು ಎನ್ನಲು ಆಗ ಅವನಿಗೆ ಕಣ್ಣುಗಳು ಬಂದು ಅವನು ಎಲ್ಲರನ್ನೂ ಪೂರಶಿವಮೂರ್ತಿಯಾದ ಸಿದ್ದಲಿಂಗೇಶರನ್ನೂ ನೋಡಿ ಆನಂದಿಸಿದನು.

ಈ ಸುದ್ದಿಯು ಎಲ್ಲಾ ಕಡೆಯಲ್ಲಿಯೂ ಹರಡಿತು. ಈ ವಾರ್ತೆಯನ್ನು ಕೇಳಿ ಒಬ್ಬ ಹುಟ್ಟು ಕುರುಡಳೂ ಬಂದು ತೋಂಟದ ಯತೀಂದ್ರನಿಂದ ಕಣ್ಣುಗಳನ್ನು ಪಡೆದಳು. ಇನ್ನೊಬ್ಬ ಸ್ತ್ರೀಯು ಸಿದ್ದೇಶ್ವರನ ಬಳೀಗೆ ಹೋಗಿ ಕಣ್ಣುಗಳನ್ನು ಪಡೆಯಲು ಸಾಮರ್ಥ್ಯವಿಲ್ಲದೆ ಇದ್ದಲಿಯೇ ಸಿದ್ದೇಶರನ್ನು ಧ್ಯಾನಿಸುತ್ತಾ ಕಣ್ಣುಗಳನ್ನು ಪಡೆದಳು. ಹೀಗೆ ವಿಧ ವಿಧವಾಗಿ ಆನೇಕ ಭಕ್ತರು ಬಂದು ಸಿದ್ದೇಶ್ವರಲ್ಲಿಗೆ ಗಣಪರ್ವವನ್ನು ಮಾಡಿ ತಮ್ಮ ಇಷ್ಟಾರ್ಥವನ್ನು ಪಡೆದುಕೊಳ್ಳುತ್ತಿದ್ದರು. ಒಂದು ಸಲ ಐನೂರು ಜನ ಚರಮೂರ್ತಿಗಳು ತೋಂಟದ ಯತೀಶರನ್ನು ನೋಡಲು ಬಂದರು. ಅವರಿಗೆ ಲಿಂಗಾರ್ಪಿತಕ್ಕೆ ಸಾಕಾದಷ್ಟು ಅನ್ನವಿಲ್ಲದಿರಲು ಯಾತೀಶರು ಭಸಿತವನ್ನು ಹಿಡಿದು ಇದ್ದಷ್ಟು ಅನ್ನವನ್ನೇ ಎಲ್ಲರಿಗೂ ಆಗುವಂತೆ ಅನುಗ್ರಹಿಸಿದರು. ಎಲ್ಲರೂ ಕೊಂಡಾಡಿ ಕುಣಿದಾಡಿದರು.

## 10. ಶಿವಗಂಗೆ, ನಾಗಸಮುದ್ರ, ಎಡೆಯೂರು

ಹೀಗೆ ತೋಂಟದಾರ್ಯನು ಪ್ರಯಾಣ ಮಾಡುತ್ತ ಷಟ್ಸ್ಥಲ ಬ್ರಹ್ಮಿಗಳೊಡನೆ ಕಕುದ್ಗಿರಿ (ದಕ್ಷಿಣ ಕಾಶಿ ಶಿವಗಂಗೆ) ಅಲ್ಲಿಂದ ಮುಂದೆ ನಾಗಸಮುದ್ರಕ್ಕೆ ಬಂದರು ಆ ವೇಳಗೆ ಮಳೆಗಾಲ ಪ್ರಾಪ್ತವಾಯಿತು. ಆಗ ತೋಂಟದ ಸಿದ್ದಲಿಂಗೇಶರು ಊರ ಹೊರಗಿನ ಉದ್ಯಾನದಲ್ಲಿ ಹುಲ್ಲು ಹಸಲೆಯ ಮೇಲೆ ಗದ್ದುಗೆಯನ್ನು ಹಾಕಿಸಿಕೊಂಡು ಕುಳಿತಿದ್ದರು. ಆಗ ಮಹತ್ತರವಾದ ಮಳೆಯು ಬರುವಂತಾಯಿತು. ಭಕ್ತರೆಲ್ಲರೂ ಹತ್ತಿರದಲ್ಲಿದ್ದ ಕಲ್ಲಿನಾಥನಾಲಯಕ್ಕೆ ದಯಮಾಡಿಸಬೇಕೆಂದು ಪ್ರಾರ್ಥಿಸಲು ಎಲ್ಲರೊಡನೆ ಆ ದೇವಾಲಯಕ್ಕೆ ಹೋದರು. ಬಾಗಿಲು ಹಾಕಿದ್ದಿತು. ಮಳೆಯು ಬೀಳುವುದಕ್ಕೆ ಪ್ರಾರಂಭವಾಯಿತು. ಎಲ್ಲರೂ ಹೊರಗೆ ನಿಂತು ಮಳೆಯಲ್ಲಿ ನೆನೆಯುತ್ತಿದ್ದರು. ಆಗ ಕಲ್ಲಿನಾಥನು ತಾನೇ ಬಂದು ಬೀಗ ಹಾಕಿದ್ದ ಬಾಗಿಲು ಗಿರಗಿರೆನ್ನುವಂತೆ ಶಬ್ಧಮಾಡಿ ಬಾಗಿಲನ್ನು ತೆರೆದನು. ಎಲ್ಲರೂ ಒಳಕ್ಕೆ ಹೋಗಿ ಸಂತೋಷದಿಂದ ಕುಳಿತುಕೊಂಡರು. ಮಳೆಯು ಗುಡುಗು ಸಿಡಿಲುಗಳಿಂದ ಧಾರಾಕಾರವಾಗಿ ಸುರಿಯುತ್ತಿತ್ತು. ಸ್ವಲ್ಪ ಹೊತ್ತಾದ ಮೇಲೆ ಊರಿನವರು ಬಂದು ಮಾರ್ಯಾದೆಯಿಂದ ಗುರುವನ್ನು ಊರಿನ ಚೆನ್ನವೀರೇಗೌಡನ ಮನೆಗೆ ಬಿಜಯ ಮಾಡಿಸಿದರು. ಅಲ್ಲಿ ಆನೇಕ ವಿಧವಾದ ಸೇವೆಯನ್ನು ಕೈಕೊಳ್ಳುತ್ತಾ ಆನಂದದಿಂದ ಇರುತ್ತಿದ್ದರು.

ಹೀಗಿರುತ್ತಿರಲು ಎಡೆಯೂರಿನ ಭಕ್ತರು ತಮ್ಮ ಊರಿಗೆ ಬಂದು ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳಲು ಅವರ ಕೋರಿಕೆಯನ್ನು ನೆರವೇರಿಸಲು ಹೊರಟು ಪ್ರಯಾಣ ಮಾಡುತ್ತಾ ದಾರಿಯಲ್ಲಿ ತೊರೆಯು ತುಂಬಿ ಹರಿಯುತ್ತಾ ಅಡ್ಡಾಗಿರಲು ನದಿಯ ತೀರದಲ್ಲಿ ಬಂದು ನಿಂತರು. ಭಕ್ತರೆಲ್ಲರೂ ಆ ಪ್ರವಾಹಕ್ಕೆ ಹೆದರಿ ಪ್ರವಾಹವು ಸ್ವಲ್ಪ ಕಡಿಮೆಯಾದ ಮೇಲೆ ಹೋಗೋಣವೆಂದು ಹೇಳುತ್ತಿದ್ದರು. ಆ ಕ್ಷಣದಲ್ಲಿಯೇ ಆ ನಾಗೀಣಿ ನದಿಯು ಹೆದರಿ ಮಾರ್ಗವನ್ನು ಕೊಟ್ಟಿತು. ಎಡಬಲಗಳಲ್ಲಿ ಪರ್ವತಾಕಾರವಾಗಿ ನೀರು ನಿಂತು, ತುಂತರು ಹನಿಗಳಿಂದ ಚಾಮರವನ್ನು ಬೀಸುತ್ತಿರುವಂತೆ ತೋರುತ್ತಿತ್ತು. ಸಿದ್ದಲಿಂಗೇಶರು ತನ್ನ ಭಕ್ತರೊಡನೆ ನದಿಯನ್ನು ದಾಟಿದ ನಂತರ ನದಿಗೆ "ಮೊದಲಿನಂತೆ ಹರಿದು ಹೋಗು" ಎಂದು ಅಪ್ಪಣೆ ಕೊಟ್ಟು ಮುಂದಕ್ಕೆ ಪ್ರಯಾಣ ಮಾಡಿದರು. ಎಡೆಯೂರು ಭಕ್ತರು ಬಂದು ಎದುರು ಗೊಂಡು ಮರ್ಯಾದೆಯಿಂದ ಕರೆದುಕೊಂಡು ಹೋದರು. ಪ್ರಮಥರು ಗುಪ್ತವಾಗಿ ಬಂದು ಸಿದ್ದೇಶರನ್ನು ಚಿರಂಜೀವಿಯಾಗಿ ಲೋಕ ಜನರಿಂದ ಸೇವೆಯನ್ನು ಕೈಗೊಳ್ಳುತ್ತಾ ಎಡೆಯೂರು ಪಟ್ಟಣವನ್ನು ಆಳಿಕೊಂಡಿರೆಂದು ಆಲೋಚನೆಯನ್ನು ಹೇಳಿ ಹೊರಟು ಹೋದರು. ಅದರಂತೆ ತನ್ನ ಕರ್ತವ್ಯವನ್ನು ನೆರವೇರಿಸಲು ಪ್ರಯಾಣ ಮಾಡುತ್ತಾ ಸಾಕ್ಷಾತ್ ಈಶ್ವರನಂತೆ ಶೋಭಿಸುತ್ತಿದ್ದರು. ದಾರಿಯುದ್ದಕ್ಕೂ ಅನೇಕ ಭಕ್ತರು ಕಾಣಿಕೆಯನ್ನು ಕೊಟ್ಟು ನಮಸ್ಕರಿಸುತ್ತಿದ್ದರು. ಸ್ತ್ರೀಯರು ಅರತಿಯನ್ನು ಬೆಳಗುತ್ತಿದ್ದರು. ಹೀಗೆ ಮಹಾ ವೈಭವದಿಂದ ಸಿದ್ದಲಿಂಗೇಶರರು ಬಿಜಂಗೈಯುತ್ತಿರಲು ಮುಂದುಗಡೆ ವಿವಿಧವಾದ ವಾದ್ಯ ಘೋಷಗಳು ಶೋಭಿಸುತ್ತಿದ್ದವು. ಸಿದ್ದಲಿಂಗೇಶರು ಮುಂದುವರಿಯುತ್ತಾ ಕದಂಬ ನದೀ ತೀರದ ಪುಣ್ಯಕ್ಷೇತ್ರವಾದ ಎಡೆಯೂರೆಂಬ ಪಟ್ಟಣಕ್ಕೆ ಬಂದನು ಆ ಪಟ್ಟಣವು ಚಿನ್ನದ ಕಲಶಗಳಿಂದ ಪ್ರಕಾಶಿಸುವ ಉಪ್ಪರಿಗೆಗಳಿಂದಲೂ, ರಾಜ ಬೀದಿಗಳಿಂದಲೂ, ಕೋಟೆ ಕೊತ್ತಲಗಳಿಂದಲೂ ಶೋಭಿಸುತ್ತಿತ್ತು. ಆ ಊರಿನ ಜನರೆಲ್ಲರೂ ಸಿದ್ದೇಶರನ್ನು ಬಹಳ ಸಂಭ್ರಮದಿಂದ ಸ್ವಾಗತಿಸಿ ಊರಿನೊಳಕ್ಕೆ ಬಿಜಯ ಮಾಡಿಸಿಕೊಂಡು ಹೋಗಿ ಅಲ್ಲಿನ ಚಿತ್ರಮಠದಲ್ಲಿ ಬಿಡಾರ ಮಾಡಿಸಿದರು.

ಹೀಗಿರುತ್ತಿರಲು ಸಿದ್ದರಾಮಯ್ಯನೆಂಬೊಬ್ಬ ಭಕ್ತನು ಯತೀಂದ್ರರನ್ನು ತನ್ನ ಮನೆಗೆ ಬಿನ್ನಹವನ್ನು ಸ್ವೀಕರಿಸಲು ದಯಮಾಡಿಸಬೇಕೆಂದು ಬೇಡಿಕೊಂಡನು. ಸಿದ್ದೇಶರು ಅವನ ಇಷ್ಟದಂತೆ ಅವನ ಮನೆಗೆ ಬಿಜಯ ಮಾಡಿದರು. ಭಕ್ತನು ತನ್ನ ಮನೆಯಲ್ಲಿ ದೇವತಾ ಮಂದಿರವನ್ನು ಚೆನ್ನಾಗಿ ಅಲಂಕಾರ ಮಾಡಿ ಸಿದ್ದೇಶರನ್ನು ಲಿಂಗಾರ್ಚನೆ ಮಾಡಲು ಒಳಕ್ಕೆ ಕಳುಹಿಸಿದನು. ಸಿದ್ದೇಶರು ಯೋಗಾ ನಿದ್ರಾಮುದ್ರೆಯಲ್ಲಿ ನಿರತರಾಗಿ ಮೂರು ದಿವಸಗಳು ಅವಿಚ್ಛಿನ್ನರಾಗಿ ಕಳೆದರು ಬೋಳಬಸವೇಶ ಮೊದಲಾದ ಭಕ್ತರು ಇನ್ನು ಎಚ್ಚರಿಸುವುದು ಒಳ್ಳಯದೆಂದು ವಿಣಾಗಾನದಿಂದ ಎಚ್ಚರಿಸಿದರು. ಅನಂತರ ಸಿದ್ದೇಶರು ಸಿದ್ದರಾಮಯ್ಯನಿಗೆ ಪ್ರಸಾದವನ್ನು ಕೊಟ್ಟು ಅನುಗ್ರಹಿಸಿದರು.

ಹೀಗೆ ಸಿದ್ದಲಿಂಗೇಶರು ಎಡೆಯೂರಿನಲ್ಲಿ ಇದ್ದುಕೊಂಡು ಅನೇಕ ಭಕ್ತರ ಕೋರಿಕೆಗಳನ್ನು ನೇರವೇರಿಸುತ್ತಾ ಚಿಟ್ಟಿಗದೇವರೆಂಬ ಪಟ್ಟದ ಒಡೆಯರು ಕಟ್ಟಿಸಿದ ಕಲ್ಲುಮಠಕ್ಕೆ ದಯಮಾಡಿಸಿ ಅಲ್ಲಿ ಮಠದ ಒಡೆಯರಿಗೆ ವಂಶಪಾರಂಪರ್ಯವಾಗಿ ತಪ್ಪದೆ ದಾಸೋಹವನ್ನು ನಡೆಸುತ್ತಾ ಬನ್ನಿರೆಂದು ಅಪ್ಪಣೆ ಮಾಡಿ ಚಿಟ್ಟಿಗದೇವರು ಬಿಟ್ಟಿದ ಕೊಡಗಿಯನ್ನೆಲ್ಲಾ ಆ ಮಠದ ವಂಶದವರಿಗೆ ಕೊಟ್ಟು ಶಿಲಾ ಶಾಸನವನ್ನು ನೆಡೆಸಿ ಶ್ರೀ ಬೋಳಬಸವೇಶರಿಗೆ ಚರಪಟ್ಟವನ್ನು ಕಟ್ಟಿ ಷಟ್ಸ್ಥಲಜ್ಞಾನವನ್ನು ಉಪದೇಶ ಮಾಡಿ ಅನಂತರ ತಪೋನಿರತನಾಗಲು ಗುಹೆಯಂತಿದ್ದ ತಪೋಗೃಹದೊಳಕ್ಕೆ ಪ್ರವೇಶಿಸಿದರು.

## 11. ಬೋಳ ಬಸವೇಶ್ವರನಿಗೆ ಷಟ್ಸ್ಥಲಾಚಾರ್ಯ ಪಟ್ಟಾಭಿಷೇಕ

ಸಚ್ಚಿದಾನಂದಮೂರ್ತಿಯೆನಿಸಿದ ಮುಕ್ತಿಕಾಂತೆಗೆ ಒಡೆಯನಾದ ದಯಾಮಯನಾದ ತೋಂಟದಾರ್ಯರು ಒಂದಾನೊಂದು ದಿನ ಶಿಲಾ ಮಂಟಪದಲ್ಲಿ ಕುಳಿತಿದ್ದಾಗ ಬೋಳಬಸವೇಶ್ವರರು ಗುರುವನ್ನು ಭಕ್ತಿವಿನಯಗಳಿಂದ ಕೂಡಿ ಷಟ್ಸ್ಥಲವನ್ನು ಬೋಧಿಸಿ ಕಾಪಾಡಬೇಕೆಂದು ಬೇಡಿಕೊಂಡರು. ಆ ಮಾತನ್ನು ಕೇಳಿ ನಸುನಗುತ್ತಾ ಅವರ ಇಷ್ಟದಂತೆ ಹೇಳತೊಡಗಿದರು.

ಕುಲಜಾತಿ ವರ್ಣಾಶ್ರಮಗಳೆಂಬ ಲೋಕಮಾರ್ಗಗಳನ್ನು ಬಿಟ್ಟು ಮಹಾಶಿವಾಚಾರ ಮಾರ್ಗವನ್ನು ತಿಳಿದು ಅದನ್ನು ಅನುಸರಿಸುವವನು ಭಕ್ತನು. ಆ ಭಕ್ತನೇ ಅತಿಶಯನಾಗಿ ಮಹೇಶ್ವರನಾಗುವನು. ಅನಂತರ ಪ್ರಸಾದಿಯಾಗುವನು. ಆಮೇಲೆ ಪ್ರಾಣಲಿಂಗಿಯಾಗುವನು. ಹಾಗೇಯೇ ಶಿವಭಾವದೊಡನೆ ಶರಣನಾಗುತ್ತಾನೆ ಅನಂತರ ಐಕ್ಯನೆನಿಸುವನು. ಇವುಗಳೇ ಷಟ್ಸ್ಥಲಗಳು.

ಆದಿಯಲ್ಲಿ ನಿಷ್ಕಲ ಪರಬ್ರಹ್ಮನು ಅಂಗ, ಲಿಂಗಸ್ಥಲಗಳೆಂಬ ಎರಡು ಭೇದವನ್ನು ಹೊಂದಿ ಪ್ರಕಾಶಿಸುತ್ತಾನೆ. ಅಂಗಸ್ಥಲವು ತ್ಯಾಗಾಂಗ, ಭೋಗಾಂಗ, ಯೋಗಾಂಗವೆಂದು ಮೂರು ಭೇದಗಳಾಗಿಯೂ, ಲಿಂಗಸ್ಥಲವು, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳೆಂದು ಮೂರು ಭೇದಗಳಾಗಿಯೂ ಇವೆ.

ವಿಚಾರಿಸಿದರೆ ಅಂಗಸ್ಥಲಗಳು ಭಕ್ತ ಮಾಹೇಶ್, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಎಂದು ಆರಾಗಿಯೂ, ಲಿಂಗಸ್ಥಲಗಳು, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಆರಾಗಿಯೂ ಇವೆ.

ಅಂಗವೆಂದರೆ ಜೀವನ, ಲಿಂಗವೆಂದರೆ ಪರಶಿವನು ಎಂದು ಹೇಳಿ, ಅಂಗಸ್ಥಲ 44, ಲಿಂಗಸ್ಥಲ 57, ಈ ರೀತಿಯಲ್ಲಿ ನೂರೊಂದು ಸ್ಥಲಗಳು ಶರಣನು ಅಂಗದಲ್ಲಿ ಯಾವ ವಿಧವಾಗಿ ಇವೆಯೆಂಬುದನ್ನೂ ನವಚಕ್ರಗಳಲ್ಲಿರುವ ಕ್ರಮವನ್ನೂ ವಿವರಿಸಿ ಲಿಂಗದಲ್ಲಿಯೂ ಅಂಗದಲ್ಲಿಯೂ ನಿರಂತರವೂ ಬೇರೆ ಬೇರೆಯಾಗಿ ಆ ಸ್ಥಲಗಳು ಭೇದವಿಲ್ಲದೆ ಸಹಜವಾಗಿ ಸಂಬಂಧವಾಗಿರುವ ರೀತಿಯನ್ನು ತಿಳಿಸಿ, ಸುಖಿಯಾಗಿರೆಂದು ತೋಂಟದಾರ್ಯರು ಬೋಳಬಸವೇಶರನ್ನು ಹರಸಿದರು.

ವಿಶದವಾಗಿ ಷಟ್ಸ್ಥಲಜ್ಞಾನವನ್ನು ಬೋಧೆ ಮಾಡಿ ಲೋಕಹಿತಕ್ಕೋಸ್ಕರ ತೋಂಟದಾರ್ಯರು ಬೋಳಬಸವೇಶರಿಗೆ ಷಟ್ಸ್ಥಲಚಾರ್ಯ ಪಟ್ಟವನ್ನು ಕಟ್ಟಿದರು. ಸಪ್ಪೆಯದೇಶಿಕ, ಚಿಟ್ಟಿಗದೇವ, ಶೀಲವಂತೇಶ ಮೊದಲಾದ ಚರವರ್ಯರು ಬಹಳ ಸಂತೋಷಪಟ್ಟರು.

## 12. ಶಿವಯೋಗ ಸಮಾಧಿ



**ವಿರ್ವಿಕಲ್ಪ ಜೀವಂತ ಶಿವಯೋಗ ಸಮಾಧಿ (ಗರ್ಭಗುಡಿ)**

ಎಡೆಯೂರಿನಲ್ಲಿ ಶ್ರೀ ತೋಂಟದಾರ್ಯರು ಬೋಳಬಸವಾರ್ಯರಿಗೆ ಷಟ್ಸ್ಥಲಜ್ಞಾನವನ್ನು ಬೋಧೆ ಮಾಡಿ, ಲೋಕಹಿತಕ್ಕೋಸ್ಕರ ಷಟ್ಸ್ಥಲಾಚಾರ್ಯ ಪಟ್ಟವನ್ನು ಕಟ್ಟಿದ ನಂತರ ಬೋಳಬಸವೇಶ ಮುಂತಾದವರನ್ನು ಕುರಿತು:–

ನೀವುಗಳೆಲ್ಲರೂ ವೀರಶೈವ ಸಿದ್ಧಾಂತವನ್ನು ಎಲ್ಲರಿಗೂ ವಿಶದವಾಗಿ ತಿಳಿಸಿ. ಅದನ್ನು ಆಚರಣೆಗೆ ತರಲು ಎಲ್ಲರಿಗೂ ಸಹಾಯ ಮಾಡಿ. ಪರಶಿವನು ನಿಮಗೆ ಇಂತಹ ಕೆಲಸಗಳಲ್ಲಿ ಪೂರ್ಣ ಸಹಾಯವನ್ನು ನೀಡುವನು. ಇದಕ್ಕೆ ಸಂಶಯವಿಲ್ಲ. ನೀವು ಯಾವಾಗಲೂ ಅವರ ಧ್ಯಾನ ಸ್ಮರಣೆಗಳಿಂದ ಮುಂದುವರೆಯಬೇಕು. ನಾನು ಇಲ್ಲಿ ರಚಿಸಿರುವ ತಪೋಮಂದಿರದಲ್ಲಿ ಶಿವಯೋಗವನ್ನು ಕೈಗೊಂಡು ಪರಶಿವನ ಧ್ಯಾನದಲ್ಲಿ ತನ್ಮಯನಾಗುವೆನು. ನಿಮಗೆ ಪರಶಿವನು ಸಮಸ್ತ ಸನ್ಮಂಗಳಗಳನ್ನೂ ದಯಪಾಲಿಸುವನು. ತಲ್ಲಣಿಸಬೇಡಿ" ಎಂದು ಹೇಳಿ ಗುಹೆಯಂತಿದ್ದ ತಪೋ ಮಂದಿರದೊಳಕ್ಕೆ ಹೊರಡಲು ಸಿದ್ಧನಾದನು.

ಆಗ ಬೋಳಬಸವೇಶನೂ, ಚಿಟ್ಟಿಗದೇವನೂ, ಶೀಲವಂತೇಶನೂ, ದಿಕ್ಕೆಟ್ಟವರಾಗಿ ಅತ್ಯಂತ ಭಕ್ತಿಯಿಂದ ನಮಸ್ಕರಿಸಿ, "ಗುರುವೇ! ನೀವು ಶಿವಯೋಗವನ್ನು ಕೈಕೊಳ್ಳಲು ತಪೋಗೃಹವನ್ನು ಪ್ರವೇಶಿಸಿದರೆ, ಮುಂದೆ ನಮಗೇನು ಗತಿ ? ಮುಂದೆ ನಮ್ಮನ್ನು ಕಾಪಾಡುವವರು ಯಾರು ? ನಾವು ನಿಮ್ಮ ದರ್ಶನವಿಲ್ಲದೆ ಬದುಕುವುದು ಹೇಗೆ ? ತಾವು ಕರುಣಿಸಿ ನಮಗೆ ಯಾವಾಗಲೂ ದರ್ಶನವನ್ನು ಕೊಡುತ್ತಾ ನಮ್ಮ ಸೇವೆಯನ್ನು ಕೈಗೊಳ್ಳುತ್ತಾ ಎಡೆಯೂರಿನಲ್ಲಿ ಮಠದಲ್ಲಿಯೇ ಇದ್ದು ನಮ್ಮನ್ನು ಆಶೀರ್ವದಿಸುತ್ತಾ ಅನುಗ್ರಹಿಸುತ್ತಿರಬೇಕು". ಎಂದು ಅನನ್ಯ ಶರಣರಾಗಿ ಪ್ರಾರ್ಥಿಸಿದರು.

ಆಗ ಶ್ರೀ ಸಿದ್ದಲಿಂಗೇಶರು "ಇದೋ, ಈ ವಿಭೂತಿಗಟ್ಟಿಯನ್ನು ತೆಗೆದುಕೊಳ್ಳಿ. ನಾನು ಶಿವಯೋಗಕ್ಕಾಗಿ ಪ್ರವೇಶಿಸುವ ತಪೋಗೃಹದ ಮೇಲ್ಭಾಗದಲ್ಲಿ ಇದನ್ನು ಸ್ಥಾಪಿಸಿ ನನ್ನನ್ನು ಹೃತ್ಪೂರ್ವಕವಾಗಿ ಧ್ಯಾನಿಸಿ ಪೂಜಿಸುತ್ತಾ ಬಂದಲ್ಲಿ ನಿಮಗೆ ಸಮಸ್ತ ಇಷ್ಟಾರ್ಥಗಳೂ ಕೈಗೂಡುವುವು. ಪರಶಿವನು ನಿಮ್ಮ ಸಂರಕ್ಷಣೆಯ ಸಮಸ್ತ ಭಾರವನ್ನೂ ವಹಿಸಿಕೊಂಡು ನಿಮ್ಮನ್ನು ಕಾಪಾಡುವನು" ಎಂದು ಹೇಳಿ ಬೋಳಬಸವೇಶನ ಕೈಗೆ ಶುದ್ದ ಸ್ಪಟಿಕದಂತಿದ್ದ ವಿಭೂತಿಗಟ್ಟಿಯನ್ನು ಕೊಟ್ಟರು.

ಆಗ ಬೋಳಬಸವೇಶನು "ಗುರುದೇವಾ ! ತಮ್ಮ ಅಪ್ಪಣೆಯಂತೆ ಖಂಡಿತಾ ನಡೆದುಕೊಳ್ಳುವೆವು. ನೀವು ನಮ್ಮ ಕಣ್ಣೇದುರಿಗಿದ್ದು ಉಪದೇಶ ಮಾಡುತ್ತಿದ್ದಿರಿ. ಅನುಗ್ರಹ ಮಾಡುತ್ತಿದ್ದಿರಿ, ತಾವು ಹೀಗೆ ಶಿವಯೋಗದಲ್ಲಿ ನಿರತರಾದರೆ, ನಾವುಗಳು ತಮ್ಮ ದರ್ಶನ ಲಾಭವನ್ನು ಪಡೆದು ತಮ್ಮ ಉಪದೇಶ ಅನುಗ್ರಹಗಳನ್ನು ಪಡೆಯುವುದಾದರೆ ಹೇಗೆ ? ತಾವು ಅಮರರಾಗಿದ್ದೀರಿ ಯೋಗಸಿದ್ದರಾಗಿದ್ದೀರಿ, ಪವಾಡ ಪುರುಷರಾಗಿದ್ದೀರಿ, ಇದು ತಾವು ಮೆರೆಯಿಸಿದ ಪವಾಡಗಳಿಂದ ಸ್ಪಷ್ಟವಾಗುತ್ತಿದೆ. ತಾವು ಹೀಗೇಯೇ ಇಲ್ಲಿಯೇ ಇದ್ದು ನಮ್ಮನ್ನು ಕಾಪಾಡಬೇಕು, " ಎಂದು ಮತ್ತೆ ಮತ್ತೆ ಬಹಳ ದೈನ್ಯದಿಂದ ಬೇಡಿಕೊಂಡನು.

ಆಗ ಸಿದ್ದೇಶರು "ನೀವುಗಳು ಯಾಕೆ ಭಯಪಡುತ್ತೀರಿ ? ನಾನು ಶಿವಯೋಗನಿರತನಾದರೂ ನಿಮ್ಮೆದುರಿಗೆ ನಾನು ಈಗಿರುವಂತೆಯೇ – ನಿಮ್ಮ ಸಂರಕ್ಷಣೆಯ ಭಾರವನ್ನು ಹೊತ್ತಿರುವೆನು. ನಾವು ತಪೋಗೃಹದಲ್ಲಿದ್ದರೇನು ? ಎಲ್ಲಿದ್ದರೇನು ? ಹೇಗಿದ್ದರೇನು ? ಶಿವಯೋಗದಲ್ಲಿದ್ದರೇನು ? ನಾನು ಎಲ್ಲಿದ್ದರೂ ಹೇಗಿದ್ದರೂ ಪರಶಿವನ ಧ್ಯಾನಯೋಗದಲ್ಲಿ ಮಗ್ನನಾಗಿ ಪರಶಿವನನ್ನು ನೆನೆದವರನ್ನೂ ನನ್ನನ್ನೂ ನೆನೆದವರನ್ನೂ ಸಮಸ್ತ ಸಂಕಟಗಳಿಂದಲೂ ಪಾರು ಮಾಡಿ ಅವರ ಇಷ್ಟಾರ್ಥಗಳನ್ನು ನೆರವೇರಿಸಿ, ಅವರು ಸುಖದಿಂದಿರುವಂತೆ ಮಾಡುವೆನು. ಅವರು ಯಾವಾಗಲೂ ಕಷ್ಟಗಳ ಸುಳಿವೇ ಇಲ್ಲದ ಪಾರಮಾರ್ಥಿಕ ಜೀವನವನ್ನು ನಡೆಸುತ್ತಾ ಷಟ್ಸ್ಥಲಜ್ಞಾನ ಸಂಪನ್ನರಾಗಿ ಶಿವಶರಣರಾಗಿ ಶಿವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಪಾರಮಾರ್ಥವನ್ನು ಸಾಧಿಸುವ ಶಕ್ತಿಯನ್ನು ಪಡೆಯುವಂತೆ ಮಾಡುವೆನು. ಭಕ್ತಿಯಿಂದ ಶಿವನ್ನು ನೆನೆದವರಿಗೂ ಇಂತಹ ಶಕ್ತಿಗಳನ್ನು ಕೊಡುವ ಧ್ಯಾನವೇ–ಯೋಗವೇ, ನನ್ನ ಶಿವಯೋಗ ಶಿವಧ್ಯಾನಯೋಗ–ಇದನ್ನು ಸಾಧಿಸುವುದಕ್ಕಾಗಿಯೇ ನಾನು ಗುಹೆಗೆ ಪ್ರವೇಶ ಮಾಡುವುದು. ನೀವು ಕಳವಳಪಡಬೇಡಿ. ನೀವು ಭಕ್ತಯಿಂದ ನನ್ನನ್ನು ನೆನೆದರೆ, ನಾನು ಕೊಟ್ಟಿರುವ ವಿಭೂತಿ ಗಟ್ಟಿಯನ್ನು ಸ್ಥಾಪಿಸಿ ಅಲ್ಲಿ ಪೂಜಿಸಿದರೆ, ಓ ಎಂದು ಓಡಿ ಬಂದು ನಿಮ್ಮನ್ನು ಕಾಪಾಡುವೆನು. ನೀವು ಸಂಶಯ ಪಡಬೇಡಿ–ತಲ್ಲಣಿಸದಿರಿ. ಪರಶಿವನು ನಿಮ್ಮೆಲ್ಲರಿಗೂ, ಸಮಸ್ತ ಜಗತ್ತಿಗೂ, ಎಲ್ಲರಿಗೂ ಒಳ್ಳೆಯದನ್ನು ಮಾಡುವೆನು" ಎಂದು ಹೇಳಿ ತಪೋ ಮಂದಿರವನ್ನು ಪ್ರವೇಶಿಸಿ ಶಿವಯೋಗ ನಿರತರಾದರು.

ಅಂದಿನಿಂದಲೂ, ಭಕ್ತಿಯಿಂದ ಶ್ರೀ ಸಿದ್ದಲಿಂಗೇಶರನ್ನು ನೆನೆದವರಿಗೆ, ಎಡೆಯೂರಿನಲ್ಲಿ ಪೂಜೆ, ಸೇವೆಗಳನ್ನು ಮಾಡುವರಿಗೆ ಮಾಡಿಸುವವರಿಗೆ ಈ ಸದ್ಗುರುವು ಸಕಲ ಇಷ್ಟಾರ್ಥಗಳನ್ನೂ

ದಯಪಾಲಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸದ್ಗುರುವಿನ ಸೇವೆ, ಪೂಜೆ ಸಿಕ್ಕುವುದಕ್ಕೂ ಪುಣ್ಯವಿರಬೇಕಲ್ಲವೆ ?



## ಶ್ರೀ ಗುರು ಸಿದ್ದಲಿಂಗೇಶ್ವರರ ವಚನಗಳು

1. **ಅನಾದಿ ಗಣೇಶ್ವರನ ಶಿಷ್ಯ ಆದಿ ಗಣೇಶ್ವರ** ಆದಿ ಗಣೇಶ್ವರನ ಶಿಷ್ಯ ನಿರ್ಮಾಯನೆಂಬ ಗಣೇಶ್ವರ, ನಿರ್ಮಾಯನೆಂಬ ಗಣೇಶ್ವರ ಶಿಷ್ಯ ನಿರಂಜನನೆಂಬ ಗಣೇಶ್ವರ, ನಿರಂಜನನೆಂಬ ಗಣೇಶ್ವರನ ಶಿಷ್ಯ ಜ್ಞಾನಾನಂದ ಗಣೇಶ್ವರ ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯ ಆತ್ಮಗಣೇಶ್ವರ, ಆತ್ಮ ಗಣೇಶ್ವರನ ಶಿಷ್ಯ ಆಧ್ಯಾತ್ಮ ಗಣೇಶ್ವರ, ಆಧ್ಯಾತ್ಮಗಣೇಶ್ವರನ ಶಿಷ್ಯ ರುದ್ರನೆಂಬ ಗಣೇಶ್ವರ ರುದ್ರನೆಂಬ ಗಣೇಶ್ವರನ ಶಿಷ್ಯ ಬಸವಪ್ರಭುದೇವರು, ಬಸವಪ್ರಭುದೇವರ ಶಿಷ್ಯ ಆದಿಲಿಂಗದೇವರು, ಆದಿ ಲಿಂಗದೇವರ ಶಿಷ್ಯ ಚನ್ನವೀರೇಶ್ವರ ದೇವರು, ಚನ್ನವೀರೇಶ್ವರ ದೇವರ ಶಿಷ್ಯ ಹರದನಹಳ್ಳಿಯ ಗೋಸಲದೇವರು, ಹರದನಹಳ್ಳಿಯ ಗೋಸಲದೇವರ ಶಿಷ್ಯ ಶಂಕರದೇವರು, ಶಂಕರದೇವರ ಶಿಷ್ಯ ದಿವ್ಯ ಲಿಂಗದೇವರು, ದಿವ್ಯ ಲಿಂಗದೇವರ ಶಿಷ್ಯರು ಚನ್ನಬಸವೇಶ್ವರ ದೇವರು, ಈ ಚನ್ನಬಸವೇಶ್ವರ ದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ದಲಿಂಗನಾನಯ್ಯ, ಹೀಗೆ ಅನಾದಿವಿಡಿದು ಬಂದ ಗುರು, ಅನಾಡಿವಿಡಿದು ಬಂದ ಗುರು ಶಿಷ್ಯ ಸಂಬಂಧ. ಅನಾದಿವಿಡಿದು ಬಂದ ಪಾದೋದಕ ಪ್ರಸಾದ, ಅನಾದಿವಿಡಿದು ಬಂದ ಭಕ್ತ ಜ್ಞಾನವೈರಾಗ್ಯ ಅನಾದಿವಿಡಿದು ಬಂದ ಪ್ರಸಿದ್ದವಾದ ವೀರಶೈವಾಚಾರ ಸಂಪತ್ತು ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

2. **ಲಿಂಗದಿಂದ ಶರಣರುದಯವಾಗದಿರ್ದರೆ** ಬಸವ ಚನ್ನಬಸವ ಪ್ರಭುದೇವರು ಮುಖ್ಯವಾದ ಏಳುನೂರಪ್ಪತ್ತು ಅಮರಗಣಂಗಳೆಲ್ಲರೂ ಕ್ಷೀರ ಕ್ಷೀರವ ಬೆರಸಿದಂತೆ, ನೀರು ನೀರ ಬೆರಸಿದಂತೆ, ಘೃತ ಘೃತವ ಬೆರೆಸಿದಂತೆ, ಬಯಲು ಬಯಲ ಬೆರಸಿದಂತೆ, ಲಿಂಗ ಬೆರಸಿ ಮಹಾಲಿಂದವೆಯಾದರು ಹೇಂಗೆ ನೋಡಾ ? ಲಿಂಗದಿಂದ ಶರಣನುದಯವಾಗದಿದ್ದರೆ ನೀಲಲೋಚನೆಯಮ್ಮ ಲಿಂಗದೊಳಗೆ ತನ್ನಗಂವನೇಕೀಕರಿಸಿ ಕೇವರ ಪರಂಜ್ಯೋತಿ ಲಿಂಗದಲ್ಲಿ ನಿ 'ರವಯವಾದಳು ಹೇಂಗೆ ನೋಡಾ ? ಇಂತಪ್ಪ ದೃಶ್ಯವ ಕಂಡು ಕಂಡು ನಂಬದಿರ್ಪುದು ಕರ್ಮದ ಫಲ. ಅದು ಇವರ ಗುಣವೆ ! ಶಿವನ ಮಾಯ ಪ್ರಪಂಚದ ಗುಣ ನೋಡಾ, ಈ ಪ್ರಪಂಚ ಜೀವಿಗಳು ಅಹುದೆಂಬದೂ ಅಲ್ಲವೆಂಬುದೂ ಪ್ರಮಾಣವಲ್ಲ ನೋಡಾ, ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ.

3. **ಸಮಸ್ತ ಲೋಕಾದಿಲೋಕೋಕಂಗಳೇಲ್ಲದಂದು,** ಅನಾದಿ ಪರಶಿವ ನೀನೊಬ್ಬನೆ ಇದ್ದೆಯಯ್ಯಾ, ಆ ನಿರಾಕಾರ ಪರವಸ್ತುವಿನಿಂದ ನಾನು ಉದಯವಾಗಿ ಮಾಯಾರಂಜನೆ ಹುಟ್ಟದ ಮುನ್ನ ನಿರಂಜನನೆಂಬ ಗಣೇಶ್ವರನಾಗಿರ್ದೆನು ಜ್ಞಾನಾಜ್ಞಾನಂಗಳಿಲ್ಲದಂದು ಜ್ಞಾನಾನಂದನೆಂಬ ಗಣೇಶ್ವರನಾಗಿರ್ದೆನು. ಈಶರೀರವಿಲ್ಲದಂದು ನಿರ್ಮಲನೆಂಬ ಗಣೇಶ್ವರನಾಗಿರ್ದೆನು. ಬಸವ ಮೊದಲಾದ ಪ್ರಮಥರೆಲ್ಲರ ಪ್ರಸಾದವನ್ನು ಎನ್ನಲ್ಲಿ ಸಂಬಂಧಿಸಿ ನಿನ್ನ ಕೃಪಾಪ್ರಸಾದವನೆನ್ನಲ್ಲಿ ಮೂರ್ತಿಗೊಳಿಸಿ ಇನ್ನಾವುದಕ್ಕೂ ಅಂಜಬೇಡವೆಂದು ನೀನು ನಿನ್ನ ಪ್ರಮಥರು ಎನ್ನ ಆಜ್ಞಾಪಿಸಿ ಮರ್ತ್ಯಕ್ಕೆ ಕಳುಹಿದಿರಿಯಾಗಿ ಕಳುಹಿದಭೇದವ ಶಿವ ಜ್ಞಾನೋದಯದಿಂದ ಅರಿದು ಸಿದ್ದಲಿಂಗನೆಂಬ ನಾಮವೆನಗೆ ನಿನ್ನಿಂದ ಬಂದಿತ್ತಂಬುದನರಿದೆನು ಕಾಣಾ ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ.

4. **ಮರವೆಯ ತಮವ ಕಳೆಯಯ್ಯಾ** ಅರುಹಿನ ಜ್ಯೋತಿಯ ಬೆಳಗಯ್ಯ ಅರುಹಿನ ಜ್ಯೋತಿಯ ಬೆಳಗಿ ನಿಮ್ಮ ಕುರುಹ ಕಂಡು ಕೊಡುವ ತುರ್ಯಾವಸ್ಥೆಯ ಸುಖವನೆ ಕೊಡು ಕಂಡೆಯಾ ಮಹಾಲಿಂಗ ತಂದೆ ಕೊಡದಿದ್ದರೆ ನಿಮಗೆ ಪ್ರಮಥರಾಣೆ, ವಸವನಾಣೆ ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೆ.

5. **ಊರೊಳಗೆ ಉದಕ ತುಂಬಿ** ಬಾಗಿಲೆಲ್ಲ ಕೆಸರಾದವು ನೋಡಾ ಮನೆಯೊಳಗೆ ಕಸಹೆಚ್ಚಿ ಸಸಿಯನೇಳಲೀಯದು ನೋಡಿರೆ, ಊರೊಳಗಣ ಉದಕವ ಹೊರಡಿಸಿ ಬಾಗಿಲೊಳಗಣ ಕೆಸರ ಸುಟ್ಟು ಮನೆಯೊಳಗಣ ಕಸವ ತೆಗೆಸಿ ಸಸಿಯ ಸಲಹಿಕೊಂಬುವ ನೀನೊಲಿದು ಕರುಣಿಸಯ್ಯ, ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೆ.

6. **ಕಾಮದಿಂದ ಕರಗಿದೆನಯ್ಯ**, ಕ್ರೋಧದಿಂದ ಕೊರಗಿದೆನಯ್ಯ, ಲೋಭ ಮೋಹಂಗಳಿಂದ ಅತಿನೊಂದೆನಯ್ಯ, ಮಧ ಮತ್ಸರಗಳಿಂದ ಬೆದ ಬೆದನೆ ಬೆಂದೆನಯ್ಯ, ಅಹಂಕಾರ ಮಮಕಾರಗಳಿಂದ ಮತಿಮಂದನಾಗಿದ್ದೆನಯ್ಯ, ಇದು ಕಾರಣ ಎನ್ನ ಕಾಮಾದಿ ಷಡ್ವರ್ಗಂಗಳಂ ಕಳೆದು ಅಹಂಕಾರ ಮಮಕಾರಂಗಳಂ ಮಾಣಿಸಿ ನಿರಹಂಕಾರಿ ಎಂದೆನಿಸಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

7. **ಕತ್ತಲೆಯ ಪುರವ ಕಳ್ಳರು ಮುತ್ತಲು** ಪುರಪತಿ ಮುತ್ತಿಗೆಗೊಳಗಾದನು ನೋಡಾ ಅಯ್ಯಾ, ಅತ್ತಣ ಊರಿಂದ ಬೆಳಗು ಪಸರಿಸಲು ಮುತ್ತಿಗೆ ತೆಗೆದೋಡಿತು ಕಾಣಾ. ಗುರು ಶಿವ ಸಿದ್ಧೇಶ್ವರ ಪ್ರಭುವೆ.

8. **ಪಂಚಾಕ್ಷರವೇ ಪಂಚಮುಖವಾಗಿ** ಎನ್ನ ಪಂಚೇಂದ್ರಿಯಂಗಳಾಗಿಪ್ಪವು ನೋಡಾ ಪ್ರಣವವೇ ಪ್ರಾಂ ಮೂರ್ತಿಯಾಗಿರ್ದನಯ್ಯ, ಇದು ಕಾರಣ ಪುರತತ್ವ ಜ್ಞಾನಮಯವಾಗಿ ಓಂ ನಮಶ್ಶಿವಾಯ ಎಂಬ ಶಿವಷಡಕ್ಷರ ಮಂತ್ರವನೆ ಸ್ಮರಿಸಿ ಭವಸಾಗರವ ದಾಂಟಿ ಭಕ್ತನಾದೆನು ಕಾಣಾ ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ.

9. **ಸತ್ಯದಲ್ಲಿ ನಡೆಸುವುದು ಶೀಲ** ಸತ್ಯದಲ್ಲಿ ನುಡಿಯುವು ಶೀಲ ಸತ್ಯ (ಸಜ್ಜನ) ಸದಾಚಾರದಲ್ಲಿ ವರ್ತಿಸಿ ನಿತ್ಯವನರಿವುದೇ ಶೀಲ, ಕಾಣಿಭೋ ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ.

10. **ಬಸವಣ್ಣನ ಪ್ರಸಾದದಿಂದ ಭಕ್ತಿ** ಜ್ಞಾನ ವೈರಾಗ್ಯ ಸಂಪನ್ನನಾದೆನಯ್ಯ, ಪ್ರಭುದೇವರ ಪ್ರಸಾದದಿಂದ ಪರಮ ಶಿವತತ್ವಸ್ವರೂಪವೇ ಎನ್ನ ಸ್ವರೂಪವೆಂದು ಅರಿದು ಸಮಸ್ತ ಸಂಸಾರ ಪ್ರಪಂಚ ಕೊಡಹಿದೆನು ನೋಡಾ, ನೀಲಲೋಚನಮ್ಮನ ಪ್ರಸಾದದಿಂದ ನಿಜ ಲಿಂಗೈಕ್ಯನಾದೆನಯ್ಯ, ಮಹಾದೇವಿಯಕ್ಕನ ಪ್ರಸಾದದಿಂದ ಸುತ್ತಿದ ಮಾಯಾ ಪಾಶವ ಹರಿದು ನಿರ್ಮಾಯನಾಗಿ ನಿರ್ವಾಣಪದದಲ್ಲಿ ನಿಂದೆನಯ್ಯ, ಸಿದ್ದರಾಮಯ್ಯನ ಪ್ರಸಾದದಿಂದ ಶುದ್ಧ ಶಿವ ತತ್ವವ ಪಡೆದೆನಯ್ಯ, ಮೊಳಿಗೆಯ ಮಾರಿತಂದೆಗಳ ಪ್ರಸಾದದಿಂದ ಕಾಯದ ಕಳವಳವನು ಅಳಿದು ಕರ್ಮ ನಿರ್ಮಲವಾಗಿ ವೀರ ಮಾಹೇಶ್ವನಾದೆನು ನೋಡಾ, ಇವರು ಮುಖ್ಯವಾದ ಏಲನೂರೆಪ್ಪತ್ತು ಅಮರಗಣಂಗಳ ಪರಮ ಪ್ರಸಾದದಿಂದ ಎನ್ನ ಕಾರಣಗಳೆಲ್ಲವೂ ಲಿಂಕರಂಗಣಗಳಾಗಿ ಕರಣೇಂದ್ರೀಯಂಗಳ ಕಳೆದು ಉಳಿದು ಇಂದ್ರಿಯಂಗಳಿಗೆ ನಿಲುಕದ ಸ್ಥಾನದಲ್ಲಿ ಪರಮಾನಂದ ಪ್ರಭಾಮಯನಾಗಿ ಇದ್ದೆನು ನೋಡಾ, ನಿಮ್ಮ ಶರಣರ ಪ್ರಸಾದದಿಂದ ನಾನು ಪ್ರಸಾದಿಯಾಗಿ ಇದ್ದೆನು ನೋಡಾ, ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ.

11. **ಕೆ ಒಡೆದ ಬಳಿಕ ತೂಬು ಒಡೆಯಬಲ್ಲುದೇ ?** ಒಡೆದ ಮಡಿಕೆಗೆ ಒತ್ತು ಮಣ್ಣ ಕೊಟ್ಟರೆ (ಮೆತ್ತಿದರೆ) ನಿಲ್ಲುಬಲ್ಲುದೇ ಅಯ್ಯ ? ಮುತ್ತು ಒಡೆದರೆ ಹತ್ತಬಲ್ಲುದೇ ಅಯ್ಯಾ ? ಸುರಚಾಪ ನಿರ್ಧಾರಬಾಗಬಲ್ಲುದೇ ಅಯ್ಯಾ ? ಚಿತ್ತ ಒಡೆದರೆ ಭಕ್ತಿ ನೆಲಗೊಳ್ಳುವುದು, ಭಕ್ತಿ ಬೇಸರವಾದರೆ ಮುಕ್ತಿ ಎಂಬುದು ಎಂದಿಗೂ ಇಲ್ಲ ಕಾಣಾ. ಎದೇ ಕಾರಣ ಚಿತ್ತ ಲಿಂಗವನಪ್ಪಿ ಒಡೆಯದೆ ಭಕ್ತಿ ಬೇಸರವೋಗದೆ ನಿಮ್ಮ ಕೂಡಿ ನಿತ್ಯ ನಿರ್ಮುಕ್ತನಾದೆನು ಕಾಣಾ. ಎಲ್ಲರ ಪರಿಯಂತಲ್ಲ ಎನ್ನ ಪರಿ ಬೇರೆ ನೋಡಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

12. **ಮಳೆ ಹೊಯ್ದರೆ ಆಕಾ ನೆನೆವುದೇ** ? ಬಿರುಗಾಳಿ ಬೀಸಿದರೆ ಆಕಾಸ ಅಲುಗುವುದೇ ? ಕಿತ್ತಲಗಿನಿಂದ ಇರಿದರೆ ಆಕಾಶ ಹರಿವುದೇ ? ಬಟ್ಟ ಬರಿಯ ಬಯಲು ಕಟ್ಟು ಕುಟ್ಟಿಗೆ ಒಳಗಾಗಬಲ್ಲುದೇ ? ನಿಶ್ಚಿಂತ ನಿರಾಳನಾದ ನಿಜೈಕ್ಯನ ತಥ್ಯ ಮಿಥ್ಯದಿಂದ ನುಡಿವ ತುಚ್ಛರ ನುಡಿ ತಟ್ಟಬಲ್ಲುದೇ ? ವಸ್ತುವ ವಾಕುಶಾಸ್ತ್ರ ಖಂಡಿಸಬಲ್ಲುದೇ ? ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ.

13. **ಕಂಡೊಂದು ನುಡೇವುದೀ ಲೋಕ** ಕಾಣದೊಂದ ನುಡಿವುದೀ ಲೋಕ, ಹಿಂದೆ ನಿಣದಿಸಿದರೆಂದು ಕುಂದಲಿಲ್ಲ. ಮುಂದೆ ವಂದಿಸಿದರೆಂದು ಉಬ್ಬಲಿಲ್ಲ. ವಂದನೆ ನಿಣದೆ ಎಂಬುದು ಉಪ ಜೀವಿಗಳಿಗಲ್ಲದೆ ಉಪಮಾತೀತನಾದ ಪ್ರಾಣ ಲಿಂಗೈಕ್ಯನಿಗುಂಟೇ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

14. **ಮನ ಘನವಸ್ತುವಾದ ಬಳಿಕ** ಮನ ವಚನ ಕಾಯ ಎಂಬ ತ್ರಿಕರಣ ಶುದ್ಧಾತ್ಮನೆಂಬೆ ನಿತ್ಯ ಮುಕ್ತನೆಂಬೆ ನಿರಾಲಂಬಿ ಎಂಬೆ ಆತನ ತನು ಶುದ್ಧವಾಗಿ ತನುವೇ ಗುರು, ಆತನ ಮನ ಶುದ್ಧವಾಗಿ ಭಾವವೇ ಮಹಾನುಭಾವ ಚರಲಿಂಗ ನೋಡಾ ಇಂತೀ ಜ್ಞಾನವೇ ಗುರು ಆರುಹೇ ಶಿವಲಿಂಗ, ಮಹಾನುಭಾವವೇ ಜಂಗಮ ಇಂತೀ ತ್ರಿವಿಧವೂ ತನ್ನ ತ್ರಿವಿಧಾತ್ಮ ನೋಡಾ, ಜ್ಞಾನ ಗುರುವೆಂದರೆ ತನ್ನ ಜೀವಾತ್ಮ ಕುರುಹೆಂಬ ಶಿವಲಿಂಗವೆಂದರೆ ತನ್ನ ಅಂತರಾತ್ಮ ಮಹಾನುಭಾವ ಜಂಗಮವೆಂದರೆ ತನ್ನ ಪರಮಾತ್ಮ ಇಂತೀ ತ್ರಯಾತ್ಮ ಏಕಾತ್ಮವಾದರೆ ಸಚ್ಚಿದಾನಂದ ನಿರಂಜನ ಪರಾಪರ ವಸ್ತು ನೀನೇ. ಅಲ್ಲಿ ನಾ ನೀ ನೆನಲಿಕ್ಕಿಲ್ಲ ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ.

15. **ಭಕ್ತ ಸಥಲ ಮಹೇಶ್ವರ ಸ್ಥಲದಲ್ಲಿ ಅಡಗಿ** ಮಾಹೇಶ್ವರ ಸ್ಥಲ ಪ್ರಸಾದಿ ಸ್ಥಲದಲ್ಲಿ ಅಡಗಿ ಪ್ರಸಾದಿ ಸ್ಥಲ ಪ್ರಾಣಲಿಂಗಿ ಸ್ಥಲದೊಳಗಡಗಿ ಪ್ರಾಣ ಲಿಂಗಿ ಸ್ಥಲ ಶರಣ ಸ್ಥಲದೊಳಡಗಿ ಶರಣ ಸ್ಥಲ ಐಕ್ಯ ಸ್ಥಲದಲ್ಲಿಯೇ ಅಡಗಿ ಇಂತೀ ಷಡಂಗಯೋಗ ಸಮರಸನಾಗಿ ಷಡುಸ್ಥಲ ಮೀರಿ ನಿರವಯ ಸ್ಥಲವನೈದಿ ಆ ನಿರವಯ ಸ್ಥಲ ನಿರಾಳದಲ್ಲಿ ಅಡಗಿ ಆ ನಿರಾಳ ನಿತ್ಯ ನಿರಂಜನ ಪರವಸ್ತು ತಾನಾಯಿತ್ತಾಗಿ ಕ್ರಿಯಾ ನಿಃಪತಿ ಜ್ಞಾನ ನಿಃಪತಿ ಭಾವ ನಿಃಪತಿ ಮಾಡುವ ಕ್ರಿಯೆಗಳೆಲ್ಲ ನಿಃಪತಿಯಾಗಿ ಅರಿವ ಅರುಹೆಲ್ಲಾ ಅಡಗಿ ಭಾವಿಸುವ ಭಾವವೆಲ್ಲ ನಿರ್ಭಾವವಾಗಿ ನಿರ್ಲೇಪಕ ನಿರಂಜನ ವಸ್ತು ತಾನೆ ತಾನೆಲ್ಲದೆ ಧ್ಯಾನಿಸಲ್ಕೆ ಏನೂ ಇಲ್ಲ ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭು ತಾನೆ ಷಡುಸ್ಥಲ ಜ್ಞಾನ ಸಾರಾಯ ಸ್ವರೂಪವೆಂದು ಹೇಳಲ್ಪಟ್ಟನು.



# *ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರ, ಎಡೆಯೂರು*

**ಕ್ಷೇತ್ರದ ಒಳಗಡೆ ಇರುವ ಪವಾಡಗಳ ಸಂಕ್ಷಿಪ್ತ ಪರಿಚಯ**




ಕೈಲಾಸದಲ್ಲಿ ಶಿವನು ಒಡ್ಡೋಲಗದಲ್ಲಿದ್ದಾಗ ನಾರದ ಮಹರ್ಷಿಗಳು ಬಂದು ಭೂಲೋಕದಲ್ಲಿ ಹೆಚ್ಚುತ್ತಿರುವ ನಾಸ್ತಿಕತೆ, ಅನಾಚಾರ, ಅತ್ಯಾಚಾರಗಳಿಂದ ಅಳಿಯುತ್ತಿರುವ ಶಿವಧರ್ಮವನ್ನು ಉದ್ದರಿಸಬೇಕೆಂದು ಪ್ರಾರ್ಥಿಸಲು ಪರಶಿವನು ನಿರಂಜನಗಣಾಧಿಶ್ವರರಿಗೆ ಭೂಲೋಕದಲ್ಲಿ ಶಿವಧರ್ಮೋಧ್ಧಾರಕ್ಕಾಗಿ ಅವತರಿಸಬೇಕೆಂದು ಆಜ್ಞೆ ಮಾಡಿದನು.



ಸಿದ್ಧಲಿಂಗೇಶ್ವರ ಜನನ ಕ್ರಿ.ಶ. 1388 ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕು, ಹರದನಹಳ್ಳಿ ಗ್ರಾಮ, ಮಲ್ಲಿಕಾರ್ಜುನ ಜ್ಞಾನಾಂಭೆ ದಂಪತಿಗಳಿಗೆ ಸಂತಾನವಿರಲಿಲ್ಲ. ಗುರು ಗೋಸಲ ಚನ್ನಬಸವೇಶ್ವರರ ಆಶೀರ್ವಾದ ಮತ್ತು ದಂಪತಿಗಳ ತಪಸ್ಸು–ಇವುಗಳ ಫಲವಾಗಿ, ನಿರಂಜನ ಗಣಾಧೀಶ್ವರರು ಅವರಿಗೆ ಪುತ್ರರಾಗಿ ಉದಯಿಸಿದರು.




ದಂಪತಿಗಳು ಮಗುವನ್ನು ಗೋಸಲ ಚನ್ನಬಸವೇಶ್ವರ ದರ್ಶನಾಶೀರ್ವಾದಕ್ಕೆ ಮಠಕ್ಕೆ ಎತ್ತಿಕೊಂಡು ಹೋದರು. ಬಾಗಿಲಲ್ಲಿ ನಿಂತಿದ್ದ ಸಿಂಹ–ಆನೆಗಳು ಗಂಧರ್ವರಾದರು. ಹಿಂದೆ ಗಂಧರ್ವರಾಗಿದ್ದ ಶಾಪದಿಂದ ಮೃಗಜನ್ಮ ಹೊಂದಿ ಮಗುವಿನ ದರ್ಶನದಿಂದ ಗಂಧರ್ವ ಜನ್ಮ ಬಂದಿತೆಂದು ನಿವೇದಿಸಿಕೊಂಡರು. ಸಿದ್ದಿ ಜೀವಿ ಮತ್ತು ಲಿಂಗಸ್ವರೂಪಿ ಮಗುವಿಗೆ ಗುರುಗಳು ಸಿದ್ದಲಿಂಗನೆಂದು ಕರೆದರು.



ಸಿದ್ಧಲಿಂಗೇಶ್ವರರು ಕಲ್ಲು ಬಸವನಿಗೆ ಎಡೆಯುಣಿಸುತ್ತಿದ್ದರು. ಮಠಕ್ಕೆ ಇತರೆ ಬಾಲಕರು ಬಸವನಿಗೆ ನೈವೇದ್ಯ ಮಾಡಿ ಎಡೆಯನ್ನು ಹಿಂದಕ್ಕೆ ತರುತ್ತಿದ್ದರು ಗುರುಗಳಿಗೆ ಅನುಮಾನ ಬಂದು ಸಿದ್ಧಲಿಂಗೇಶ್ವರರನ್ನು ಪರೀಕ್ಷಿಸಿದರು. ಬಸವನೆದುರಿಗೆ ಎಡೆಯಿಟ್ಟು "ಸಲ್ಲಿಸಬೇಕು" ಎಂದು ಸಿದ್ಧಲಿಂಗೇಶ್ವರರೆನ್ನಲು ನಿಜರೂಪ ಧರಿಸಿ ಕಲ್ಲು ಬಸವ ಎಡೆಯುನ್ನುಂಡನು.



ಸಿದ್ದಲಿಂಗೇಶ್ವರರಿಗೆ 8 ವರ್ಷ ವಯಸ್ಸು ಮಲ್ಲಿಕಾರ್ಜುನ ಜ್ಞಾನಾಂಬೆಯರು ತಮ್ಮ ಮಗನನ್ನು ಜ್ಞಾನಾರ್ಜನೆಗಾಗಿ ಗೋಲಸ ಚನ್ನಬಸವೇಶ್ವರರ ಮಠಕ್ಕೆ ಸೇರಿಸಿದರು. ಗುರುಗಳ ಶಿವಪೂಜಾ ಸಮಯದಲ್ಲಿ ನಂದಾದೀಪದಲ್ಲಿದ್ದ ಎಣ್ಣೆಯು ಮುಗಿದು ನಂದಿ ಹೋಗುವುದರಲ್ಲಿತ್ತು. ಪಕ್ಕದಲ್ಲಿಯೇ ಇದ್ದ ಸಿದ್ಧಲಿಂಗೇಶ್ವರರು ತಕ್ಷಣವೇ ದೀಪಕ್ಕೆ ನೀರನ್ನು ಹಾಕಿದರು. ನಂದಾದೀಪವು ಯಥಾ ರೀತಿ ಬೆಳಗುತ್ತಿತ್ತು.



ವಯಸ್ಸಿಗೆ ಬಂದ ಮೇಲೆ ಗುರುಗಳ ಅಪ್ಪಣೆ ಪಡೆದು ಸಿದ್ದಲಿಂಗೇಶ್ವರರು ಭಾರತದಲ್ಲಿ ಧರ್ಮೋದ್ಧಾರ ಕಾರ್ಯ ಕೈಗೊಂಡು, ತಮಿಳುನಾಡಿನ ತಿರುವಣ್ಣಾಮಲೈನಲ್ಲಿ ತಂಗಿದ್ದಾಗ, ಅರುಣಾಚಲೇಶ್ವರನು ಪ್ರತ್ಯಕ್ಷನಾಗಿ ಸಿದ್ದಲಿಂಗೇಶ್ವರರ ಕಾರ್ಯವು ಜಯ ಪ್ರದವಾಗಲೆಂದು ಹರಿಸಿ ಅವರ ಕೊರಳಲ್ಲಿದ್ದ ಪಂಚತಾವಡ ಹಾರವನ್ನು ಹಾಕಿ ಆಶೀರ್ವದಿಸಿದರು.



ಆಂಧ್ರ ಪ್ರದೇಶದ ಸಂಚಾರದಲ್ಲಿ ಸಿದ್ದಲಿಂಗೇಶ್ವರರು ಹುಲ್ಲು ನೀರನ್ನು ಮುಟ್ಟದೇ ನಿಂತಿದ್ದ ಬಸವನ್ನು ನೋಡಿದರು. ಎಳೆ ಪೈರನ್ನು ತಿಂದರೆ ಸಿದ್ದಲಿಂಗನಾಣೆ ಎನ್ನುಲು ಹಾಗೆಯೇ ನಿಂತಿದೆ ಎಂದು ಹೊಲದೊಡೆಯನು ತಿಳಿಸಿದನು. ಸಿದ್ದಲಿಂಗೇಶ್ವರರು ಬಸವನ ಮೈನೀವಿ "ಆಣೆ ಬಿಟ್ಟಿತು" ಎನ್ನಲು ಅದು ಸಂತೋಷದಿಂದ ಮೇಯಲು ಆರಂಭಿಸಿತು.



ದ್ರಾವಿಡ ನಾಡಿನ ಸುಪ್ರಸಿದ್ದ ಕ್ಷೇತ್ರ ಮಹಾಬಲೇಶ್ವರಕ್ಕೆ ಶ್ರೀ ಸಿದ್ದಲಿಂಗೇಶ್ವರರ ಪಾದಯಾತ್ರೆ ಪೂರ್ವಜನ್ಮದ ಪಾಪಕರ್ಮದಿಂದ ಕುಷ್ಟರೋಗ, ತೊನ್ನು ಇತರೆ ವ್ಯಾದಿಪೀಡಿತ ಕುಂತಳ ಸುಶೀಲಗೆ ಕ್ಷೇತ್ರದಲ್ಲಿ ಅವರ ಸಂದರ್ಶನ ಸಿದ್ದಲಿಂಗೇಶ್ವರರು ಆಶೀರ್ವದಿಸಿ ಕೊಟ್ಟ ಭಸ್ಮವನ್ನು ಮೈಗೆ ಸವರಿಕೊಂಡು ಸುಶೀಲೆಯು ರೋಗ ನಿವಾರಣೆ ಹೊಂದಿದಳು.



ಮಹಾಬಲೇಶ್ವರದ ಸಮೀಪದಲ್ಲಿರುವ ಕೃಷ್ಣಾ ನದಿಯು ಭತ್ತಿ ಹೋಗಿ ಜಲಕ್ಷಾಮವಾಗಿತ್ತು ಕ್ಷೇತ್ರದ ಆರ್ಚಕರ ಪ್ರಾರ್ಥನೆಯಂತೆ ಸಿದ್ದಲಿಂಗೇಶ್ವರರು ಲಿಂಗದ ಮಸ್ತಕವನ್ನೇರಿ ಬತ್ತಿ ಹೋಗಿದ್ದ ಪ್ರವಾಹವನ್ನು ಪುನಃ ಬರಮಾಡಿದರು.



ಸಿದ್ದಲಿಂಗೇಶ್ವರರ ನಿರಂಜನ ಪಟ್ಟಾಧಿಕಾರ ಗುರುಗೋಸಲ ಚನ್ನಬಸವೇಶ್ವರರು ಸಿದ್ದಲಿಂಗೇಶ್ವರರ ಬುದ್ಧಿ ಶಕ್ತಿ ಧರ್ಮ, ಜ್ಞಾನ, ವೈರಾಗ್ಯಗಳನ್ನು ಕಂಡು ಸಂತೋಷಪಟ್ಟು ಪರಂಪರಾಗತವಾಗಿ ಬಂದಿರುವ ನಿರಂಜನ ಪೀಠದ ಪಟ್ಟಾಧಿಕಾರವನ್ನು ಅವರಿಗೆ ವಹಿಸಿ ಕೊಟ್ಟು ಆಶೀರ್ವದಿಸಿದರು.



ಸ್ತ್ರೀ ರಾಜ್ಯ ಮಲೆಯಾಳದೇಶಕ್ಕೆ ಶ್ರೀ ಸಿದ್ದಲಿಂಗೇಶ್ವರರ ಗಮನ ಹೆಣ್ಣರಸಿಗೆ ಧರ್ಮಭೋಧನೆ ಮಾಡಿ, ಪ್ರಜೆಗಳನ್ನೆಲ್ಲಾ ನೀತಿವಂತರಾಗಿ ಮಾಡಿ, ಸುಖೀ ಸಾಮ್ರಾಜ್ಯದ ಆದೇಶ ನೀಡಿ, ಕೊಡಗು ಕೊಂಕಣ ದೇಶಗಳ ಸಂಚಾರ.




ಪರುಶುರಾಮ ಕ್ಷೇತ್ರದಲ್ಲಿ ಸಿದ್ಧಲಿಂಗೇಶ್ವರರ ಸಂಚಾರ ಇರುಲನೆಂಬ ಕಳ್ಳ ಮತ್ತು ಸಂಗಡಿಗರು ಪೀಡಿಸಲು ಅವರ ಕಣ್ಣುಗಳು ಕುರಾಡಾದವು. ಇರುಲನ ಹೆಂಡತಿಯ ಪ್ರಾರ್ಥನೆಯನ್ನು ಮನ್ನಿಸಿ ಅವರಿಗೆ ಕಣ್ಣುಗಳನ್ನು ಬರುವಂತೆ ಮಾಡಿದರು. ಎಲ್ಲರೂ ಸನ್ಮಾರ್ಗಿಗಳಾದರು.



ಸದಾಚಾರಿ, ಸದ್ಭಕ್ತ ಪಡುವಣದೇಶದ ಪರಬ್ರಹ್ಮಯ್ಯನ ಮನೆಗೆ ನಾಸ್ತಿಕರಿಂದ ಬೆಂಕಿ, ಸಿದ್ದಲಿಂಗೇಶ್ವರರ ಧ್ಯಾನದಿಂದ ಬೆಂಕಿಯು ಆರಿತು. ಬುದ್ಧಿ ಕಲಿಸಲೋಸುಗವೆಂಬಂತೆ ನಾಸ್ತಿಕರ ಮನೆಗೆ ಬೆಂಕಿ ಹತ್ತಲು ಅವರು ಕ್ಷಮೆ ಕೇಳಿದರು. ಸಿದ್ದಲಿಂಗೇಶ್ವರರು ಅವರನ್ನು ಕ್ಷಮಿತ ಆಸ್ತಿಕರನ್ನಾಗಿ ಮಾಡಿದರು.



ಮಧ್ಯ ಭಾರತದಲ್ಲಿ ಸಿದ್ದಲಿಂಗೇಶ್ವರರ ಸಂಚಾರ, ನಡುಬೇಸಿಗೆ ಸಮಯದಲ್ಲಿ ನೇರಳೆ ಮರದಡಿ ವಾಸ್ತವ್ಯ ಜಂಗಮರು ನೇರಳೆ ಹಣ್ಣನ್ನು ಬಯಸಿದರು. ಸಿದ್ದಲಿಂಗೇಶ್ವರರು ಅಕಾಲದಲ್ಲಿ ನೇರಳೆ ವೃಕ್ಷದಲ್ಲಿ ಫಲಗಳನ್ನುಂಟು ಮಾಡಿ ಜಂಗಮರನ್ನು ತೃಪ್ತಿ ಪಡಿಸಿದರು.



ಮ್ಲೇಚ್ಛ ರಾಜ್ಯ ಸಂಚಾರ ಸಿದ್ದಲಿಂಗೇಶ್ವರರನ್ನು ಹಿಡಿದು ತರಲು ರಾಜನು ಸೈನ್ಯ ಕಳುಹಿಸಿದನು ?


ಭೂತಗಳಿಂದ ಸೈನ್ಯ ನಾಶ, ರಾಜನಿಗೆ ಪ್ರಾಣಭಯ ಸಿದ್ದಲಿಂಗೇಶ್ವರರಿಂದ ಪ್ರಾಣಧಾನ.




ಹಿಮವತ್ ಪರ್ವತ ಪ್ರದೇಶ ದಟ್ಟಕಾಡು ಹೆಬ್ಬುಲಿಯು ಗೋವನ್ನು ಹಿಡಿಯಲು ಗೊಲ್ಲನು ಸಿದ್ದಲಿಂಗೇಶ್ವರಾ "ಕಾಪಾಡು ಎನಲು" ಸ್ವಾಮಿಯ ದರ್ಶನ ಗೋವಿನ ರಕ್ಷಣೆ.




ವಿದ್ಯಾ ಪುರಿಯಲ್ಲಿ ಶಿವಶರಣೆ ಬಸಮ್ಮನ ಸೇವೆ ಗಂಗಾ ಜಲ ಮತ್ತು ಶರಣರ ಪಾದೋದಕ ಇವೆರಡರಲ್ಲಿ ಶ್ರೇಷ್ಟವಾವುದೆಂಬ ಪ್ರಶ್ನೆ. ಎರಡರ ಸಮಪ್ರಮಾಣವನ್ನು ಸಿದ್ದಲಿಂಗೇಶ್ವರರು ತಕ್ಕಡಿಯಲ್ಲಿ ತೂಗಿಸಲು ಪಾದೋದಕದ ಬಾರ ಹೆಚ್ಚಾಯಿತು. ಗಂಗಾ ಜಲವು ಅತಿ ಹಗುರವಾಯಿತು.



ವಿಜಯನಗರ (ಆಂಧ್ರಪ್ರದೇಶದ) ಶರಣೆ ಸೋಮವಾರದ ಬಸಮ್ಮನು ಭಕ್ತಿಯಿಂದ ಸೇವಿಸುತ್ತಿದ್ದ ಪಾದೋದಕದ ಪವಿತ್ರತೆಯುನ್ನು ಪ್ರಶ್ನಿಸಿ ನಿಂದಿಸಿದ್ದಕ್ಕೆ ವಜ್ರ ದುಂಬಿಗಳು ನಿಂದಕನನ್ನು ಮುತ್ತಿ ಮಾಂಸವನ್ನು ತಿಂದವು. ಮಾಡಿದ ತಪ್ಪನ್ನು ಮನ್ನಿಸಿ ಸ್ವಾಮಿಗಳು ಅವನನ್ನು ಪವಿತ್ರನನ್ನಾಗಿ ಮಾಡಿದರು.



ಶ್ರೀ ಶೈಲ ಅಹೋಬಲ, ಕಂಚಿ, ಕಾಳಹಸ್ತಿ, ಕ್ಷೇತ್ರಗಳನ್ನು ಸಂದರ್ಶಿಸಿ ಕರ್ನಾಟಕದ ಕಣ್ಮಣಿ ಸೊಂಪಿನ ಹಂಪೆಯ ಪಂಪಾಪತಿಯ ದರ್ಶನ, ಸದ್ಭಕ್ತರಿಗೆ ಧರ್ಮೋಪದೇಶ ಮತ್ತು ಪರೋಕ್ಷ ಜ್ಞಾನ ಹಾಗೂ ಬ್ರಹ್ಮಸಾಕ್ಷಾತ್ಕಾರ ಸಂದೇಶ.




ಚಿತ್ರಸೇನನೆಂಬ ಗಂಧರ್ವನು ತನ್ನ ನಿಜಾಂಗನೆಯೊಡನೆ ಪೂರ್ಣ ನಂದಹೋಗಿಯ ಪವಿತ್ರವನದಲ್ಲಿ ಮನ್ಮಥ ಕ್ರೀಡೆಯಾಡಿದ್ದು, ಶಾಪಕ್ಕೋಳಗಾಗಿ ಉಭಯರೂ ಭೂತಗಳಾದರು. ಸಿದ್ಧಲಿಂಗೇಶ್ವರರ ದರ್ಶನದಿಂದ ಶಾಪವಳಿದು ಗಂಧರ್ವರಾದರು.



ಕಲ್ಲೂರಿನ ಹೊಸ ಸೋಸೆಯು ಕೆರೆಗೆ ನೀರು ತರಲು ಹೋದಾಗ ಬರೀ ಬಿಂದಿಗೆಯು ನಡು ನೀರಿಗೆ ತೇಲಿ ಹೋಯಿತು. ಅತ್ತೆ ಬಯ್ಯುವಳೆಂದು ಚಿಂತಿಸಿ "ಸಿದ್ದಲಿಂಗಾ ನೀನೇಗತಿ" ಎನಲು ತೇಲಿ ಹೋದ ಬಿಂದಿಗೆಯು ಮರಳಿ ಬಂದಿತು. ಅತ್ತೆಯ ಬೈಗಳಿಂದ ಪಾರಾದಳು.



ಉಳುವಿಯಲ್ಲಿ ವೈಷ್ಣವ ಮತಾನುಯಾಯಿ ಜನಾರ್ಧನಜೀಯ ಮತ್ತು ಸಿದ್ದಲಿಂಗೇಶ್ವರ ಇವರಲ್ಲಿ ಗಂಗೋದ್ಭವದ ಬಗ್ಗೆ ವಾಗ್ವಾದ ಜನಾರ್ಧನಜೀಯು ವಾದದಲ್ಲಿ ಸೋತು ಸಿದ್ದಲಿಂಗೇಶ್ವರರಿಗೆ ತೊಂದರೆ ಕೊಡಲು ಪಿಶಾಚಿಯನ್ನು ಬಿಟ್ಟರು ಸ್ವಾಮಿಯ ಕೈಬೆರಳಿನ ಬಿಸಿಯು ಪಿಶಾಚಿಯನ್ನು ನಾಶ ಮಾಡಿತು.



ಜೀವನವನ್ನು ಪಾವನ ಮಾಡಿದ ಹರದನಹಳ್ಳಯ ಗುರು ಮಠಕ್ಕೆ ಸಿದ್ಧಲಿಂಗೇಶ್ವರರ ಸಂದರ್ಶನ ವೃದ್ದ ದಂಪತಿಗಳಾಧ ಮಲ್ಲಿಕಾರ್ಜುನ ಜ್ಞಾನಾಂಬೆಯರು ಮತ್ತು ಗುರುಗೋಸಲ ಚನ್ನಬಸವೇಶ್ವರರು ಪರಿವಾರದೊಂದಿಗೆ ಊರ ಬಾಗಿಲಿನಿಂದ ಅವರನ್ನು ವೈಭವದೊಂದಿಗೆ ಎದುರುಗೊಂಡರು.




ಸಿದ್ದಲಿಂಗೇಶ್ವರರ ಪಾದ ನೈಜಿತ ಪುಣ್ಯ ಕ್ಷೇತ್ರ ಸಿದ್ದಾಗಂಗಾ ತಿಗಳ ದೇಶದ ರೋಗ ಪೀಡಿತ ವೀರಣ್ಣಾರ್ಯನಿಗೆ "ಸಿದ್ದಗಂಗಾ ತೀರ್ಥ ಸ್ನಾನದಿಂದ ನಿನ್ನ ರೋಗವೆಲ್ಲವು ನಾಶವಾಗುತ್ತದೆ" ಎಂದು ಸಿದ್ದಲಿಂಗೇಶ್ವರರು ಅಪ್ಪಣೆ ಮಾಡಿದರು ಅದರಂತೆ ರೋಗ ಪರಿಹಾರವಾಯಿತು.



ಹಾಗಲವಾಡಿಯ ರಾಜ ಶಾಲಿನಾಯಕ ಹುಟ್ಟಿನಿಂದ ಕಡುಬಡವ ಸಿದ್ದಲಿಂಗೇಶ್ವರರ ಉಪಾಸಕ ಅವರ ಭಕ್ತಿಗೆ ಮೆಚ್ಚಿ ಸಿದ್ದಲಿಂಗೇಶ್ವರರು ಅಷ್ಟೈಶ್ವರ್ಯಗಳನ್ನು ಅನುಗ್ರಹಿಸಿದರು.



ತುಮಕೂರಿನ ಬಸವೇಶ್ವರಾಲಯದಲ್ಲಿ ಜಂಗಮರ ಸಂಗದಲ್ಲಿ ಸಿದ್ಧಲಿಂಗೇಶ್ವರ ಲಿಂಗಾರ್ಚನೆ ಸನ್ನಾಹ, ಕಡುಬೇಸಿಗೆಯಾದರೂ ತುಂಬೆ ಹೂವಿನಿಂದಲೇ ಲಿಂಗಾರ್ಚನೆ ಮಾಡಬೇಕೆಂದು ಒಬ್ಬ ಶರಣನ ಹಿರಿಯ ಬಯಕೆ, ಸಿದ್ದಲಿಂಗೇಶ್ವರರು ಆ ಶರಣನ ಮನದಣಿಯುವಂತೆ ತುಂಬೇ ಹೂವಿನ ಮಳೆಗರೆದರು.




ಸಿದ್ದಲಿಂಗೇಶ್ವರರಿಗೆ ಕುಣಿಗಲ್ಲಿನ ಲಿಂಗಣ್ಣೊಡೆಯನ ಕುಹಕ ಬಿನ್ನಹ, 2,000 ಎಳೆಗಾಯಿಯ ನೀರನ್ನು ತೆಗೆದುಕೊಳ್ಳಬೇಕೆನ್ನಲು, ಕಾಯಿಗಳು ಬರೇ ಬುರುಡೆಗಳಾದವು ಲಿಂಗಣ್ಣೊಡೆಯನು ಸ್ತಂಭನಾದನು. ದೋಷ ಪರಿಹಾರಕ್ಕೆ 12 ಕಂಡುಗದಕ್ಕಿಯ ಅನ್ನವನ್ನು ದಾಸೋಹ ಮಾಡಿಸಿದನು.

ಹೊಳಲು ಗುಂದದ ಮಾಯಾದೇವಿ ಕ್ಷೇತ್ರಕ್ಕೆ ಸಿದ್ದಲಿಂಗೇಶ್ವರರ ಸಂದರ್ಶನ, ಮಹಾಶಕ್ತಿ ಮಾಯಾದೇವಿಯು ಪರಂಜ್ಯೋತಿ ಸ್ವರೂಪಿಣಿ ಪಾರ್ವತಿಯ ಪ್ರತ್ಯಕ್ಷ ರೂಪವನ್ನು ಧರಿಸಿ, ಜಗದ್ವಿಖ್ಯಾತ ಶರಣಕುಲ ಮಣಿ ಮುಕುಟ ಸಿದ್ದಲಿಂಗೇಶ್ವರರನ್ನು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ಪಾದಪೂಜೆ ಮಾಡಿದಳು, ಜಗತ್ತಿಗೆಲ್ಲಾ ಆನಂದವಾಯಿತು.



ಸದ್ಭಕ್ತರ ಬಿನ್ನಹವನ್ನು ಮನ್ನಿಸಿ ಹುಲಿಯೂರು ದುರ್ಗಕ್ಕೆ ಸ್ವಾಮಿಗಳ ಆಗಮನ ನೀರಿನ ಬರ ಭಕ್ತರ ಬವಣೆಯನ್ನು ನೋಡಿ ಸಿದ್ದಲಿಂಗೇಶ್ವರರು ಕಲ್ಲರೆಯ ಕೆಳಗೆ, ಜಲವನ್ನು ಬರಿಸಿ ಗಂಗೆಯನ್ನು ಹರಿಸಿದರು.


ಕೆಸ್ತೂರಿನ ಸದ್ಭಕ್ತ ಸಂಗಪ್ಪ ಶೆಟ್ಟಿಯು ಮನೆಯಲ್ಲಿ ಸಿದ್ಧಲಿಂಗೇಶ್ವರ ಶಿವಪೂಜೆ ಶೆಟ್ಟಿಯು ಆಥಿತಿಯಾಗಿ ಉಳಿದು ಮಲಗಿದ್ದ ಶರಣೆಯೊಬ್ಬಳ ಮೂಗಿನಲ್ಲಿದ್ದ ವಜ್ರದ ಮೂಗುತಿಯನ್ನು ಶೆಟ್ಟಿಯು ಹೆಂಡತಿ ಕದ್ದಳು, ಮನೆಯಲ್ಲಿದ್ದ ಎಲ್ಲಾ ಹೆಂಗಸ ಶರಣೆಯರು ಸಿದ್ದಲಿಂಗೇಶ್ವರರೆದುರಿಗೆ ಕರೆಯಿಸಿ ಕದ್ದಿಲ್ಲವೆಂದು ಕೈ ಎತ್ತಿ ಹೇಳಿರೆಂದು ಕೇಳಲು ಶೆಟ್ಟಿಯ ಹೆಂಡತಿಯ ಎತ್ತಿದ ಕೈಯು ಹಾಗೆಯೇ ನಿಂತಿತು.



ತುಮಕೂರು ತಾಲ್ಲೂಕು, ಹೊನ್ನುಡಿಕೆಯಲ್ಲಿ ಭಕ್ತ ಮಹಿಳೆಯು ಗಡಿಗೆಯನ್ನು ಒಲೆಯ ಮೇಲಿರಿಸಿ ಅಡುಗೆ ಮಾಡುತ್ತಿದ್ದಾಗ ಗಡಿಗೆ ಸೀಳು ಬಿಟ್ಟಿತು. ಸಿದ್ದಲಿಂಗೇಶ್ವರಾ ಎನಲು ಸ್ವಾಮಿಗಳವರು ಪ್ರತ್ಯಕ್ಷವಾಗಿ ಆಭಯವನ್ನಿತ್ತರು. ಗಡಿಗೆಯು ಕೂಡಿ ಕೊಂಡಿತು. ಅಡಿಗೆ ತಯಾರಾಯಿತು.



ಬಂಡಿಹಳ್ಳಿ ಗವಿಯಲ್ಲಿ ಏಳು ಹೆಡೆ ಸರ್ಪದ ವಾಸ ಪ್ರಾಣಿ ಪಕ್ಷಿಗಳ ಗ್ರಾಸಬಾಲವನ್ನು ಸುತ್ತಿ ಪೀಠವನ್ನು ಮಾಡಿ ಸಿದ್ದಲಿಂಗೇಶ್ವರರಿಗೆ ನಮಸ್ಕರಿಸಿ ಪೀಠದ ಮೇಲೆ ಕುಳ್ಳಿರಿಸಿಕೊಂಡು ಹೆಡೆಯ ಕೊಡೆ ಹಿಡಿಯಿತು. ಸ್ವಾಮಿಗಳು ಜನರು ಹೆದರುವರು ನೀನು ಭೂಲೋಕದಲ್ಲಿರಬೇಡ ಎಂದೆನಲು ಪಣಿರಾಜನು ಗುಹೆಗೆ ಹೋಗಿ ಮಾಯವಾದನು.



ಸಿದ್ದಲಿಂಗೇಶ್ವರರಿಗೆ ಮತ್ತು ಜಂಗಮ ಗುಂಪಿಗೆ ಜಲ ಪ್ರವಾಹವು ಅಡ್ಡಲಾಗಿ ಹರಿಯುತ್ತಿತ್ತು. ಮುಂದೆ ಹೋಗಲು ತಮಗೆ ದಾರಿಯನ್ನು ಬಿಡಬೇಕೆಂದು ಸಿದ್ದಲಿಂಗೇಶ್ವರರು ಆಜ್ಞಾಪಿಸಿದರು. ಮೆಲ್ಲ ಮೆಲ್ಲನೆ ಜಲ ಪ್ರವಾಹ ಇಳಿದು ಶಿವಯೋಗಿಗಳೆಲ್ಲರಿಗೂ ನದಿಯು ದಾರಿ ಮಾಡಿಕೊಟ್ಟಿತು.



ಕಗ್ಗೆರೆಯಲ್ಲಿ ಉಜ್ವಲ 12 ವರ್ಷ ಶಿವಯೋಗ ನಿದ್ರೆಯಾದ ಮೇಲೆ ಎಡೆಯೂರಿಗೆ ದಯಮಾಡಿಸಲು ಸಿದ್ದಲಿಂಗೇಶ್ವರರಿಗೆ ಆಹ್ವಾನ ನೀಡಲಾಯಿತು. ಕದಂಭ ನದಿ ತೀರದ ಗವೀಮಠದ ಬಿಡಾರದಲ್ಲಿ ಶಿವಾನುಭವ ಗೋಷ್ಟಿ ನಡೆಸಿದಾಗ ಭೋರ್ಗರೆದ ಸಿಡಿಲು ಶ್ರೀ ಸಿದ್ದಲಿಂಗೇಶ್ವರರಿಗೆ ಪ್ರದಕ್ಷಣೆ ಮಾಡಿ ಅವರಾದೇಶದಂತೆ ಭೂಮಿಯಲ್ಲಿ ಅಡಗಿಕೊಂಡ ಸ್ಮಾರಕ ಗವೀ ಮಠ.



ಸಿದ್ದಲಿಂಗೇಶ್ವರರಿಗೆ 82 ವರ್ಷ ವಯಸ್ಸಯ ದೈಹಿಕ ಜೀವನದ ವಿರಾಮ ಶಿಷ್ಯ ಬೋಳಬಸವಾರ್ಯರಿಗೆ ನಿರಂಜನ ಪೀಠಾಧಿಕಾರ ಸ್ವಯಂ ನಿರೂಪಿತ ಷಟ್ಸ್ಥಲ ಜ್ಞಾನ ಸಾರಾಂಮೃತ ಗ್ರಂಥ, ಆಶೀರ್ವಾದ, ಚಿಟ್ಟಿಗದೇವರು ಎರಡು ಬಗೆಯ ಜಡೆಯ ಹಿರಿಯರು ಕಟ್ಟಿಸಿದ ಶಿಲಾ ಸಮಾದಿಯಲ್ಲಿ ಶಿವಯೋಗ ನಿರ್ಧಾರ.



ಎಡೆಯೂರಿನಲ್ಲಿ ಕ್ರಿ.ಶ. 1470 ರಲ್ಲಿ ಯುಗಾದಿಯ ಏಳನೆಯ ದಿವಸ ಅಭಿಜನ್ ಮೊಹೋರ್ತದಲ್ಲಿ ಸಿದ್ದಲಿಂಗೇಶ್ವರರ ನಿರ್ವಿಕಲ್ಪ ಶಿವಯೋಗ ಸಮಾಧಿ, ಏಳುನೂರು ವಿರಕ್ತರಿಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಧರ್ಮ ಪ್ರಚಾರ, ಕರ್ತವ್ಯ ಪರಿಪಾಲನೆ ಆದೇಶ, ಇಷ್ಟಿತಾರ್ಥ ಫಲಗಳನ್ನೀಯುವ ಜೀವಂತ ಕ್ಷೇತ್ರ ಎಡೆಯೂರು.

ಸಂಖ್ಯೆ: ಸಿಆರ್ ಇಎಸ್‌ಟಿ (1) 11/2010–11 ದಿನಾಂಕ: 21–02–2010

ಗೆ,
ಮಾನ್ಯ ಧಾರ್ಮಿಕ ದತ್ತಿ ಆಯುಕ್ತರು,
ಶ್ರೀ ಮಹದೇಶ್ವರ ವಾರ್ತಾ ಭವನ,
ಆಲೂರು ವೆಂಕಟರಾವ್ ರೋಡ್,
ಚಾಮರಾಜಪೇಟೆ, ಬೆಂಗಳೂರು–18.

ಮಾನ್ಯರೇ,

ವಿಷಯ: ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಗೆ ಸೇರಿದ ಧಾರ್ಮಿಕ ಸಂಸ್ಥೆಗಳ ಸಾಫ್ಟ್‌ವೇರ್ ಕನ್ನಡ ಭಾಷೆಯಲ್ಲಿ ಅಳವಡಿಸುವ ಬಗ್ಗೆ.
ಉಲ್ಲೇಖ: ತಮ್ಮ ಕಛೇರಿ ಪತ್ರ ಸಂಖ್ಯೆ ಸಿಎನ್‌ಅರ್ 1/ಸಿಅರ್ ಅಭಿಯಾನ 16/2008–09 ದಿನಾಂಕ: 8–12–2010.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಯ ದತ್ತಿ ಇಲಾಖೆಗೆ ಸೇರಿದ ಧಾರ್ಮಿಕ ಸಂಸ್ಥೆಗಳ ಸಾಫ್ಟ್ ವೇರ್ ಕನ್ನಡ ಭಾಷೆಯಲ್ಲಿ ಅಳವಡಿಸುವ ಕುರಿತಂತೆ ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇರುವ ಮಾಹಿತಿಗಳನ್ನು ತಯಾರಿಸಿ, ದೃಢೀಕರಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮಾನ್ಯರ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

50) ಮಾನ್ಯ ಧಾರ್ಮಿಕ ದತ್ತಿ ಆಯುಕ್ತರು, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ ಸಿಎನ್‌ಅರ್ 1/ಸಿಅರ್ ಅಭಿಯಾನ 16/2008–09 ದಿನಾಂಕ: 8–12–2010 ರ ಪ್ರಕಾರ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ಸೇರಿದ ಧಾರ್ಮಿಕ ಸಂಸ್ಥೆಗಳ ಸಾಫ್ಟ್‌ವೇರ್ ಕನ್ನಡ ಭಾಷೆಯಲ್ಲಿ ಅಳವಡಿಸುವ ಕುರಿತಂತೆ ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರದ ಮಾಹಿತಿಗಳನ್ನು ತಯಾರಿಸಿ ಪ್ರತಿ ಪುಟವನ್ನು ದೃಡೀಕರಿಸಿ ಕಳುಹಿಸಿಕೊಡಲು ತಿಳಿಸಿರುವ ಮೇರೆಗೆ ಕ್ಷೇತ್ರದ ಮಾಹಿತಿಗಳೊಂದಿಗೆ ಪತ್ರ ತಮ್ಮ ಸಹಿಗಾಗಿ ಸಲ್ಲಿಸಿದೆ.

51) ಅಧೀಕ್ಷಕರು )